بِسۡمِ اللّٰہِ الرَّحۡمٰنِ الرَّحِیۡمِ    نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ    وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ ಬದರ್ ವಾರಪತ್ರಿಕೆ

WEEKLY BADAR QADIAN KANNADA

ಸಂಪಾದಕರು:
ತಾರಿಖ್ ಅಹ್ಮದ್ ಇದ್ರೀಸ್.


## ಅಲ್ಲಾಹನ ಉಪದೇಶ

### ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿರಿ

اِنَّ اللّٰہَ یَاۡمُرُکُمۡ اَنۡ تُؤَدُّوا الۡاَمٰنٰتِ اِلٰۤی اَہۡلِہَا ۙ وَ اِذَا حَکَمۡتُمۡ بَیۡنَ النَّاسِ اَنۡ تَحۡکُمُوۡا بِالۡعَدۡلِ ؕ اِنَّ اللّٰہَ نِعِمَّا یَعِظُکُمۡ بِہٖ ؕ اِنَّ اللّٰہَ کَانَ سَمِیۡعًۢا بَصِیۡرًا

(ಅನ್ನಿಸಾಅ್ : 59)

ಅಂದರೆ: ಖಂಡಿತವಾಗಿಯೂ ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ವಹಿಸಿಕೊಡಬೇಕೆಂದೂ ಜನರಡೆಯಲ್ಲಿ ನೀವು ತೀರ್ಪು ನೀಡುವಾಗ ನ್ಯಾಯಯುತವಾಗಿ ತೀರ್ಪು ನೀಡಬೇಕೆಂದೂ ಅಲ್ಲಾಹನು ನಿಮ್ಮೊಡನೆ ಆಜ್ಞಾಪಿಸುತ್ತಾನೆ. ಅಲ್ಲಾಹನು ನಿಮಗೆ ಉಪದೇಶಿಸುವಂಥದ್ದು ಅತ್ಯುತ್ತಮವಾದುದು. ನಿಸ್ಸಂದೇಹವಾಗಿಯೂ ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಕಾಣುವವನೂ ಆಗಿದ್ದಾನೆ.


ಸಂಪುಟ: 07, ಸಂಚಿಕೆ: 33, 13 ಆಗಸ್ಟ್ 2026, 13 ಝುಹೂರ್ 1405 ಹಿಜರಿ ಶಮ್‌ಸಿ,
29 ಸಫ಼ರ್ 1448 ಹಿಜರಿ ಖಮರಿ. (www.akhbarbadr.in)




## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ


### ತನ್ನ ಮುಸ್ಲಿಮ್ ಸಹೋದರನನ್ನು ಕೀಳಾಗಿ ಕಾಣುವುದು ಅಥವಾ ತಿರಸ್ಕರಿಸುವುದೇ ಒಬ್ಬ ವ್ಯಕ್ತಿಯ ದುಷ್ಟತನಕ್ಕೆ ಸಾಕಾದ ಕಾರಣವಾಗಿದೆ

عَنۡ أَبِي مُوسَى ، عَنِ النَّبِيِّ صَلَّى اللّٰهُ عَلَيۡهِ وَسَلَّمَ ، قَالَ: " إِنَّ الۡخَازِنَ الۡمُسۡلِمَ الۡأَمِينَ الَّذِي يُنۡفِذُ، وَرُبَّمَا قَالَ: يُعۡطِي مَا أُمِرَ بِهِ فَيُعۡطِيهِ كَامِلًا مُوَفَّرًا، طَيِّبَةً بِهِ نَفۡسُهُ، فَيَدۡفَعُهُ إِلَى الَّذِي أُمِرَ لَهُ بِهِ أَحَدُ الۡمُتَصَدِّقَيۡنِ ".

ಹಝ್ರತ್ ಅಬೂ ಹುರೈರಾ(ರ) ಅವರು ವರದಿ ಮಾಡಿರುವಂತೆ, ಹಝ್ರತ್ ಪೈಗಂಬರ್(ಸ) ಅವರು ಹೀಗೆ ಉಪದೇಶಿಸಿದರು: ಅಮಾನತ್ತುಗಳು ನಿರ್ಲಕ್ಷ್ಯಕ್ಕೊಳಗಾಗಿ ನಾಶವಾಗತೊಡಗಿದಾಗ, ಖಿಯಾಮತ್ತಿನ (ಅಂತಿಮ ನ್ಯಾಯದಿನದ) ನಿರೀಕ್ಷೆ ಮಾಡಿರಿ. ಆಗ ಒಬ್ಬರು ವಿನಯಪೂರ್ವಕವಾಗಿ ಕೇಳಿದರು: ಯಾ ರಸೂಲಲ್ಲಾಹ್(ಸ)! ಅಮಾನತ್ತುಗಳು ನಾಶವಾಗುವುದೆಂದರೆ ಅದರ ಅರ್ಥವೇನು? ಅದಕ್ಕೆ ಹಝ್ರತ್ ಪೈಗಂಬರ್(ಸ) ಉತ್ತರಿಸಿದರು: ಅರ್ಹತೆಯಿಲ್ಲದವರಿಗೂ, ಯೋಗ್ಯತೆಯಿಲ್ಲದವರಿಗೂ ಆಡಳಿತ ಹಾಗೂ ಜವಾಬ್ದಾರಿಯ ಹುದ್ದೆಗಳನ್ನು ಒಪ್ಪಿಸಲ್ಪಟ್ಟಾಗ, ಖಿಯಾಮತ್ತಿನ ನಿರೀಕ್ಷೆ ಮಾಡಿರಿ. **(ಬುಖಾರಿ ಕಿತಾಬುರ್ರಿಖಾಖ್, ಬಾಬ್ ರಫಾ ಅಲ್‌ಅಮಾನತು, ಹದೀಸ್–6469)**

عَنۡ أَبِي هُرَيۡرَةَ رَضِيَ اللّٰهُ عَنۡهُ، قَالَ: قَالَ رَسُولُ اللّٰهِ صَلَّى اللّٰهُ عَلَيۡهِ وَسَلَّمَ: " إِذَا ضُيِّعَتِ الۡأَمَانَةُ، فَانۡتَظِرِ السَّاعَةَ "، قَالَ: كَيۡفَ إِضَاعَتُهَا يَا رَسُولَ اللّٰهِ؟ قَالَ: " إِذَا أُسۡنِدَ الۡأَمۡرُ إِلَى غَيۡرِ أَهۡلِهِ فَانۡتَظِرِ السَّاعَةَ ".

ಹಝ್ರತ್ ಅಬೂ ಮೂಸಾ(ರ) ಅವರು ವರದಿ ಮಾಡಿರುವಂತೆ, ಹಝ್ರತ್ ಪೈಗ್ಗಂಬರ್(ಸ) ಅವರು ಹೀಗೆ ಉಪದೇಶಿಸಿದರು: ಮುಸ್ಲಿಮರ ಆಸ್ತಿಪಾಸ್ತಿಗಳ ಮೇಲ್ವಿಚಾರಣೆಗೆ ಒಬ್ಬ ಮುಸ್ಲಿಮನನ್ನು ನೇಮಿಸಲಾಗಿದ್ದು, ಅವನು ವಿಶ್ವಾಸಾರ್ಹನಾಗಿಯೂ (ಅಮೀನ್), ಪ್ರಾಮಾಣಿಕನಾಗಿಯೂ (ದಿಯಾನತ್‌ದಾರನಾಗಿಯೂ) ಇದ್ದು, ತನಗೆ ನೀಡಲ್ಪಟ್ಟ ಆದೇಶಗಳನ್ನು ನಿಷ್ಠೆಯಿಂದ ಮತ್ತು ಸರಿಯಾಗಿ ಅನುಷ್ಠಾನಗೊಳಿಸುತ್ತಿದ್ದರೆ, ಹಾಗೂ ಯಾರಿಗೆ ಏನನ್ನಾದರೂ ನೀಡುವಂತೆ ಅವನಿಗೆ ಆದೇಶಿಸಲಾಗುತ್ತದೆಯೋ, ಅವರಿಗೆ ಅದನ್ನು ಸಂತೋಷದಿಂದ, ಹರ್ಷಚಿತ್ತದಿಂದ ಮತ್ತು ಅದು ಅವರ ಹಕ್ಕು ಎಂಬ ಭಾವನೆಯೊಂದಿಗೆ ಪೂರ್ಣವಾಗಿ ನೀಡುತ್ತಿದ್ದರೆ, ಅಂತಹ ವ್ಯಕ್ತಿಯೂ ಸಹ ಕಾರ್ಯರೂಪದಲ್ಲಿ ಸದಖಾ ಮಾಡುವವನಂತೆಯೇ ಸದಖಾ ಮಾಡಿದವನ ಪುಣ್ಯಕ್ಕೆ ಪಾತ್ರನಾಗುತ್ತಾನೆ. **(ಮುಸ್ಲಿಮ್ ಕಿತಾಬುಝ್ಝಕಾತ್)**



## ಹಝ್ರತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆ

### ಅಲ್ಲಾಹನು ಒಪ್ಪಿಸಿರುವ ಎಲ್ಲಾ ಅಮಾನತ್ತುಗಳನ್ನು, ಈಮಾನೀ ಒಡಂಬಡಿಕೆಗಳನ್ನು, ಹಾಗೆಯೇ ಸಾಧ್ಯವಾದ ಮಟ್ಟಿಗೆ ಸೃಷ್ಟಿಯ ಎಲ್ಲಾ ಅಮಾನತ್ತುಗಳು ಮತ್ತು ಪರಸ್ಪರದ ಒಡಂಬಡಿಕೆಗಳನ್ನು ಸಂಪೂರ್ಣ ನಿಷ್ಠೆಯಿಂದ ಕಾಪಾಡಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರು ಹೀಗೆ ಹೇಳುತ್ತಾರೆ:

ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ಅಲ್ಲಾಹನು ತಖ್ವಾವನ್ನು (ದೇವಭಯ ಮತ್ತು ಧರ್ಮನಿಷ್ಠೆಯನ್ನು) 'ವಸ್ತ್ರ'ವೆಂದು ಕರೆದಿದ್ದಾನೆ. ಆದ್ದರಿಂದಲೇ 'ಲಿಬಾಸುತ್–ತಖ್ವಾ' ಎಂಬುದು ಪವಿತ್ರ ಖುರ್‌ಆನ್‌ನ ಪದವಾಗಿದೆ. ಇದರ ಮೂಲಕ ಆತ್ಮಿಕ ಸೌಂದರ್ಯ ಮತ್ತು ಆತ್ಮಿಕ ಅಲಂಕಾರವು ತಖ್ವಾದಿಂದಲೇ ಉಂಟಾಗುತ್ತದೆ ಎಂಬುದನ್ನು ಸೂಚಿಸಲಾಗಿದೆ. ತಖ್ವಾ ಎಂದರೆ, ಮನುಷ್ಯನು ಅಲ್ಲಾಹನು ಒಪ್ಪಿಸಿರುವ ಎಲ್ಲಾ ಅಮಾನತ್ತುಗಳನ್ನು, ಈಮಾನೀ ಒಡಂಬಡಿಕೆಗಳನ್ನು, ಹಾಗೆಯೇ ಸಾಧ್ಯವಾದ ಮಟ್ಟಿಗೆ ಸೃಷ್ಟಿಯ ಎಲ್ಲಾ ಅಮಾನತ್ತುಗಳು ಮತ್ತು ಪರಸ್ಪರದ ಒಡಂಬಡಿಕೆಗಳನ್ನು ಸಂಪೂರ್ಣ ನಿಷ್ಠೆಯಿಂದ ಕಾಪಾಡಬೇಕು. ಅವುಗಳ ಅತಿ ಸೂಕ್ಷ್ಮವಾದ ಅಂಶಗಳನ್ನೂ ಸಾಧ್ಯವಾದಷ್ಟೂ ಪಾಲಿಸಬೇಕು. ಇಲ್ಲಿ 'ಅಮಾನತ್' ಎಂದರೆ, ಪರಿಪೂರ್ಣ ಮಾನವನಿಗೆ ಸರ್ವಶಕ್ತನಾದ ಅಲ್ಲಾಹನು ಅನುಗ್ರಹಿಸುವ ಎಲ್ಲಾ ಶಕ್ತಿಗಳು, ಬುದ್ಧಿ, ಜ್ಞಾನ, ಹೃದಯ, ಪ್ರಾಣ, ಇಂದ್ರಿಯಗಳು, ಭಯ, ಪ್ರೀತಿ, ಗೌರವ, ಮಾನ–ಮರ್ಯಾದೆ ಹಾಗೂ ಆತ್ಮಿಕ ಮತ್ತು ದೈಹಿಕ ಎಲ್ಲ ವಿಧದ ಅನುಗ್ರಹಗಳು ಸೇರಿವೆ. ನಂತರ ಆ ಪರಿಪೂರ್ಣ ಮಾನವನು ಈ ಖುರ್‌ಆನಿನ ಆಜ್ಞೆಯಂತೆ: **ಇನ್ನಲ್ಲಾಹ ಯಅ್‌ಮುರುಕುಮ್ ಅನ್‌ತವದ್ದುಲಾ ಅಮಾನಾತಿ ಇಲಾ ಅಹ್‌ಲಿಹಾ–** 'ನಿಶ್ಚಯವಾಗಿ ಅಲ್ಲಾಹ್ ನಿಮಗೆ ಆಜ್ಞಾಪಿಸುವುದೇನೆಂದರೆ, ಅಮಾನತ್ತುಗಳನ್ನು ಅವುಗಳ ಹಕ್ಕುದಾರರಿಗೆ ಒಪ್ಪಿಸಿರಿ.' ಈ ಎಲ್ಲ ಅಮಾನತ್ತುಗಳನ್ನು ಮತ್ತೆ ಸರ್ವಶಕ್ತನಾದ ಅಲ್ಲಾಹನಿಗೆ ಹಿಂದಿರುಗಿಸುತ್ತಾನೆ; ಅಂದರೆ, ತನ್ನ ಅಸ್ತಿತ್ವವನ್ನೇ ಅಲ್ಲಾಹ್‌ನಲ್ಲಿ ಲೀನಗೊಳಿಸಿ, ತನ್ನ ಸಂಪೂರ್ಣ ಜೀವನವನ್ನು ಅವನ ಮಾರ್ಗದಲ್ಲಿ ಸಮರ್ಪಿಸುತ್ತಾನೆ. ಈ ಅತ್ಯುನ್ನತ, ಅತ್ಯಂತ ಪರಿಪೂರ್ಣ ಮತ್ತು ಸಂಪೂರ್ಣ ಗುಣವು ನಮ್ಮ ಯಜಮಾನ, ನಮ್ಮ ನಾಯಕ, ನಮ್ಮ ಮಾರ್ಗದರ್ಶಕರಾದ ಉಮ್ಮೀ ನಬಿ, ಸತ್ಯವಂತ ಮತ್ತು ಅಲ್ಲಾಹ್‌ನಿಂದ ಸತ್ಯವೆಂದು ದೃಢೀಕರಿಸಲ್ಪಟ್ಟ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಪವಿತ್ರ ಜೀವನದಲ್ಲೇ ಅತ್ಯುನ್ನತ ರೀತಿಯಲ್ಲಿ ವ್ಯಕ್ತವಾಗಿತ್ತು."

**(ಆಯಿನಾ ಕಮಾಲಾತ್–ಎ–ಇಸ್ಲಾಮ್, ಪುಟಗಳು 161–162)**

## ತಫ್ಸೀರ್ ಕಬೀರ್‌ನಿಂದ ಉಲ್ಲೇಖ

### ಈ ಅಮಾನತ್ ನಿಮ್ಮ ವಶಕ್ಕೆ ಬಂದಾಗ, ಅದರಲ್ಲಿ ಎಂದಿಗೂ ದ್ರೋಹ ಮಾಡಬಾರದು

ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ಸೂರತುಲ್ ಮುಮಿನೂನ್‌ನ ಈ ಆಯತ್ **ವಲ್ಲಝೀನ ಹುಮ್ ಲಿಅಮಾನಾತಿಹಿಮ್ ವ ಅಹ್‌ದಿಹಿಮ್ ರಾಊನ್** "ತಮ್ಮ ಅಮಾನತ್ತುಗಳನ್ನೂ (ಹೊಣೆಗಾರಿಕೆಗಳನ್ನೂ) ಹಾಗೂ ತಮ್ಮ ಒಡಂಬಡಿಕೆಗಳನ್ನೂ ನಿಷ್ಠೆಯಿಂದ ಕಾಪಾಡುವವರು." ನ ತಫ್ಸೀರ್‌ನಲ್ಲಿ ಹೀಗೆ ವಿವರಿಸುತ್ತಾರೆ:

ಸಹಾಬಾ (ರಝಿಯಲ್ಲಾಹು ತಆಲಾ ಅನ್ಹುಮ್) ಅವರು ಈ ದೈವಿಕ ಉಪದೇಶವನ್ನು ಎಷ್ಟು ಅದ್ಭುತವಾಗಿ ಆಚರಣೆಯಲ್ಲಿ ತೋರಿಸಿದರು ಎಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಕ್ರೈಸ್ತರ ಪ್ರಮುಖ ಕೇಂದ್ರವಾಗಿದ್ದ ಹಿಮ್ಸ್ ನಗರವು ಮುಸ್ಲಿಮರ ಅಧೀನಕ್ಕೆ ಬಂದಾಗ, ಅಲ್ಲಿನ ನಿವಾಸಿಗಳಿಂದ ಸರ್ಕಾರದ ತೆರಿಗೆಯಾಗಿ ಅಪಾರ ಪ್ರಮಾಣದ ಧನವನ್ನು ಸಂಗ್ರಹಿಸಲಾಯಿತು. ಆದರೆ, ಯುದ್ಧದ ಪರಿಸ್ಥಿತಿಗಳ ಕಾರಣದಿಂದ ಮುಸ್ಲಿಮರು ಆ ನಗರವನ್ನು

*(ಪುಟ ಸಂಖ್ಯೆ–09 ರಲ್ಲಿ ಮುಂದುವರಿಸಲಾಗಿದೆ)*

**ಅಹ್ಮದಿಯಾ ವಾರ್ತೆ**

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

# ಅಹ್ಲುಲ್-ಖುರ್‌ಆನ್ ಮತ್ತು ಅಹ್ಲುಲ್-ಹದೀಸ್ ನಡುವಿನ ಭಿನ್ನಾಭಿಪ್ರಾಯಗಳು ಮತ್ತು ಹಕಮ್ ವ ಅದಲ್ ಆಗಿ ಆಗಮಿಸಿದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರ ವಿಶ್ವಾಸವರ್ಧಕ ನ್ಯಾಯಸಮ್ಮತ ತೀರ್ಪು

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಸೌದಿ ಅರೇಬಿಯಾದ ಕುರಿತು ವ್ಯಾಪಕವಾಗಿ ಹರಿದಾಡುತ್ತಿದ್ದ ಸುದ್ದಿಗಳ ಪ್ರಕಾರ, ಸೌದಿ ಸರ್ಕಾರವು ಕಾನೂನು ರಚನೆಯ ವಿಷಯದಲ್ಲಿ "ಮುತವಾತಿರ್" ಹದೀಸುಗಳ ಹೊರತಾಗಿ ಉಳಿದ ಎಲ್ಲಾ ಹದೀಸುಗಳನ್ನು ಅನುಮಾನಾಸ್ಪದವೆಂದು ಪರಿಗಣಿಸಿ ಅವುಗಳನ್ನು ತಿರಸ್ಕರಿಸಿದೆ ಎಂದು ಪ್ರಚಾರ ಮಾಡಲಾಯಿತು. ದುರದೃಷ್ಟವಶಾತ್, ಕೆಲವರು ತಮ್ಮನ್ನು ಮುಸ್ಲಿಂ ಧರ್ಮಪಂಡಿತರೆಂದು ಕರೆದುಕೊಳ್ಳುವವರೂ ಹಾಗೂ ಅವರ ಬೆಂಬಲಿಗರೂ, ಸಾಮಾಜಿಕ ಮಾಧ್ಯಮಗಳಲ್ಲಿ ಸಾಮಾನ್ಯ ಮುಸ್ಲಿಮರ ಧಾರ್ಮಿಕ ಭಾವನೆಗಳನ್ನು ಕೆರಳಿಸಲು ಮತ್ತು ಅಗ್ಗದ ಜನಪ್ರಿಯತೆ ಪಡೆಯಲು ಇಂತಹ ಪರಿಶೀಲಿಸದ ಸುದ್ದಿಗಳನ್ನು ಹರಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ವಾಸ್ತವವಾಗಿ, ಕೆಲವು ವರ್ಷಗಳ ಹಿಂದೆ ಸೌದಿ ಅರೇಬಿಯಾ ತನ್ನ ದೇಶದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ವೇಗಗೊಳಿಸುವ ಉದ್ದೇಶದಿಂದ "ವಿಷನ್ 2030" ಎಂಬ ಸಮಗ್ರ ಯೋಜನೆಯನ್ನು ರೂಪಿಸಿತು. ಅದರ ಮುಖ್ಯ ಉದ್ದೇಶವೆಂದರೆ, ಕೇವಲ ತೈಲ ಆದಾಯದ ಮೇಲೆ ಅವಲಂಬಿತವಾಗಿರದೆ, ದೇಶವನ್ನು ಬಲಿಷ್ಠ ಆರ್ಥಿಕ ನೆಲೆಯ ಮೇಲೆ ಸ್ಥಾಪಿಸಲು ಸಾಧ್ಯವಾಗುವ ಪರ್ಯಾಯ ಮಾರ್ಗಗಳನ್ನು ಅಭಿವೃದ್ಧಿಪಡಿಸುವುದು. ಈ ಯೋಜನೆಯಡಿಯಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಹೂಡಿಕೆ ಹೆಚ್ಚಿಸುವುದು, ಆಧುನಿಕ ನಗರಗಳ ನಿರ್ಮಾಣ, ಮನರಂಜನಾ ಕೇಂದ್ರಗಳ ಸ್ಥಾಪನೆ, ಮಹಿಳೆಯರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸುವುದು, ಹಾಗೂ ಅವರಿಗೆ ಸಮಾಜದಲ್ಲಿ ಹೆಚ್ಚಿನ ಅವಕಾಶಗಳನ್ನು ಒದಗಿಸುವುದು ಮುಂತಾದ ಅನೇಕ ಸುಧಾರಣಾ ಕಾರ್ಯಕ್ರಮಗಳು ಸೇರಿದ್ದವು. ಇದರೊಂದಿಗೆ ಕೆಲವು ಧಾರ್ಮಿಕ ಸುಧಾರಣೆಗಳನ್ನೂ ಪ್ರಸ್ತಾಪಿಸಲಾಯಿತು. ಅವುಗಳಲ್ಲಿ ಒಂದು, ಕಾನೂನು ರೂಪಿಸುವ ಸಂದರ್ಭದಲ್ಲಿ ಪವಿತ್ರ ಕುರ್‌ಆನ್ ಜೊತೆಗೆ ಮುತವಾತಿರ್ ಹದೀಸುಗಳಿಗೆ ಮುಖ್ಯ ಸ್ಥಾನ ನೀಡಬೇಕು ಹಾಗೂ ಹದೀಸೇ ಆಹಾದ್ ಮತ್ತು ಖಬರ್ ಹದೀಸುಗಳನ್ನು ತುಲನಾತ್ಮಕವಾಗಿ ಕೆಳಮಟ್ಟದ ಸಾಕ್ಷ್ಯವೆಂದು ಪರಿಗಣಿಸಬೇಕು ಎಂಬ ವಿಚಾರವೂ ಸೇರಿತ್ತು.

ಈ ವಿಷಯದಲ್ಲಿ ಸೌದಿ ಸರ್ಕಾರವು ನಿಖರವಾಗಿ ಏನು ಹೇಳಿತು, ಅಥವಾ ಅದನ್ನು ಆಧರಿಸಿ ಕೆಲವರು ಯಾವ ರೀತಿಯ ಪ್ರಚಾರ ನಡೆಸುತ್ತಿದ್ದಾರೆ ಎಂಬುದನ್ನು ಇಲ್ಲಿ ಚರ್ಚಿಸುವ ಉದ್ದೇಶ ನಮ್ಮದಲ್ಲ. ನಮ್ಮ ಉದ್ದೇಶವೇನೆಂದರೆ, ಈ ಯುಗದಲ್ಲಿ ಅಲ್ಲಾಹ್ ತಆಲಾ ಅವರಿಂದ ಹಕಮ್ ವ ಅದಲ್ ಆಗಿ ಕಳುಹಿಸಲ್ಪಟ್ಟ ಸಯ್ಯಿದನಾ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ, ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರು ಪವಿತ್ರ ಖುರ್‌ಆನ್, ಸುನ್ನತ್ ಮತ್ತು ಹದೀಸುಗಳ ಮೂಲಕ ಹಿದಾಯತ್ ಪಡೆಯುವ ಕುರಿತು ನೀಡಿದ ದಿವ್ಯ ಮಾರ್ಗದರ್ಶನವನ್ನು ಪ್ರಸ್ತುತಪಡಿಸುವುದಾಗಿದೆ. ಉಮ್ಮತ್-ಎ-ಮುಹಮ್ಮದಿಯ್ಯಾ ಯಾವೆಲ್ಲ ಸಂದರ್ಭಗಳಲ್ಲಿ ಗೊಂದಲಕ್ಕೆ ಒಳಪಟ್ಟಿದೆಯೋ, ಅಥವಾ ಯಾವೆಲ್ಲ ವಿಷಯಗಳಲ್ಲಿ ಸ್ಪಷ್ಟ ಮಾರ್ಗದರ್ಶನದ ಅಗತ್ಯ ಉಂಟಾಗಿದೆಯೋ, ಅಲ್ಲಾಹ್ ತಆಲಾ ಅವರ ಅನುಗ್ರಹದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರು ಸದಾ ಸತ್ಯಸಂಧವಾದ ಮತ್ತು ಸಮತೋಲನಯುತ ಮಾರ್ಗದರ್ಶನವನ್ನು ನೀಡಿರುವುದು ಇತಿಹಾಸದ ಸತ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರ ಕಾಲದಲ್ಲಿಯೇ ಅಹ್ಲುಲ್-ಖುರ್‌ಆನ್ ಎಂಬ ಚಳವಳಿ ಅಸ್ತಿತ್ವಕ್ಕೆ ಬಂದಿತ್ತು. ಆ ಚಳವಳಿಯ ಪ್ರಮುಖ ನಾಯಕರಲ್ಲಿ ಅಬ್ದುಲ್ಲಾ ಚಕ್ರಾಲವಿ ಸಾಹಿಬ್ ಮತ್ತು ಗುಲಾಮ್ ಅಹ್ಮದ್ ಪರ್ವೇಜ್ ಸಾಹಿಬ್ ಪ್ರಮುಖರಾಗಿದ್ದರು. ಆ ಸಮಯದಲ್ಲಿ ಅಹ್ಲುಲ್-ಖುರ್‌ಆನ್ ಪಂಡಿತರು ಮತ್ತು ಅಹ್ಲುಲ್-ಹದೀಸ್ ಉಲಮಾಗಳ ನಡುವೆ ಆಗಾಗ್ಗೆ ಧಾರ್ಮಿಕ ಚರ್ಚೆಗಳು (ಮುನಾಝರಾ) ನಡೆಯುತ್ತಿದ್ದವು. ಅವುಗಳಲ್ಲಿ ವಿಶೇಷವಾಗಿ ಕ್ರಿ.ಶ. 1902ರಲ್ಲಿ ಅಬ್ದುಲ್ಲಾ ಚಕ್ರಾಲವಿ ಸಾಹಿಬ್ ಮತ್ತು ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಸಾಹಿಬ್ ಅವರ ನಡುವೆ ನಡೆದ ಚರ್ಚೆ ಬಹಳ ಪ್ರಸಿದ್ಧವಾಗಿದೆ. ಅಬ್ದುಲ್ಲಾ ಚಕ್ರಾಲವಿ ಸಾಹಿಬ್ ಅವರು ಪವಿತ್ರ ಖುರ್‌ಆನ್‌ವನ್ನೇ ಏಕೈಕ ಧಾರ್ಮಿಕ ಮೂಲವೆಂದು ಪರಿಗಣಿಸಿ, ಹದೀಸುಗಳನ್ನು ಧಾರ್ಮಿಕ ಆಚರಣೆಗೆ ಆಧಾರವೆಂದು ಒಪ್ಪಿಕೊಳ್ಳುತ್ತಿರಲಿಲ್ಲ. ಮತ್ತೊಂದೆಡೆ, ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಸಾಹಿಬ್ ಅವರ ಅಭಿಪ್ರಾಯವೇನೆಂದರೆ, ಹದೀಸುಗಳು ಪವಿತ್ರ ಖುರ್‌ಆನ್‌ನ ಮೇಲೆಯೇ ತೀರ್ಪು ನೀಡುವ ಅಧಿಕಾರ ಹೊಂದಿವೆ ಎಂದು. ಈ ಎರಡೂ ದೃಷ್ಟಿಕೋಣಗಳು ಸಮತೋಲನವನ್ನು ಕಳೆದುಕೊಂಡಿದ್ದವು. ಒಂದು ಕಡೆ ಅತಿರೇಕ (ಇಫ್ರಾತ್), ಮತ್ತೊಂದು ಕಡೆ ನಿರ್ಲಕ್ಷ್ಯ (ತಫ್ರೀತ್) ಕಂಡುಬಂದಿತ್ತು. ಈ ಚರ್ಚೆಯ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರು ಅತ್ಯಂತ ಅಮೂಲ್ಯವಾದ ವಿಮರ್ಶೆಯನ್ನು (ರಿವ್ಯೂ) ಬರೆದಿದ್ದಾರೆ. ಅದು ರೂಹಾನೀ ಖಝಾಯಿನ್, ಸಂಪುಟ 19ರಲ್ಲಿ "ರಿವ್ಯೂ ಬರ ಮುಬಾಹಸಾ ಬಟಾಲವಿ ವ ಚಕ್ರಾಲವಿ" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾಗಿದೆ. ಆ ವಿಮರ್ಶೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರು ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಬೆಳಕಿನಲ್ಲಿ ಈ ಎರಡೂ ಪಕ್ಷಗಳಿಗೆ ನ್ಯಾಯಸಮ್ಮತ, ಸಮತೋಲನಯುತ ಮತ್ತು ದೈವಿಕ ಮಾರ್ಗದರ್ಶನವನ್ನು ನೀಡಿದ್ದಾರೆ. ಇಂದು ಸಹ ಈ ಮಾರ್ಗದರ್ಶನವು ಕೇವಲ ಮುಸ್ಲಿಂ ಧರ್ಮಪಂಡಿತರಿಗೆ ಮಾತ್ರವಲ್ಲ, ಮುಸ್ಲಿಂ ರಾಷ್ಟ್ರಗಳ ಆಡಳಿತಗಾರರಿಗೂ ಅನುಸರಿಸಬೇಕಾದ ಶಾಶ್ವತ ಮಾರ್ಗದರ್ಶಕ ತತ್ವವಾಗಿದೆ.


ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಹೇಳುತ್ತಾರೆ: ಸರ್ವಶಕ್ತನಾದ ಅಲ್ಲಾಹನು ನಿಮ್ಮ ಮಾರ್ಗದರ್ಶನಕ್ಕಾಗಿ (ಹಿದಾಯತ್‌ಗಾಗಿ) ಮೂರು ಮಹತ್ವದ ಸಾಧನಗಳನ್ನು ಅನುಗ್ರಹಿಸಿದ್ದಾನೆ. ಮೊದಲನೆಯದು ಪವಿತ್ರ ಖುರ್‌ಆನ್. ಎರಡನೆಯದು ಸುನ್ನತ್. ಅಂದರೆ, ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರು ತಮ್ಮ ಪವಿತ್ರ ಜೀವನ, ಆಚರಣೆ ಮತ್ತು ಕಾರ್ಯಗಳ ಮೂಲಕ ಸ್ಥಾಪಿಸಿದ ಶ್ರೇಷ್ಠ ಮಾದರಿ. ಉದಾಹರಣೆಗೆ, ನಮಾಝ್ ಅನ್ನು ಹೇಗೆ ನೆರವೇರಿಸಬೇಕು ಎಂಬುದನ್ನು ತಾವೇ ನಮಾಝ್ ನಿರ್ವಹಿಸುವ ಮೂಲಕ ಬೋಧಿಸಿದರು; ಉಪವಾಸವನ್ನು ಹೇಗೆ ಆಚರಿಸಬೇಕು ಎಂಬುದನ್ನು ತಾವೇ ಉಪವಾಸವಿಟ್ಟು ತೋರಿಸಿದರು. ಇದನ್ನೇ 'ಸುನ್ನತ್' ಎಂದು ಕರೆಯಲಾಗುತ್ತದೆ. ಅಂದರೆ, ಅಲ್ಲಾಹ್ ತಆಲಾನ ವಾಣಿಯನ್ನು ತನ್ನ ಕಾರ್ಯರೂಪದಲ್ಲಿ ಲೋಕಕ್ಕೆ ತೋರಿಸಿದ ನಬಿಯವರ ಪವಿತ್ರ ಜೀವನಮಾರ್ಗವೇ ಸುನ್ನತ್ ಆಗಿದೆ. ಮೂರನೆಯದು ಹದೀಸ್. ಅಂದರೆ, ಹಝ್ರತ್ ಪೈಗಂಬರ್(ಸ) ಅವರ ನಿಧನದ ನಂತರ ಅವರ ಪವಿತ್ರ ವಚನಗಳನ್ನು ಸಂಗ್ರಹಿಸಲಾಯಿತು; ಅವುಗಳೇ ಹದೀಸುಗಳು. ಆದಾಗ್ಯೂ, ಹದೀಸುಗಳ ಸ್ಥಾನಮಾನವು ಪವಿತ್ರ ಖುರ್‌ಆನ್ ಮತ್ತು ಸುನ್ನತ್‌ಗಿಂತ ಕೆಳಮಟ್ಟದಲ್ಲಿದೆ. ಏಕೆಂದರೆ ಹೆಚ್ಚಿನ ಹದೀಸುಗಳು ಝನ್ನೀ (ಸಂಭಾವ್ಯ ಸಾಕ್ಷ್ಯ) ಸ್ವರೂಪದ್ದಾಗಿವೆ. ಆದರೆ ಯಾವುದೇ ಹದೀಸುಗೆ ಸುನ್ನತ್‌ನ ದೃಢವಾದ ಬೆಂಬಲವಿದ್ದರೆ, ಅದು ನಿಶ್ಚಿತ (ಯಕೀನೀ) ಪ್ರಮಾಣವಾಗುತ್ತದೆ." (ಕಶ್ತಿ-ಎ-ನೂಹ್, ಪುಟ 33-34, ನಝಾರತ್ ನಶ್ರ್ ವ ಇಶಾಅತ್, ಖಾದಿಯಾನ್, 2018)

ಈ ಮಾರ್ಗದರ್ಶನದ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರು ಮೇಲೆ ನಮೂದಿಸಿದ ಎರಡೂ ವಿದ್ವಾಂಸರ ಚರ್ಚೆಯ ವಿಮರ್ಶೆಯಲ್ಲಿ ಹೀಗೆ ಬರೆಯುತ್ತಾರೆ:

"ವಾಸ್ತವವಾಗಿ, ಈ ಎರಡೂ ಪಂಥಗಳಲ್ಲಿ ಒಂದೊಂದು ತುದಿಯನ್ನು ಹಿಡಿದಿವೆ. ಒಂದು ಪಕ್ಷ ಅತಿರೇಕದ (ಇಫ್ರಾತ್) ಮಾರ್ಗವನ್ನು ಅನುಸರಿಸಿದೆ; ಮತ್ತೊಂದು ಪಕ್ಷ ನಿರ್ಲಕ್ಷ್ಯದ (ತಫ್ರೀತ್) ಮಾರ್ಗವನ್ನು ಹಿಡಿದಿದೆ. ಮೊದಲನೆಯ ಪಕ್ಷವಾದ ಮೌಲವಿ ಮುಹಮ್ಮದ್ ಹುಸೈನ್ ಸಾಹಿಬ್, ನಬಿಯವರ ಹದೀಸುಗಳನ್ನು ಸಂಪೂರ್ಣವಾಗಿ ತಿರಸ್ಕರಿಸಬಾರದು ಎಂಬ ವಿಷಯದಲ್ಲಿ ಸತ್ಯದ ಮೇಲೆ ಇದ್ದರೂ, ಅವರು ವಿವಿಧ ಮೂಲಗಳ ಸ್ಥಾನಮಾನವನ್ನು ಕಾಪಾಡುವ ತತ್ವವನ್ನು ಮರೆತುಬಿಟ್ಟಿದ್ದಾರೆ. ಹೀಗಾಗಿ ಅವರು ಹದೀಸುಗಳಿಗೆ ಅಷ್ಟು ಉನ್ನತ ಸ್ಥಾನವನ್ನು ನೀಡಿದ್ದಾರೆ, ಅದರಿಂದ ಪವಿತ್ರ ಖುರ್‌ಆನ್‌ನ ಶ್ರೇಷ್ಠತೆಗೆ ಧಕ್ಕೆಯಾಗುವಂತಾಗಿದೆ. ಇದು ಸ್ಪಷ್ಟವಾದ ತಪ್ಪು ಮತ್ತು ನ್ಯಾಯದ ಮಾರ್ಗದಿಂದ ದೂರ ಸಾಗುವುದಾಗಿದೆ. ಅಲ್ಲಾಹ್ ತಆಲಾ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: **ಫಬಿಅಯ್ಯಿ ಹದೀಸಿನ್ ಬಅದಲ್ಲಾಹಿ ವ ಆಯಾತಿಹೀ ಯುಮಿನೂನ**- "ಅಲ್ಲಾಹ್ ಮತ್ತು ಆತನ ಆಯತ್‌ಗಳ ನಂತರ ಅವರು ಇನ್ನಾವ ವಚನವನ್ನು ನಂಬಲಿದ್ದಾರೆ?"

ಮತ್ತೊಂದೆಡೆ, ಮೌಲವಿ ಅಬ್ದುಲ್ಲಾ ಸಾಹಿಬ್ ಸಂಪೂರ್ಣ ವಿರುದ್ಧ ದಿಕ್ಕಿನಲ್ಲಿ ಹೋಗಿ, ಹದೀಸುಗಳನ್ನು ಮೂಲತಃ ನಿರಾಕರಿಸಿದ್ದಾರೆ. ಆದರೆ

*(ಪುಟ ಸಂಖ್ಯೆ 09 ರಲ್ಲಿ ಮುಂದುವರಿಸಲಾಗಿದೆ)*



# ಖುತ್‌ಬ ಜುಮುಅ

## ಹಝ್ರ‌ತ್ ಪೈಗಂಬರ್(ಸ)ರ ದಾನಶೀಲತೆಯ ಸುಂದರ ಪ್ರಸ್ತಾವನೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **19-06-2026** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರ‌ತ್ ಪೈಗಂಬರ್(ಸ)ರ ದಾನಶೀಲತೆ ಮತ್ತು ಔದಾರ್ಯದ ಕುರಿತಾದ ವರದಿಗಳನ್ನು ನಾನು ಪ್ರಸ್ತುತಪಡಿಸುತ್ತೇನೆ.

ಒಂದು ವರದಿಯಿದೆ, ಹಝ್ರ‌ತ್ ಅಬೂ ಸಯೀದ್ ಖುದ್ರಿ(ರ)ರಿಂದ ವರದಿಯಾಗಿದೆ: ಅನ್ಸಾರ್‌ರ ಕೆಲವು ಜನರು ರಸೂಲುಲ್ಲಾಹ್(ಸ)ರೊಡನೆ ಏನೋ ಬೇಡಿದರು. ನಬಿ(ಸ) ಅವರಿಗೆ ನೀಡಿದರು; ನಂತರ ಅವರು ಮತ್ತೆ ಬೇಡಿದರು, ಮತ್ತು ನಬಿ(ಸ) ಮತ್ತೆ ನೀಡಿದರು; ಪುನಃ ಅವರು ಬೇಡಿದರು ಮತ್ತು ನಬಿ(ಸ) ಅವರಿಗೆ ನೀಡಿದರು, ಎಲ್ಲಿಯವರೆಗೆ ಎಂದರೆ ನಬಿ(ಸ)ರ ಬಳಿ ಇದ್ದದ್ದೆಲ್ಲವೂ ಮುಗಿದುಹೋಯಿತು. ಆಗ ನಬಿ(ಸ) ಹೇಳಿದರು: 'ನನ್ನ ಬಳಿ ಇರುವ ಸಂಪತ್ತನ್ನು ನಾನು ಎಂದಿಗೂ ನಿಮ್ಮಿಂದ ಮುಚ್ಚಿಡಲಾರೆ. ಮತ್ತು ಯಾರು ಯಾಚಿಸುವುದರಿಂದ ದೂರವಿರುತ್ತಾರೋ, ಅಲ್ಲಾಹನು ಆತನನ್ನು ರಕ್ಷಿಸುತ್ತಾನೆ.' (ಜೊತೆಗೆ ಯಾಚಿಸುವ ಬಗ್ಗೆ ಉಪದೇಶವನ್ನೂ ನೀಡಿದರು.) 'ಯಾರು ಐಹಿಕ ಸಂಪತ್ತನ್ನು ಬಯಸುವುದಿಲ್ಲವೋ, ಅಲ್ಲಾಹನು ಅವನನ್ನು ಸ್ವಾವಲಂಬಿಯನ್ನಾಗಿ ಮಾಡುವನು. ಯಾರು ತನ್ನ ಮನಸ್ಸಿನ ಮೇಲೆ ನಿಯಂತ್ರಣವಿಟ್ಟು ತಾಳ್ಮೆ ವಹಿಸುತ್ತಾನೋ, ಅಲ್ಲಾಹನು ಅವನಿಗೆ ತಾಳ್ಮೆಯನ್ನು ಕರುಣಿಸುತ್ತಾನೆ. ಮತ್ತು ತಾಳ್ಮೆಗಿಂತ ಶ್ರೇಷ್ಠ ಹಾಗೂ ವಿಶಾಲವಾದ ಬೇರೆ ಯಾವುದೇ ಅನುಗ್ರಹ ಯಾರಿಗೂ ನೀಡಲಾಗಿಲ್ಲ.'

(ಸಹೀಹ್ ಬುಖಾರಿ ಅನುವಾದ ಕಿತಾಬುಝ್ಝಕಾತ್, ಬಾಬ್ ಅಲ್‌ಇಸ್ತಿಫ್ಫಾಫಿ ಅನಿಲ್ ಮಸ್‌ಅಲತಿ, ಹದೀಸ್-1469, ಸಂಪುಟ-3, ಪುಟ-110, ನಝ್ಝಾರತ್ ಇಶಾಅತ್)

ಕೆಲವು ಸಂಕಷ್ಟಗಳಲ್ಲಿ, ತೊಂದರೆಗಳಲ್ಲಿ ಮತ್ತು ಅಗತ್ಯಗಳಲ್ಲಿ ತಾಳ್ಮೆ ವಹಿಸುವುದು ಅವಶ್ಯಕವಾಗಿರುತ್ತದೆ. ಅಲ್ಲಾಹನು ಅದಕ್ಕೆ ಪ್ರತಿಫಲ ನೀಡುತ್ತಾನೆ.

ಹಝ್ರ‌ತ್ ಇಬ್ನು ಉಮರ್(ರ) ವಿವರಿಸುತ್ತಾರೆ: 'ನಾವು ನಬಿ(ಸ) ಅವರ ಜೊತೆ ಒಂದು ಪ್ರಯಾಣದಲ್ಲಿದ್ದೆವು. ನಾನು ಒಂದು ಹಠಮಾರಿ ಯುವ ಒಂಟೆಯ ಮೇಲೆ ಸವಾರನಾಗಿದ್ದೆ. ಅದು ನನ್ನ ತಂದೆ ಹಝ್ರ‌ತ್ ಉಮರ್(ರ)ರದ್ದಾಗಿತ್ತು. ಅದು ನನ್ನ ನಿಯಂತ್ರಣಕ್ಕೆ ಸಿಗುತ್ತಿರಲಿಲ್ಲ ಮತ್ತು ಇತರ ಜನರಿಗಿಂತ ಮುಂದೆ ಸಾಗುತ್ತಿತ್ತು. ಹಝ್ರ‌ತ್ ಉಮರ್(ರ) ಅದನ್ನು ಗದರಿಸುತ್ತಿದ್ದರು, ಅಂದರೆ ಆ ಒಂಟೆಯ ಮೇಲೆ ಕಠಿಣವಾಗಿ ವರ್ತಿಸುತ್ತಿದ್ದರು, ತಡೆಯುತ್ತಿದ್ದರು, ಧ್ವನಿ ಮಾಡಿ ಅದನ್ನು ಹಿಂದಕ್ಕೆ ತರುತ್ತಿದ್ದರು. (ಹೊಡೆಯುತ್ತಿದ್ದರೋ ಅಥವಾ ಹೆದರಿಸುತ್ತಿದ್ದರೋ, ಹೇಗಿದ್ದರೂ ಒಂಟೆಗಳನ್ನು ಓಡಿಸುವ ಯಾವ ವಿಧಾನವಿತ್ತೋ, ಅದರಂತೆ ಅವರು ಹೇಳುತ್ತಿದ್ದರು ಮತ್ತು ಆ ಒಂಟೆ ಹಿಂದಕ್ಕೆ ಬರುತ್ತಿತ್ತು.) ನಂತರ ಅದು ಜನರ ಸವಾರಿಗಳಿಗಿಂತ ಮುಂದೆ ಹೋಗುತ್ತಿತ್ತು, ಮತ್ತು ಹಝ್ರ‌ತ್ ಉಮರ್(ರ) ಅದನ್ನು ಗದರಿಸಿ ಹಿಂದಕ್ಕೆ ತರುತ್ತಿದ್ದರು; ಏಕೆಂದರೆ ನಬಿ(ಸ)ಗಿಂತ ಮುಂದೆ ಯಾವುದೇ ಸವಾರಿ ಅಥವಾ ಸವಾರ ಹೋಗಬಾರದು ಎಂಬ ಭಾವನೆ ಅವರಿಗಿತ್ತು.' ಹಝ್ರ‌ತ್ ಉಮರ್(ರ)ಗೆ ಯಾರ ಸವಾರಿಯೂ ನಬಿ(ಸ)ರ ಸವಾರಿಗಿಂತ ಮುಂದೆ ಹೋಗುವುದು ಸಹಿಸಲು ಆಗುತ್ತಿರಲಿಲ್ಲ. 'ಆಗ ನಬಿ(ಸ) ಹಝ್ರ‌ತ್ ಉಮರ್(ರ)ರೊಡನೆ ಹೀಗೆ ಹೇಳಿದರು: 'ಈ ಒಂಟೆಯನ್ನು ನನಗೆ ಬೆಲೆ ಕೊಟ್ಟು ಮಾರಿಬಿಡಿ.' ಅವರು ಹೇಳಿದರು: 'ಯಾ ರಸೂಲುಲ್ಲಾಹ್, ಇದು ನಿಮ್ಮದೇ ಆಗಿದೆ.' ರಸೂಲುಲ್ಲಾಹ್(ಸ) ಹೇಳಿದರು: 'ಇದನ್ನು ನನಗೆ ಮಾರಾಟ ಮಾಡು.' ಅಂತೆಯೇ ಅವರು ಅದನ್ನು ರಸೂಲುಲ್ಲಾಹ್(ಸ)ರಿಗೆ ಮಾರಾಟ ಮಾಡಿದರು. ನಂತರ ನಬಿ(ಸ) ಹೇಳಿದರು: 'ಅಬ್ದುಲ್ಲಾಹ್ ಬಿನ್ ಉಮರ್, ಈ ಒಂಟೆ ಈಗ ನಿನ್ನದು, ಇದರಿಂದ ನೀನು ಬಯಸಿದ್ದನ್ನು ಮಾಡು.'

(ಸಹೀಹ್ ಬುಖಾರಿ ಅನುವಾದ ಕಿತಾಬುಲ್ ಬುಯೂ, ಬಾಬ್ ಇಝಾ ಇಶ್ತರಾ ಶೈಅನ್ ಫಹುವ ಹಿಬ...., ಹದೀಸ್-2115, ಸಂಪುಟ-4, ಪುಟ-86, ನಝ್ಝಾರತ್ ಇಶಾಅತ್)

ಉಡುಗೊರೆ ಕೊಡುವುದಕ್ಕೂ ಒಂದು ವಿಶಿಷ್ಟ ಶೈಲಿಯಿದೆ, ಇದನ್ನು ನಬಿ(ಸ) ಅವರಿಗೆ ತೋರಿಸಿಕೊಟ್ಟರು, ಅವರಿಗೆ ಹೀಗೆ ಹೇಳಿ ಮನವರಿಕೆ ಮಾಡಿಸಿದರು: ಒಂಟೆಯು ಒಂದು ಜಾನುವಾರು, ಅದು ಈ ರೀತಿ ಮುಂದೆ ಹೋದರೆ ಯಾವುದೇ ತಪ್ಪಿಲ್ಲ. ಈಗ ಈ ಒಂಟೆಯನ್ನು ನನ್ನ ಕಡೆಯಿಂದ ಉಡುಗೊರೆಯಾಗಿ ನೀಡಲಾಗಿದೆ, ಈಗ ಇದು ಇತರ ಸವಾರಿಗಳಿಗಿಂತ ಮುಂದೆ ಹೋದರೂ, ನಬಿ(ಸ) ಉಡುಗೊರೆಯಾಗಿ ನೀಡಿದ್ದ ಒಂಟೆಯು ಮುಂದೆ ಹೋಯಿತು ಎಂದೇ ಹೇಳಲಾಗುತ್ತದೆ.

ಹಝ್ರ‌ತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ವಿವರಿಸುತ್ತಾರೆ: 'ನಾನು ನಬಿ(ಸ)ರ ಜೊತೆ ಒಂದು ಯುದ್ಧದಲ್ಲಿದ್ದೆ. ನನ್ನ ಒಂಟೆಯ ವೇಗ ಮಂದವಾಯಿತು ಮತ್ತು ಅದು ಸುಸ್ತಾಯಿತು. ಸುಸ್ತಾದಾಗ, ನಬಿ(ಸ) ನನ್ನ ಬಳಿ ಬಂದು ಕೇಳಿದರು, 'ಜಾಬಿರ್?' 'ಏನು' ಎಂದು ನಾನು ಕೇಳಿದೆ. ನಬಿ(ಸ) ಕೇಳಿದರು: 'ನಿನ್ನ ಸ್ಥಿತಿ ಹೇಗಿದೆ?' ನಾನು ಹೇಳಿದೆ: 'ಒಂಟೆ ನಡೆಯುವಲ್ಲಿ ಮಂದಗತಿಯಾಗಿದೆ ಮತ್ತು ಸುಸ್ತಾಗಿದೆ, ಆದ್ದರಿಂದ ನಾನು ಹಿಂದೆ ಉಳಿದಿದ್ದೇನೆ.' ಆಗ ನಬಿ(ಸ) ಸವಾರಿಯಿಂದ ಇಳಿದು, ಒಂಟೆಯನ್ನು ತನ್ನ ಗೂಟದಿಂದ ಎಳೆಯಲಾರಂಭಿಸಿದರು. ಅನಂತರ ನಬಿ(ಸ) ನನ್ನೊಡನೆ ಸವಾರನಾಗಲು ಹೇಳಿದರು. ಆಗ ನಾನು ಸವಾರನಾದೆ. ಅದು ಎಷ್ಟೊಂದು ವೇಗವಾಯಿತೆಂದರೆ ರಸೂಲುಲ್ಲಾಹ್(ಸ)ರ ಒಂಟೆಗಿಂತಲೂ ಮುಂದೆ ಸಾಗಲಾರಂಭಿಸಿತು, ಆಗ ನನಗೆ ಅದನ್ನು ತಡೆಯಬೇಕಾಗಿ ಬಂತು. ಅನಂತರ ನಬಿ(ಸ) ನನ್ನೊಡನೆ ಕೇಳಿದರು: 'ನೀನು ಮದುವೆ ಮಾಡಿಕೊಂಡಿದ್ದೀಯಾ?' ಹೌದೆಂದು ನಾನು ಹೇಳಿದೆ. ಅನಂತರ ನಬಿ(ಸ) ಹೇಳಿದರು: 'ನೋಡು, ನೀನು ನಿನ್ನ ಮನೆಗೆ ತಲುಪುತ್ತಿದ್ದೀಯ, ತಲುಪುವಾಗ ವಿವೇಕದಿಂದ, ಎಚ್ಚರಿಕೆಯಿಂದ ನಡೆದುಕೋ. ಮನೆಯಲ್ಲಿ ಉತ್ತಮ ನಡವಳಿಕೆ ಇರಬೇಕು.' ಅನಂತರ ನಬಿ(ಸ) ಕೇಳಿದರು: 'ನೀನು ನಿನ್ನ ಈ ಒಂಟೆಯನ್ನು ನನಗೆ ಮಾರುತ್ತೀಯಾ?' ಸರಿಯೆಂದು ನಾನು ಹೇಳಿದೆ. ಆಗ ನಬಿ(ಸ) ಅದನ್ನು ನನ್ನಿಂದ ಒಂದು ಊಖಿಯಾ ಬೆಳ್ಳಿಗೆ ಖರೀದಿಸಿದರು. ಅನಂತರ ರಸೂಲುಲ್ಲಾಹ್(ಸ) ನನಗಿಂತ ಮೊದಲು ಮದೀನಾ ತಲುಪಿದರು ಮತ್ತು ನಾನು ಮರುದಿನ ಬೆಳಗ್ಗೆ ತಲುಪಿದೆ. ನಾವು ಮಸೀದಿಗೆ ಬಂದಾಗ, ನಾನು ನಬಿ(ಸ)ರನ್ನು ಮಸೀದಿಯ ಬಾಗಿಲಲ್ಲಿ ಕಂಡೆ. ನಬಿ(ಸ) ಕೇಳಿದರು: 'ಈಗ ತಲುಪಿದೆಯಾ?' ನಾನು ಹೇಳಿದೆ: 'ಹೌದು.' ನಬಿ(ಸ) ಹೇಳಿದರು: 'ನಿನ್ನ ಒಂಟೆಯನ್ನು ಬಿಡು ಮತ್ತು ಮಸೀದಿಗೆ ಹೋಗಿ ಎರಡು ರಕಅತ್ ನಮಾಝ್ ನಿರ್ವಹಿಸು.' ಅಂತೆಯೇ ನಾನು ಒಳಗೆ ಹೋಗಿ ನಮಾಝ್ ನಿರ್ವಹಿಸಿದೆ. ಹಝ್ರ‌ತ್ ಬಿಲಾಲ್‌ರೊಡನೆ(ರ) ನಬಿ(ಸ) ಹೇಳಿದರು: 'ಇವನಿಗೆ ಒಂದು ಊಖಿಯಾ ಬೆಳ್ಳಿಯನ್ನು ತೂಕ ಮಾಡಿ ಕೊಡು.' ಹಝ್ರ‌ತ್ ಬಿಲಾಲ್(ರ) ತೂಕ ಮಾಡಿ ನನಗೆ ಕೊಟ್ಟರು, ತೂಕ ಮಾಡುವಾಗ ತಕ್ಕಡಿಯನ್ನು ತಗ್ಗಿಸಿದರು, ಅಂದರೆ ಅದಕ್ಕಿಂತ ಸ್ವಲ್ಪ ಹೆಚ್ಚು ನೀಡಿದರು. ನಂತರ ನಾನು ಹಿಂತಿರುಗಿದೆ. ನಬಿ(ಸ) ಹೇಳಿದರು: 'ಜಾಬಿರ್‌ನನ್ನು ನನ್ನ ಬಳಿಗೆ ಕರೆಯಿರಿ.' ನಾನು ಮನಸ್ಸಿನಲ್ಲಿ ಅಂದುಕೊಂಡೆ: 'ಈಗ ನಬಿ(ಸ) ನನ್ನ ಒಂಟೆಯನ್ನು ನನಗೆ ಮರಳಿ ಕೊಡುವರು. ನಬಿ(ಸ) ಹೇಳಿದರು: 'ನಿನ್ನ ಒಂಟೆಯನ್ನು ತೆಗೆದುಕೊ, ಮತ್ತು ಅದರ ಬೆಲೆಯೂ ನಿನ್ನದೇ ಆಗಿದೆ.' (ಸಹೀಹ್ ಬುಖಾರಿ ಅನುವಾದ ಕಿತಾಬುಲ್ ಬುಯೂ, ಬಾಬ್ ಶರದ್ದವಾಬ್......, ಹದೀಸ್-2097, ಸಂಪುಟ-4, ಪುಟ-66 ರಿಂದ 68, ನಝ್ಝಾರತ್ ಇಶಾಅತ್)

ಮತ್ತೊಂದು ವರದಿಯಲ್ಲಿದೆ: ಹಝ್ರ‌ತ್ ಜಾಬಿರ್ ವಿವರಿಸುತ್ತಾರೆ, 'ಅನಂತರ ನಾನು ಒಬ್ಬ ಯಹೂದಿಯ ಬಳಿ ಹಾದುಹೋದೆ, ನಾನು ಈ ಸಂಪೂರ್ಣ ಘಟನೆಯನ್ನು ಅವನಿಗೆ ಹೇಳಿದಾಗ, ಅವನು ಅತ್ಯಂತ ಆಶ್ಚರ್ಯಚಕಿತನಾಗಿ ಹೇಳಿದನು: 'ಅವರು ಅದರ ಬೆಲೆ ಮತ್ತು ಒಂಟೆ ಎರಡನ್ನೂ ನಿನಗೆ ಕೊಟ್ಟರೇ?' ನಾನು ಹೇಳಿದೆ, 'ಹೌದು, ಹೀಗೆಯೇ

ಆಗಿದೆ.' ಅವರು ಹೇಳುತ್ತಾರೆ: ನಬಿ(ಸ)ರ ಕಡೆಯಿಂದ ನೀಡಲಾದ ಈ ಉಡುಗೊರೆಯಲ್ಲಿ ಎಷ್ಟೊಂದು ಅನುಗ್ರಹ ಉಂಟಾಯಿತೆಂದರೆ, ಆ ಒಂಟೆ ನಬಿಯವರ ಕಾಲದಲ್ಲಿ ಮತ್ತು ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ಹಾಗೂ ಹಝ್ರತ್ ಉಮರ್(ರ)ರ ಕಾಲದವರೆಗೂ ಜೀವಂತವಾಗಿತ್ತು. (ನಿಜಾಹ್ ಅಲ್‌ಖಾರಿ, ಶರಹ್ ಸಹೀಹ್ ಬುಖಾರಿ, ಸಂಪುಟ-16, ಪುಟ-22, ನಿಜಾಹ್ ಅಲ್‌ಖಾರಿ ಶರಹ್ ಸಹೀಹ್ ಅಲ್‌ಬುಖಾರಿ ಸಂಪುಟ-16, ಪುಟ-34-35, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ನಬಿ(ಸ)ರ ಮಾದರಿ, ಅವರ ತರಬೇತಿ ಮತ್ತು ಅವರ ಪವಿತ್ರ ಶಕ್ತಿಯ ಪ್ರಭಾವವು ಎಲ್ಲ ಸಹಾಬಿಯರ ಮೇಲಿತ್ತು. ಹಝ್ರತ್ ಖದೀಜಾ(ರ)ರ ಮೇಲೂ ಈ ಪ್ರಭಾವವಿತ್ತು, ಇದೇ ಕಾರಣದಿಂದ ಅವರು ಯಾವುದೇ ಕೊರತೆಯ ಭಯವಿಲ್ಲದೆ ತಮ್ಮ ಸಂಪತ್ತನ್ನು ನಬಿ(ಸ)ರಿಗೆ ಒಪ್ಪಿಸಿಬಿಟ್ಟರು. ಹೀಗೂ ವಿವರಿಸಲಾಗಿದೆ: 'ರಸೂಲುಲ್ಲಾಹ್(ಸ) ಹಝ್ರತ್ ಖದೀಜಾ(ರ)ರ ಬಳಿಗೆ ಬಂದಾಗ, ಸ್ವಲ್ಪ ಚಿಂತಿತರಾಗಿದ್ದರು. ಹಝ್ರತ್ ಖದೀಜಾ(ರ)ರೊಡನೆ ಕೇಳಿದರು: 'ಏನಾಯಿತು?' ನಬಿ(ಸ) ಹೇಳಿದರು: 'ಬರಗಾಲದ ಸಮಯವಾಗಿದೆ, ನಿನ್ನೊಡನೆ ಕೇಳಲು ನನಗೆ ನಾಚಿಕೆಯಾಗುತ್ತಿದೆ, ಒಂದು ವೇಳೆ ನಾನು ಸಂಪತ್ತನ್ನು ಖರ್ಚು ಮಾಡಿದರೆ ನಿನ್ನ ಸಂಪತ್ತು ಮುಗಿದುಹೋಗುವುದು; ಮತ್ತು ನಾನು ಖರ್ಚು ಮಾಡದಿದ್ದರೆ... ನಾನು ಅದನ್ನು ಖರ್ಚು ಮಾಡದಿದ್ದರೆ, ನಾನು ಅಲ್ಲಾಹನಿಗೆ ಹೆದರುತ್ತೇನೆ.' ಹಝ್ರತ್ ಖದೀಜಾ(ರ) ಖುರೈಶ್‌ರನ್ನು ಕರೆದರು, ಅವರಲ್ಲಿ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಕೂಡ ಇದ್ದರು. ಹಝ್ರತ್ ಅಬೂಬಕರ್(ರ) ವಿವರಿಸುತ್ತಾರೆ: ಖದೀಜಾ(ರ) ದೀನಾರ್‌ಗಳನ್ನು ಹೊರತೆಗೆದರು ಮತ್ತು ಅವುಗಳ ರಾಶಿಯನ್ನು ಹಾಕಿದರು, ಎಲ್ಲಿಯವರೆಗೆ ಎಂದರೆ ಸಂಪತ್ತಿನ ಬಾಹುಳ್ಯದಿಂದಾಗಿ ನನ್ನ ಮುಂದೆ ಯಾರು ಕುಳಿತಿದ್ದಾರೆ ಎಂಬುದನ್ನು ನಾನು ನೋಡಲು ಸಾಧ್ಯವಾಗುತ್ತಿರಲಿಲ್ಲ. ನಂತರ ಹಝ್ರತ್ ಖದೀಜಾ(ರ) ಹೇಳಿದರು: 'ನೀವು ಸಾಕ್ಷಿಯಾಗಿರಿ, ಈ ಎಲ್ಲ ಸಂಪತ್ತು ನಬಿ(ಸ)ರದ್ದಾಗಿದೆ. ಅವರು ಬಯಸಿದರೆ ಅದನ್ನು ಖರ್ಚು ಮಾಡಲಿ, ಮತ್ತು ಬಯಸಿದರೆ ಅದನ್ನು ತಮ್ಮ ಬಳಿಯೇ ಇಟ್ಟುಕೊಳ್ಳಲಿ.' ನಬಿ(ಸ)ರ ಚಿಂತೆಯನ್ನು ದೂರ ಮಾಡಲು ಅವರು ಕೊಟ್ಟುಬಿಟ್ಟರು.
(ತಫ್ಸೀರ್ ಕಬೀರ್ ಇಮಾಮ್ ರಾಝಿ, ಸಂಪುಟ-16, ಭಾಗ-31-32, ಪುಟ-198, ತಫ್ಸೀರ್ ಸೂರಃ ಅದ್ದುಹಾ ಆಯತ್-8, ದಾರುಲ್ ಕುತುಬ್ ಇಲ್ಮೀಯಾ ಬೈರುತ್ 2004)

ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರಿಂದ ವರದಿಯಾಗಿದೆ: 'ಒಬ್ಬ ವ್ಯಕ್ತಿ ರಸೂಲುಲ್ಲಾಹ್(ಸ)ರ ಸನ್ನಿಧಿಗೆ ಬಂದು ನಬಿ(ಸ)ರೊಡನೆ ಏನನ್ನೋ ಬೇಡಿದನು. ನಬಿ(ಸ) ಹೇಳಿದರು: 'ನನ್ನ ಬಳಿ ಈಗ ಏನೂ ಇಲ್ಲ. ನೀನು ನನ್ನ ಹೆಸರಿನಲ್ಲಿ ಅಗತ್ಯ ವಸ್ತುಗಳನ್ನು ಖರೀದಿಸಿಕೊ. ನನ್ನ ಬಳಿ ಏನಾದರೂ ಬಂದಾಗ ನಾನು ಅದನ್ನು ಪಾವತಿಸುವೆನು.' ಆಗ ಹಝ್ರತ್ ಉಮರ್ ಹೇಳಿದರು: 'ಯಾ ರಸೂಲುಲ್ಲಾಹ್, ನೀವು ಅವನಿಗೆ ಮೊದಲೇ ನೀಡಿದ್ದೀರಿ, ಮತ್ತು ಯಾವುದು ನಿಮ್ಮ ಶಕ್ತಿಯಲ್ಲಿಲ್ಲವೋ ಅಲ್ಲಾಹನು ನಿಮ್ಮನ್ನು ಅದಕ್ಕೆ ಜವಾಬ್ದಾರನನ್ನಾಗಿ ಮಾಡಿಲ್ಲ.' ನಬಿ(ಸ)ರಿಗೆ ಹಝ್ರತ್ ಉಮರ್(ರ)ರ ಈ ಮಾತು ಇಷ್ಟವಾಗಲಿಲ್ಲ. ಆಗ ಅನ್ಸಾರ್‌ರ ಪೈಕಿ ಒಬ್ಬ ವ್ಯಕ್ತಿ ಹೇಳಿದನು: 'ಯಾ ರಸೂಲುಲ್ಲಾಹ್(ಸ), ನೀವು ಖರ್ಚು ಮಾಡಿರಿ; ಮತ್ತು ಸಿಂಹಾಸನದೊಡೆಯನ ಕಡೆಯಿಂದ ಬಡತನಕ್ಕೆ ಹೆದರದಿರಿ.' ಅನ್ಸಾರಿಯ ಈ ಮಾತಿಗೆ ರಸೂಲುಲ್ಲಾಹ್(ಸ) ಮುಗುಳ್ನಕ್ಕರು ಮತ್ತು ಅವರ ಮುಖದಲ್ಲಿ ಸಂತೋಷವು ಗೋಚರಿಸುತ್ತಿತ್ತು. ಅನಂತರ ನಬಿ(ಸ) ಹೇಳಿದರು: 'ಹೀಗೆಯೇ ನನಗೆ ಆದೇಶಿಸಲಾಗಿದೆ."
(ಶಮಾಎಲುನ್ನಬೀ(ಸ), ಪುಟ-148-149, ಬಾಬ್ ಮಾಜಾಅ ಫೀ ಖುಲ್ಖಿ ರಸೂಲುಲ್ಲಾಹ್(ಸ), ಹದೀಸ್-340, ನೂರ್ ಫೌಂಡೇಶನ್ ರಬ್ವಾಹ್)

ಹಝ್ರತ್ ಅಬೂಹುರೈರಾ(ರ) ಹೇಳುತ್ತಿದ್ದರು: 'ಅಹ್ಲೆ ಸುಫ್ಫಾ ಮುಸಲ್ಮಾನರ ಅತಿಥಿಗಳಾಗಿದ್ದರು. ಹೋಗಿ ವಿಶ್ರಾಂತಿ ಪಡೆಯಲು ಅವರಿಗೆ ಮನೆ ಮಠವಿರಲಿಲ್ಲ, ಅವರು ಹೋಗಿ ವಾಸಿಸಲು ಅಂತಹ ಯಾರೂ ಇರಲಿಲ್ಲ. ನಬಿ(ಸ)ರ ಬಳಿ ಯಾವುದಾದರೂ ದಾನ ಬಂದರೆ, ನಬಿ(ಸ) ಅದನ್ನು ಅವರಿಗೆ ಕಳುಹಿಸುತ್ತಿದ್ದರು ಮತ್ತು ಸ್ವತಃ ಅದರಿಂದ ಏನನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಹೇಗಿದ್ದರೂ, ದಾನವನ್ನು ನಬಿ(ಸ) ತೆಗೆದುಕೊಳ್ಳುತ್ತಿರಲಿಲ್ಲ ಏಕೆಂದರೆ ಅದು ನಿಷಿದ್ಧವಾಗಿತ್ತು, ಅದು ಬಡವರಿಗಾಗಿತ್ತು. ನಬಿ(ಸ)ರ ಬಳಿ ಯಾವುದಾದರೂ ಉಡುಗೊರೆ ಬಂದರೆ, ಆಗ ಅವರು ಅಹ್ಲೆ ಸುಫ್ಫಾರನ್ನು ಕರೆಯಿಸುತ್ತಿದ್ದರು ಮತ್ತು ಅದರಿಂದ ಸ್ವತಃ ಸ್ವಲ್ಪ ತೆಗೆದುಕೊಳ್ಳುತ್ತಿದ್ದರು ಮತ್ತು ಅದರಿಂದ ಅವರಿಗೂ ನೀಡುತ್ತಿದ್ದರು.'
(ಸಹೀಹ್ ಬುಖಾರಿ ಅನುವಾದ ಕಿತಾಬುರ್ರಿಖಾಖ್, ಹದೀಸ್-6452, ಸಂಪುಟ-15, ಪುಟ-222, ನಝಾರತ್ ಇಶಾಅತ್)

ದಾನಶೀಲತೆಯೊಂದಿಗೆ ಸಹಾನುಭೂತಿ ಮತ್ತು ತರಬೇತಿಯ ಅತ್ಯುನ್ನತ ಮಾನದಂಡಗಳು ನಬಿ(ಸ)ರಲ್ಲಿದ್ದವು. ಈ ಬಗ್ಗೆ ಒಂದು ವರದಿಯಲ್ಲಿದೆ, ಹಝ್ರತ್ ಅಬೂಹುರೈರಾ(ರ) ವಿವರಿಸುತ್ತಾರೆ: 'ಒಮ್ಮೆ ಒಬ್ಬ ಹಳ್ಳಿಗನು ಬಂದು ನಬಿ(ಸ)ರೊಡನೆ ತನ್ನ ಅಗತ್ಯದ ಬಗ್ಗೆ ಯಾಚಿಸಿದನು.' ವರದಿಗಾರ ಇಕ್ರಿಮಾ ಹೇಳುತ್ತಾರೆ: 'ನನ್ನ ಪ್ರಕಾರ ಅವನು ದಿಯತ್‌ನ ವಿಷಯದಲ್ಲಿ ಸಹಾಯ ಬೇಡಲು ಬಂದಿದ್ದನು. ರಸೂಲುಲ್ಲಾಹ್(ಸ) ಅವನಿಗೆ ಏನನ್ನೋ ದಯಪಾಲಿಸಿದರು. ಅನಂತರ ನಬಿ(ಸ) ಕೇಳಿದರು, 'ನಾನು ನಿನ್ನೊಂದಿಗೆ ಒಳ್ಳೆಯ ವರ್ತನೆ ತೋರಿದ್ದೇನೆಯೇ?' ಅದಕ್ಕೆ ಆ ಹಳ್ಳಿಗ ಹೇಳಿದನು, 'ಇಲ್ಲ, ನೀವು ನನ್ನೊಂದಿಗೆ ಒಳ್ಳೆಯ ವರ್ತನೆ ತೋರಲಿಲ್ಲ.' ಕೆಲವು ಮುಸಲ್ಮಾನರು ಕೋಪಗೊಂಡು ಅವನ ಕಡೆಗೆ ನುಗ್ಗಲು ಯತ್ನಿಸಿದರು, ಅವನನ್ನು ಹಿಡಿಯಲು ಮುಂದಾದಾಗ, ರಸೂಲುಲ್ಲಾಹ್(ಸ) ಅವರನ್ನು ಸನ್ನೆಯ ಮೂಲಕ ತಡೆದರು. ನಂತರ ನಬಿ(ಸ) ಎದ್ದು ಮನೆಗೆ ಹೋದರು, ಮತ್ತು ಆ ಹಳ್ಳಿಗನನ್ನು ಮನೆಗೆ ಕರೆದು ಹೇಳಿದರು: 'ನೀನು ನಮ್ಮ ಬಳಿಗೆ ಬಂದೆ, ನಮ್ಮಲ್ಲಿ ಯಾಚಿಸಿದೆ, ನಾವು ನಿನಗೆ ದಯಪಾಲಿಸಿದೆವು ಮತ್ತು ನೀನು ಏನು ಹೇಳಬೇಕಿತ್ತೋ ಅದನ್ನು ಹೇಳಿದೆ. ನಿನಗೆ ತಿಳಿದಿದೆಯೇ ನೀನು ಏನು ಹೇಳಿದೆ ಎಂದು? ನಾನು ನ್ಯಾಯ ಮಾಡಿಲ್ಲ ಎಂದು ನೀನು ಹೇಳಿದೆ.' ನಂತರ ರಸೂಲುಲ್ಲಾಹ್ ಅವನಿಗೆ ಮನೆಯಿಂದ ಇನ್ನೂ ಹೆಚ್ಚು ದಯಪಾಲಿಸಿದರು. ನಂತರ ನಬಿ(ಸ) ಕೇಳಿದರು: 'ಈಗ ನಾನು ನಿನ್ನೊಂದಿಗೆ ಒಳ್ಳೆಯ ವರ್ತನೆ ತೋರಿದ್ದೇನೆಯೇ?' ಹಳ್ಳಿಗ ಹೇಳಿದನು: 'ಹೌದು, ಅಲ್ಲಾಹನು ನಿಮಗೆ, ನಿಮ್ಮ ಮನೆಯವರಿಗೆ ಮತ್ತು ನಿಮ್ಮ ಸಮುದಾಯದವರಿಗೆ ಅತ್ಯುತ್ತಮ ಪ್ರತಿಫಲ ನೀಡಲಿ.' ಆಗ ನಬಿ(ಸ) ಅವನಿಗೆ ಹೇಳಿದರು: 'ನೀನು ನಮ್ಮ ಬಳಿಗೆ ಬಂದೆ ಮತ್ತು ನಮ್ಮಲ್ಲಿ ಯಾಚಿಸಿದೆ, ಆಗ ನಾವು ನಿನಗೆ ದಯಪಾಲಿಸಿದೆವು. ಆದರೆ ನಿನ್ನ ಮನಸ್ಸಿಗೆ ಬಂದದ್ದನ್ನು ಯೋಚಿಸದೇ ನೀನು ಹೇಳಿಬಿಟ್ಟೆ. ನಿನ್ನ ಈ ಮಾತಿನಿಂದ ನನ್ನ ಸಹಾಬಿಯರ ಮನಸ್ಸಿನಲ್ಲಿ ನಿನ್ನ ಬಗ್ಗೆ ಸ್ವಲ್ಪ ಕೋಪವಿದೆ. ಆದ್ದರಿಂದ ಈಗ ನೀನು ಹೊರಗೆ ಹೋದಾಗ, ನೀನು ನನ್ನ ಮುಂದೆ ಏನು ಹೇಳಿದ್ದೀಯೋ ಅದನ್ನು ಅವರ ಮುಂದೆಯೂ ಹೇಳು, ಇದರಿಂದ ಅವರ ಕೋಪ ದೂರವಾಗಲಿ.' ವರದಿಗಾರರು ಹೇಳುತ್ತಾರೆ, ಆ ಹಳ್ಳಿಗ ಬಂದಾಗ ರಸೂಲುಲ್ಲಾಹ್(ಸ) ಹೇಳಿದರು: 'ನಿಮ್ಮ ಈ ಜೊತೆಗಾರ ನಮ್ಮ ಬಳಿಗೆ ಬಂದನು ಮತ್ತು ನಮ್ಮಲ್ಲಿ ಯಾಚಿಸಿದನು. ಆಗ ನಾವು ಅವನಿಗೆ ದಯಪಾಲಿಸಿದೆವು, ಮತ್ತು ಅವನ ಮನಸ್ಸಿಗೆ ಬಂದದ್ದನ್ನು ಅವನು ಹೇಳಿದನು. ನಾವು ಅವನನ್ನು ಕರೆದೆವು ಮತ್ತು ಇನ್ನೂ ಹೆಚ್ಚು ದಯಪಾಲಿಸಿದೆವು. ಈಗ ತಾನು ಸಂತೋಷವಾಗಿದ್ದೇನೆ ಎಂದು ಅವನು ಹೇಳುತ್ತಿದ್ದಾನೆ. ಹೀಗೇ ತಾನೇ?' ಆ ಹಳ್ಳಿಗ ಉತ್ತರಿಸಿದನು: 'ಹೌದು, ಮತ್ತು ಅಲ್ಲಾಹನು ನಿಮಗೆ, ನಿಮ್ಮ ಮನೆಯವರಿಗೆ ಮತ್ತು ನಿಮ್ಮ ಸಮುದಾಯಕ್ಕೆ ಅತ್ಯುತ್ತಮ ಪ್ರತಿಫಲವನ್ನು ದಯಪಾಲಿಸಲಿ.' ಹಝ್ರತ್ ಅಬೂಹುರೈರಾ(ರ) ವಿವರಿಸುತ್ತಾರೆ, ಆಗ ನಬಿ(ಸ) ಹೇಳಿದರು: 'ನನ್ನ ಮತ್ತು ಈ ಹಳ್ಳಿಗನ ಉದಾಹರಣೆ ಎಂತಹದ್ದೆಂದರೆ, ಒಬ್ಬ ವ್ಯಕ್ತಿಯ ಒಂಟೆಯಿರುತ್ತದೆ ಮತ್ತು ಅದು ಹೆದರಿ ಓಡಿಹೋಗುತ್ತದೆ, ಜನರು ಅದರ ಹಿಂದೆ ಓಡುತ್ತಾರೆ, ಇದರಿಂದ ಆ ಒಂಟೆ ಮತ್ತಷ್ಟು ಹೆದರುತ್ತದೆ. ಆಗ ಒಂಟೆಯ ಮಾಲೀಕನು ಹೇಳುತ್ತಾನೆ, 'ನನ್ನನ್ನು ಮತ್ತು ನನ್ನ ಒಂಟೆಯನ್ನು ಬಿಟ್ಟುಬಿಡಿ. ಏಕೆಂದರೆ ನಾನು ಅದರೊಂದಿಗೆ ಹೆಚ್ಚು ಮೃದುವಾಗಿ ವರ್ತಿಸುವವನಾಗಿದ್ದೇನೆ ಮತ್ತು ಅದನ್ನು ಹೇಗೆ ಹಿಡಿಯಬೇಕೆಂದು ನನಗೆ ಚೆನ್ನಾಗಿ ತಿಳಿದಿದೆ. ನೀವು ಅದರ ಹಿಂದೆ ಓಡಿದರೆ ಅದು ಮತ್ತಷ್ಟು ಹೆದರುತ್ತದೆ.' ನಂತರ ಒಂಟೆಯ ಮಾಲೀಕನು ಅದರ ಕಡೆಗೆ ತಿರುಗಿ ಅದಕ್ಕಾಗಿ ಸ್ವಲ್ಪ ಹುಲ್ಲನ್ನು ತೆಗೆದುಕೊಂಡು ಅದನ್ನು ತನ್ನ ಕಡೆಗೆ ಕರೆಯುತ್ತಾನೆ, ಕೈಯಲ್ಲಿ ಹುಲ್ಲು ಹಿಡಿದುಕೊಂಡು ಒಂಟೆಯ ಕಡೆಗೆ ಬರುತ್ತಾನೆ; ಕೊನೆಗೆ ಅದು ಅವನ ಕಡೆಗೆ ಬರುತ್ತದೆ ಮತ್ತು ಅದರ ಮೇಲೆ ಜೀನು ಹಾಕಿ ಸವಾರಿ ಮಾಡುತ್ತಾನೆ.' ನಬಿ(ಸ) ಹೇಳಿದರು: 'ಒಂಟೆ ಹುಲ್ಲು ತಿನ್ನುವ ಕಡೆಗೆ ಬರುತ್ತದೆ, ಅದು ಅದನ್ನು ನೋಡಿ ಬರುತ್ತದೆ ಮತ್ತು ಹತ್ತಿರ ಬಂದಾಗ ಜೀನು ಹಾಕುತ್ತಾನೆ.' ನಂತರ ನಬಿ(ಸ) ಹೇಳಿದರು: 'ಈ ಹಳ್ಳಿಗ ಕಠಿಣ ಮಾತುಗಳನ್ನು ಹೇಳಿದಾಗ, 'ಅವನ ಮೇಲೆ ಕಠಿಣವಾಗಿ ವರ್ತಿಸಿ' ಎಂದು ನೀವು ಹೇಳಿದ ಮಾತನ್ನು ನಾನು ಒಂದು ವೇಳೆ ಕೇಳಿದ್ದರೆ, ಮತ್ತು ನಿಮ್ಮನ್ನು ಅವನ ಮೇಲೆ ಕಠಿಣವಾಗಿ ವರ್ತಿಸಲು ಬಿಟ್ಟಿದ್ದರೆ, ಆತನು ನರಕವನ್ನು ಪ್ರವೇಶಿಸುತ್ತಿದ್ದನು. ಆದರೆ ನಾನು ಅವನನ್ನು ರಕ್ಷಿಸಿದೆ, ಮತ್ತು ಈಗ ಅವನು ಸಂತೋಷಗೊಂಡಿದ್ದಾನೆ."
(ಮಜ್‌ಮಅ ಅಝ್ಝವಾಎದ್, ಸಂಪುಟ-8, ಪುಟ-413-414,

ಕಿತಾಬ್ ಅಲಾಮಾತುನ್ನಬುವ್ವ, ಹದೀಸ್ ಸಂಖ್ಯೆ–14193, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2001)

ಇದು ನಬಿ(ಸ)ರ ದಾನ ಮಾಡುವ ರೀತಿಯಾಗಿತ್ತು. ಮನೆಗೆ ಕರೆದುಕೊಂಡು ಹೋಗಿ, ಮನೆಯಿಂದ ತೆಗೆದುಕೊಟ್ಟರು. ಹೊರಗೆ ತಂದೂ ಕೊಡಬಹುದಿತ್ತು. ಆದರೆ ತೋರಿಸಿದರು, 'ನೋಡು, ನನ್ನ ಮನೆಯಲ್ಲೂ ಇಂತಹ ಐಷಾರಾಮದ ವಸ್ತುಗಳೇನೂ ಇಲ್ಲ; ಆದರೆ ಇರುವುದನ್ನು ನಾನು ನಿನಗೆ ಕೊಡುತ್ತಿದ್ದೇನೆ,' ಆ ಹಳ್ಳಿಗನಿಗೂ ಸಮಾಧಾನವಾಯಿತು.

ಹಝ್ರತ್ ರಬೀಅ ಬಿಂತ್ ಮುಅವ್ವಿದ್ ಬಿನ್ ಅಫ್ರಾ(ರ) ವಿವರಿಸುತ್ತಾರೆ: 'ನನ್ನ ತಂದೆ ಮುಅವ್ವಿದ್ ಬಿನ್ ಅಫ್ರಾ ನನ್ನನ್ನು ರಸೂಲುಲ್ಲಾಹ್(ಸ)ರ ಸೇವೆಗೆ ಒಂದು ಸಾಅ್ ತಾಜಾ ಖರ್ಜೂರಗಳನ್ನು ಕೊಟ್ಟು ಕಳುಹಿಸಿದರು. ಅದರ ಮೇಲೆ ಸಣ್ಣ–ಸಣ್ಣ ಸೌತೆಕಾಯಿಗಳನ್ನು ಇಡಲಾಗಿತ್ತು, ನಬಿ(ಸ) ಸೌತೆಕಾಯಿಯನ್ನು ಇಷ್ಟಪಡುತ್ತಿದ್ದರು. ಅದೇ ಸಮಯದಲ್ಲಿ ರಸೂಲುಲ್ಲಾಹ್(ಸ)ರ ಬಳಿ ಬಹ್ರೇನ್‌ನಿಂದ ಆಭರಣಗಳು ಬಂದಿದ್ದವು. ನಬಿ(ಸ) ಆ ಆಭರಣಗಳಿಂದ ಒಂದು ಹಿಡಿ ತುಂಬಿ ನನಗೆ ದಯಪಾಲಿಸಿದರು.' ಮತ್ತೊಂದು ವರದಿಯಲ್ಲಿದೆ: 'ರಸೂಲುಲ್ಲಾಹ್(ಸ) ನನಗೆ ನನ್ನ ಅಂಗೈ ತುಂಬುವಷ್ಟು ಆಭರಣ ಅಥವಾ ಚಿನ್ನವನ್ನು ದಯಪಾಲಿಸಿದರು, ನಂತರ ಅದನ್ನು ಧರಿಸಲು ಹೇಳಿದರು.' ಇದು ಪ್ರತ್ಯುಪಕಾರ ಮಾಡುವ ಅತ್ಯುತ್ತಮ ರೀತಿಯಾಗಿದೆ.

(ಮಜ್‌ಮಅ ಅಝ್ಝವಾಇದ್, ಸಂಪುಟ–8, ಪುಟ–410, ಕಿತಾಬ್ ಅಲಾಮಾತುನ್ನಬುವ್ವ, ಹದೀಸ್ ಸಂಖ್ಯೆ–14182–14183, ದಾರುಲ್ ಕುತುಬ್ ಇಲ್ಮಿಯಾ ಬೈರುತ್ 2001)

ಖರ್ಜೂರಗಳು ಮತ್ತು ಸೌತೆಕಾಯಿಗಳಿಗೆ ಪ್ರತಿಯಾಗಿ ಚಿನ್ನದ ಆಭರಣಗಳನ್ನು ನಬಿ(ಸ) ದಯಪಾಲಿಸಿದರು.

ಹಝ್ರತ್ ಅಬೂ ಹುರೈರಾ(ರ)ರಿಂದ ವರದಿಯಾಗಿದೆ: 'ರಸೂಲುಲ್ಲಾಹ್(ಸ)ರ ಬಳಿ ಸಾಲದಲ್ಲಿದ್ದ ವ್ಯಕ್ತಿಯ ಜನಾಝಾ ಬಂದಾಗ, ನಬಿ(ಸ) ಕೇಳುತ್ತಿದ್ದರು: 'ಅವನು ತನ್ನ ಸಾಲ ತೀರಿಸಲು ಏನಾದರೂ ಸಂಪತ್ತನ್ನು ಬಿಟ್ಟು ಹೋಗಿದ್ದಾನೆಯೇ?' ಜನರು 'ಹೌದು' ಎಂದು ಹೇಳಿದರೆ, ನಬಿ(ಸ) ಅವನ ಜನಾಝಾ ನಮಾಝ್ ನಿರ್ವಹಿಸುತ್ತಿದ್ದರು, ಇಲ್ಲದಿದ್ದರೆ ಮುಸಲ್ಮಾನರಿಗೆ ಹೇಳುತ್ತಿದ್ದರು: 'ನಿಮ್ಮ ಜೊತೆಗಾರನ ಜನಾಝಾ ನಮಾಝ್ ನಿರ್ವಹಿಸಿರಿ.' ಅಲ್ಲಾಹನು ನಬಿ(ಸ)ರಿಗೆ ವಿಜಯಗಳನ್ನು ನೀಡಿದಾಗ, ನಬಿ(ಸ) ಹೇಳಿದರು: 'ನಾನು ಮುಸಲ್ಮಾನರಿಗೆ ಅವರ ಸಂಬಂಧಿಕರಿಗಿಂತಲೂ ಹೆಚ್ಚು ಹತ್ತಿರದವನಾಗಿದ್ದೇನೆ. ಆದ್ದರಿಂದ ಸತ್ಯವಿಶ್ವಾಸಿಗಳಲ್ಲಿ ಯಾರು ಮರಣಹೊಂದುತ್ತಾರೋ ಮತ್ತು ಸಾಲವನ್ನು ಬಿಟ್ಟು ಹೋಗುತ್ತಾರೋ, ಅದನ್ನು ತೀರಿಸುವುದು ನನ್ನ ಜವಾಬ್ದಾರಿಯಾಗಿದೆ. ಯಾರು ಸಂಪತ್ತನ್ನು ಬಿಟ್ಟು ಹೋಗುತ್ತಾರೋ ಅದು ಅವರ ವಾರಸುದಾರರಿಗೆ ಸೇರಿದ್ದಾಗಿದೆ.

(ಸಹೀಹ್ ಅಲ್‌ಬುಖಾರಿ ಅನುವಾದ, ಕಿತಾಬ್ ಅಲ್‌ಕಿಫಾಲ, ಬಾಬುದ್ದೈನ್, ಹದೀಸ್–2298, ಸಂಪುಟ–4, ಪುಟ–280, ನಝಾರತ್ ಇಶಾಅತ್)

ಸಾಲವಿದ್ದರೆ ಅದನ್ನು ನಾನು ತೀರಿಸುವೆನು, ಆದರೆ ಆತ ವಾರಸುದಾರಿಕೆಯಲ್ಲಿ ಸಂಪತ್ತನ್ನು ಬಿಟ್ಟುಹೋಗಿದ್ದರೆ ಅದು ವಾರಸುದಾರರದ್ದಾಗಿದೆ."

ಅಬ್ದುಲ್ಲಾಹ್ ಹೌಝಾನಿ ವಿವರಿಸಿದರು: 'ನಾನು ರಸೂಲುಲ್ಲಾಹ್(ಸ)ರ ಮುಅಝ್ಝಿನ್ ಆದ ಹಝ್ರತ್ ಬಿಲಾಲ್(ರ)ರನ್ನು ಹಲ್ಬ್ ಎಂಬ ಸ್ಥಳದಲ್ಲಿ ಭೇಟಿಯಾದೆ. ನಾನು ಕೇಳಿದೆ: 'ಹೇ ಬಿಲಾಲ್, ರಸೂಲುಲ್ಲಾಹ್(ಸ)ರ ಖರ್ಚು ಹೇಗಾಗುತ್ತಿತ್ತು ಎಂದು ನನಗೆ ತಿಳಿಸಿ.' ಅವರು ಹೇಳಿದರು: 'ನಬಿ(ಸ)ರ ಬಳಿ ಏನೂ ಇರುತ್ತಿರಲಿಲ್ಲ, ನಾನೇ ನಬಿ(ಸ)ರ ಪರವಾಗಿ ವ್ಯವಸ್ಥೆ ಮಾಡುತ್ತಿದ್ದೆ. ಅಲ್ಲಾಹನು ನಬಿ(ಸ)ರನ್ನು ನಿಯೋಜಿಸಿದ ನಂತರ ನಾನು ಬೈಅತ್ ಮಾಡಿದ ಕಾಲದಿಂದ ನಾನೇ ವ್ಯವಸ್ಥೆ ಮಾಡುತ್ತಿದ್ದೆ, ರಸೂಲುಲ್ಲಾಹ್(ಸ) ನಿಧನದ ವರೆಗೂ. ನಬಿ(ಸ)ರ ಬಳಿ ಯಾರಾದರೂ ಮುಸಲ್ಮಾನ ಬಂದರೆ, ಅವನ ಬಳಿ ಉಡುಪಿಲ್ಲ ಎಂದು ನಬಿ(ಸ) ನೋಡಿದರೆ, ನಬಿ(ಸ) ನನಗೆ ಆದೇಶಿಸುತ್ತಿದ್ದರು; ನಾನು ಹೋಗಿ ಸಾಲ ಪಡೆದು ಅವನಿಗಾಗಿ ಚಾದರ ಖರೀದಿಸುತ್ತಿದ್ದೆ, ಅವನಿಗೆ ತೊಡಿಸುತ್ತಿದ್ದೆ ಮತ್ತು ಅವನಿಗೆ ಊಟ ಮಾಡಿಸುತ್ತಿದ್ದೆ. ಎಲ್ಲಿಯವರೆಗೆ ಎಂದರೆ, ಬಹುದೇವಾರಾಧಕರ ಪೈಕಿ ಒಬ್ಬ ವ್ಯಕ್ತಿ ನನಗೆ ಸಿಕ್ಕಿದನು ಮತ್ತು ಅವನು ಹೇಳಿದನು: 'ಹೇ ಬಿಲಾಲ್, ನನ್ನ ಬಳಿ ಬಹಳಷ್ಟು ಸಂಪತ್ತಿದೆ, ಆದ್ದರಿಂದ ನನ್ನಿಂದ ಮಾತ್ರ ಸಾಲ ಪಡೆಯುತ್ತಿರು.' ನಂತರ ನಾನು ಹಾಗೆಯೇ ಮಾಡುತ್ತಿದ್ದೆ,' 'ಒಂದು ದಿನ ನಾನು ವುಝೂ ಮಾಡಿದೆ, ನಂತರ ನಾನು ಅಝಾನ್ ನೀಡಲು ನಿಂತಾಗ, ಅದೇ ಮುಶ್ರಿಕ್ ವ್ಯಾಪಾರಿಗಳ ಗುಂಪಿನೊಂದಿಗೆ ಬಂದು ತಲುಪಿದನು. ಆತ ನನ್ನನ್ನು ನೋಡಿದಾಗ ಹೇಳಿದನು: 'ಹೇ ಹಬ್‌ಶಿ.' ಏನಾಯಿತು ಎಂದು ನಾನು ಕೇಳಿದೆ. ಆತ ನನ್ನನ್ನು ಅಸಹ್ಯದಿಂದ ನೋಡಿ ಕಠಿಣವಾಗ ನನ್ನೊಡನೆ ಮಾತನಾಡಿದನು. ಅವನು ಹೇಳಿದನು: 'ನಿನಗೆ ಗೊತ್ತಿದೆಯೇ, ನಿನ್ನ ನಡುವೆ ಮತ್ತು ತಿಂಗಳ ನಡುವೆ ಎಷ್ಟು ದಿನ ಬಾಕಿಯಿವೆ?' (ಅಂದರೆ, ಸಾಲ ಪಡೆಯುವಾಗ ಮಾಡಿಕೊಂಡಿದ್ದ ಒಪ್ಪಂದದ ಪ್ರಕಾರ ನಿರ್ದಿಷ್ಟ ದಿನಾಂಕದೊಳಗೆ ಪಾವತಿಸುವೆನು ಅಥವಾ ಒಂದು ತಿಂಗಳೊಳಗೆ ಪಾವತಿಸುವೆನು ಎಂದು ಹೇಳಲಾಗಿತ್ತು. ಹಾಗಾಗಿ ಆತ ಹೇಳಿದನು, ನಿನಗೆ ಗೊತ್ತಿದೆಯೇ ಎಷ್ಟು ದಿನ ಬಾಕಿಯಿವೆ ಎಂದು.) ಹಝ್ರತ್ ಬಿಲಾಲ್ ಹೇಳುತ್ತಾರೆ: 'ನಾನು ಹೇಳಿದೆ, ಆ ದಿನ ಸಮೀಪಿಸುತ್ತಿದೆ ಎಂದು ನನಗೆ ಗೊತ್ತಿದೆ.' ಆತ ಹೇಳಿದನು: 'ನಿನ್ನ ಮತ್ತು ಅದರ ನಡುವೆ ಕೇವಲ ನಾಲ್ಕು ದಿನ ಬಾಕಿಯಿವೆ. ಸಾಲ ತೀರಿಸಲು ನಿಗದಿಯಾದ ಷರತ್ತಿನ ದಿನಕ್ಕೆ ಕೇವಲ ನಾಲ್ಕು ದಿನ ಬಾಕಿಯಿವೆ; ನಿನ್ನ ಮೇಲಿರುವ ಸಾಲದ ಕಾರಣದಿಂದ ನಾನು ನಿನ್ನನ್ನು ಹಿಡಿಯುವೆನು, ನಿನ್ನನ್ನು ಮತ್ತೆ ಅದೇ ಸ್ಥಿತಿಗೆ ಹಿಂದಿರುಗಿಸುವೆನು, ನೀನು ಹಿಂದಿದ್ದಂತೆ ಮತ್ತೆ ಕುರಿ–ಮೇಕೆಗಳನ್ನು ಮೇಯಿಸುವೆ.' ಬಿಲಾಲ್ ಹೇಳುತ್ತಾರೆ: 'ನನ್ನ ಹೃದಯದಲ್ಲಿ ಜನರ ಹೃದಯದಲ್ಲಿ ಉಂಟಾಗುವಂತಹದ್ದೇ ಸ್ಥಿತಿ ಉಂಟಾಯಿತು. ಬಹಳ ದುಃಖದ ಸ್ಥಿತಿ ಉಂಟಾಯಿತು. ಎಲ್ಲಿಯವರೆಗೆ ಎಂದರೆ, ನಾನು ಇಶಾ ನಮಾಝ್ ನಿರ್ವಹಿಸಿದೆ. ರಸೂಲುಲ್ಲಾಹ್(ಸ) ತಮ್ಮ ಮನೆಯವರ ಬಳಿಗೆ ಹಿಂದಿರುಗಿದರು. ನಾನು ಅವರ ಬಳಿಗೆ ಬರಲು ಅನುಮತಿ ಕೇಳಿದೆ. ನಬಿ(ಸ) ನನಗೆ ಅನುಮತಿ ನೀಡಿದರು. ರಾತ್ರಿ ನಬಿ(ಸ)ರ ಸನ್ನಿಧಿಗೆ ಹೋದೆ. ಆಗ ನಾನು ಹೇಳಿದೆ: 'ಯಾ ರಸೂಲುಲ್ಲಾಹ್, ನನ್ನ ತಂದೆ–ತಾಯಿ ನಿಮ್ಮ ಮೇಲೆ ಅರ್ಪಣೆಯಾಗಲಿ. ನಾನು ಯಾವ ಮುಶ್ರಿಕ್‌ನಿಂದ ಸಾಲ ಪಡೆಯುತ್ತಿದ್ದೆನೋ ಆತ ನನಗೆ ಹೀಗೆ–ಹೀಗೆ ಹೇಳಿದ್ದಾನೆ. ನನ್ನ ಕಡೆಯಿಂದ ನೀವು ಪಾವತಿಸುವಂತಹದ್ದೇನೂ ನಿಮ್ಮ ಬಳಿಯಿಲ್ಲ.' (ಏಕೆಂದರೆ ನೀವೇ ಹೇಳುತ್ತಿದ್ದಿರಿ, ಈ ವ್ಯಕ್ತಿಗೆ ಕೊಡು, ಈ ವ್ಯಕ್ತಿಗೆ ಕೊಡು ಎಂದು ಮತ್ತು ನಾನು ಸಾಲ ಪಡೆದು ಕೊಡುತ್ತಿದ್ದೆ. ಹಾಗಾಗಿ ಈಗ ನಿಮ್ಮ ಬಳಿಯೂ ಇಲ್ಲ ಮತ್ತು ನನ್ನ ಬಳಿಯೂ ಇಲ್ಲ. ಆತ ನನ್ನನ್ನು ಅವಮಾನಿಸಲಿದ್ದಾನೆ. ನೀವು ನನಗೆ ಅನುಮತಿ ಕೊಡಿ, ಮುಸಲ್ಮಾನರಾಗಿರುವ ಯಾವುದಾದರೂ ಗೋತ್ರಗಳ ಕಡೆಗೆ ನಾನು ಹೋಗುತ್ತೇನೆ; ಅಲ್ಲಾಹನು ತನ್ನ ರಸೂಲ್(ಸ)ರಿಗೆ ನನ್ನ ಸಾಲ ತೀರಿಸಲು ಏನನ್ನಾದರೂ ದಯಪಾಲಿಸುವಂತಾಗಲು.' ಅವರು ಹೇಳುತ್ತಾರೆ: 'ನಾನು ಹೊರಟೆ, ನನ್ನ ಮನೆ ತಲುಪಿದೆ. ಅಲ್ಲಿಂದ ನಬಿ(ಸ)ರ ಅನುಮತಿ ಪಡೆದು ನಾನು ಮನೆಗೆ ಬಂದೆ. ನನ್ನ ಖಡ್ಗ, ನನ್ನ ಚೀಲ, ನನ್ನ ಪಾದರಕ್ಷೆ ಮತ್ತು ನನ್ನ ಗುರಾಣಿಯನ್ನು ನನ್ನ ತಲೆಯ ಬಳಿ ಇಟ್ಟುಕೊಂಡೆ; ಬೆಳಿಗ್ಗೆ ಎದ್ದ ಕೂಡಲೇ, ಮುಂಜಾನೆ ಆಗುತ್ತಲೇ ನಾನು ಇಲ್ಲಿಂದ ಹೊರಡುತ್ತೇನೆ ಎಂದು ನಿರ್ಧರಿಸಿದೆ. ಬೆಳಿಗ್ಗೆ ಒಬ್ಬ ವ್ಯಕ್ತಿ ಓಡಿಬಂದು ನನ್ನನ್ನು ಕರೆಯುತ್ತಿದ್ದನು: 'ಹೇ ಬಿಲಾಲ್, ರಸೂಲುಲ್ಲಾಹ್(ಸ)ರ ಸನ್ನಿಧಿಗೆ ಹಾಜರಾಗು." 'ನಾನು ಹೋದೆ, ಮತ್ತು ಪ್ರಯಾಣ ಮಾಡುವ ಬದಲು, ನಬಿ(ಸ) ಕರೆದಾಗ ಅವರ ಸನ್ನಿಧಿಗೆ ಹಾಜರಾದೆ. ನೋಡಿದರೆ ನಾಲ್ಕು ಒಂಟೆಗಳು ಸಾಮಾನುಗಳಿಂದ ತುಂಬಿದ್ದವು. ನಾನು ಹೋಗಲು ಅನುಮತಿ ಕೇಳಿದೆ: 'ಯಾ ರಸೂಲುಲ್ಲಾಹ್, ನಾನೀಗ ಪ್ರಯಾಣಕ್ಕೆ ಹೋಗುತ್ತಿದ್ದೇನೆ.' ಆಗ ರಸೂಲುಲ್ಲಾಹ್(ಸ) ನನಗೆ ಹೇಳಿದರು: 'ಸಂತೋಷಪಡು. ಅಲ್ಲಾಹನು ನಿನ್ನ ಸಾಲ ತೀರಿಸಲು ವ್ಯವಸ್ಥೆ ಮಾಡಿದ್ದಾನೆ.' ನಂತರ ಹೇಳಿದರು: 'ನೀನು ಕುಳಿತಿರುವ ನಾಲ್ಕು ಒಂಟೆಗಳನ್ನು ನೋಡಲಿಲ್ಲವೇ?' ನಾನು, 'ಖಂಡಿತ ನೋಡಿದ್ದೇನೆ' ಎಂದೆ. ನಬಿ(ಸ) ಹೇಳಿದರು: 'ಅವುಗಳ ಮೇಲಿರುವುದೆಲ್ಲವೂ ನಿನಗಾಗಿವೆ.' (ಅಂದರೆ ಆ ಒಂಟೆಗಳೂ ನಿನ್ನವು, ಮತ್ತು ಅವುಗಳ ಮೇಲಿರುವ ಸಂಪತ್ತೂ ನಿನ್ನದು.) 'ಅವುಗಳ ಮೇಲೆ ಬಟ್ಟೆಗಳಿವೆ ಮತ್ತು ಧಾನ್ಯಗಳಿವೆ, ಅದನ್ನು ಫದಕ್‌ನ ನಾಯಕನು ನನಗೆ ಉಡುಗೊರೆಯಾಗಿ ಕಳುಹಿಸಿದ್ದಾನೆ. ಇವುಗಳನ್ನು ತೆಗೆದುಕೋ ಮತ್ತು ನಿನ್ನ ಸಾಲವನ್ನು ತೀರಿಸು." ಹಝ್ರತ್ ಬಿಲಾಲ್ ಹೇಳುತ್ತಾರೆ: 'ನಾನು ಹಾಗೆಯೇ ಮಾಡಿದೆ. ನಂತರ ನಾನು ಮಸೀದಿಯ ಕಡೆಗೆ ಹೋದೆ. ರಸೂಲುಲ್ಲಾಹ್(ಸ) ಮಸೀದಿಯಲ್ಲಿ ಕುಳಿತಿದ್ದರು. ನಾನು ನಿಮಗೆ ಸಲಾಂ ಮಾಡಿದೆ. ನಬಿ(ಸ) ಕೇಳಿದರು: 'ನಿನಗೆ ಎದುರಾಗಿದ್ದ ಸಮಸ್ಯೆಯು ಏನಾಯಿತು?' ನಾನು ಹೇಳಿದೆ: 'ರಸೂಲುಲ್ಲಾಹ್(ಸ)ರ ಮೇಲಿದ್ದ ಪ್ರತಿಯೊಂದು ಸಾಲವನ್ನೂ ಅಲ್ಲಾಹನು ತೀರಿಸಿದ್ದಾನೆ, ಯಾವುದೇ ಸಾಲ ಬಾಕಿಯಿಲ್ಲ.' ನಬಿ(ಸ) ಕೇಳಿದರು: 'ಸಂಪತ್ತಿನಲ್ಲಿ ಏನಾದರೂ ಉಳಿದಿದೆಯೇ?' ನಾನು, 'ಹೌದು' ಎಂದೆ. ನಬಿ(ಸ) ಹೇಳಿದರು: 'ನೋಡು, ನೀನು ನನಗೆ ಈ ಸಂಪತ್ತಿನಿಂದಲೂ ನೆಮ್ಮದಿ ನೀಡು' ಅಂದರೆ ಉಳಿದಿರುವುದನ್ನು ಕೊಟ್ಟು ನೆಮ್ಮದಿ ನೀಡು 'ಅದನ್ನು ಬಡವರ ಮೇಲೆ ಖರ್ಚು ಮಾಡು. ಏಕೆಂದರೆ, ನೀನು ಅದನ್ನು ಕೊಟ್ಟು ನನಗೆ ನೆಮ್ಮದಿ ನೀಡುವವರೆಗೂ ನಾನು ನನ್ನ ಮನೆಯವರ ಬಳಿಗೆ ಹೋಗುವುದಿಲ್ಲ.' ರಸೂಲುಲ್ಲಾಹ್(ಸ) ಇಶಾ ನಿರ್ವಹಿಸಿದ ನಂತರ, ನನ್ನನ್ನು ಕರೆದು ಕೇಳಿದರು: 'ನಿನಗೆ ಎದುರಾಗಿದ್ದರ ಗತಿಯೇನಾಯಿತು?'

ಅಂದರೆ, ಹಂಚಲು ಹೇಳಿದ್ದ ಉಳಿದ ಸಂಪತ್ತು ಏನಾಯಿತು. ಹಝ್ರತ್ ಬಿಲಾಲ್ ಹೇಳುತ್ತಾರೆ: 'ನಾನು ಹೇಳಿದೆ: ಯಾರೂ ನಮ್ಮ ಬಳಿ ಪಡೆಯಲು ಬರಲೇ ಇಲ್ಲ. ಅದು ನನ್ನ ಬಳಿ ಹಾಗೆಯೇ ಇದೆ.' ರಸೂಲುಲ್ಲಾಹ್(ಸ) ರಾತ್ರಿಯನ್ನು ಮಸೀದಿಯಲ್ಲೇ ಕಳೆದರು. ನಬಿ(ಸ) ಹೇಳಿದರು: 'ಸರಿ, ಹಾಗಾದರೆ ನಾನೂ ಮನೆಗೆ ಹೋಗುವುದಿಲ್ಲ, ಮಸೀದಿಯಲ್ಲೇ ಇರುತ್ತೇನೆ.' ಮರುದಿನ ನಬಿ(ಸ) ಇಶಾ ನಮಾಝ್ ನಿರ್ವಹಿಸಿದ ನಂತರ ನನ್ನನ್ನು ಕರೆದು ಕೇಳಿದರು: 'ನಿನಗೆ ಎದುರಾಗಿದ್ದರ ಗತಿಯೇನಾಯಿತು?' ನಾನು ಹೇಳಿದೆ: 'ಹೇ ಅಲ್ಲಾಹನ ರಸೂಲ್, ಅಲ್ಲಾಹನು ನಿಮಗೆ ಅದರ ಕಡೆಯಿಂದ ನೆಮ್ಮದಿ ನೀಡಿದ್ದಾನೆ." ನಬಿ(ಸ) ಅಲ್ಲಾಹನನ್ನು ಸ್ತುತಿಸಿದನು. (ಅಂದರೆ ಸಂಪತ್ತು ಹಂಚಿಕೆಯಾಗಿದೆ.) ಆ ಸಂಪತ್ತು ನಬಿ(ಸ)ರ ಬಳಿ ಇರುವಾಗಲೇ ಅವರ ಮರಣವು ಬರಬಹುದೆಂಬ ಭಯದಿಂದ ಅವರು ಅಲ್ಲಾಹನ ಹಿರಿಮೆ ಮತ್ತು ಅವನ ಸ್ತುತಿಯನ್ನು ಮಾಡಿದರು. ಹಝ್ರತ್ ಬಿಲಾಲ್ ಹೇಳುತ್ತಾರೆ: 'ನಂತರ ನಾನು ನಬಿ(ಸ)ರ ಹಿಂದೆ-ಹಿಂದೆ ಹೋದೆ, ಎಲ್ಲಿಯವರೆಗೆ ಎಂದರೆ ನಬಿ(ಸ) ಅವರ ಪತ್ನಿಯರ ಬಳಿಗೆ ಹೋಗಿ ಪ್ರತಿಯೊಬ್ಬರಿಗೂ ಸಲಾಂ ಹೇಳಿದರು; ಅನಂತರ ನಬಿ(ಸ) ರಾತ್ರಿ ಕಳೆಯಬೇಕಿದ್ದ ಕೊಠಡಿಗೆ ಹೋದರು." (ಸುನನ್ ಅಬಿ ದಾವುದ್, ಕಿತಾಬುಲ್ ಖ಼ರಾಜ್......, ಹದೀಶ್-3055)

ಹಝ್ರತ್ ಉಮ್ಮು ಸುಂಬುಲಾ(ರ) ವಿವರಿಸುತ್ತಾರೆ: 'ನಾನು ನಬಿ(ಸ)ರ ಸನ್ನಿಧಿಯಲ್ಲಿ ಒಂದು ಉಡುಗೊರೆಯನ್ನು ತೆಗೆದುಕೊಂಡು ಬಂದೆ. ನಬಿ(ಸ)ರ ಪತ್ನಿಯರು ಅದನ್ನು ತೆಗೆದುಕೊಳ್ಳಲು ನಿರಾಕರಿಸಿದರು ಮತ್ತು 'ನಾವು ಉಡುಗೊರೆಯನ್ನು ಸ್ವೀಕರಿಸುವುದಿಲ್ಲ' ಎಂದರು. ನಂತರ ರಸೂಲುಲ್ಲಾಹ್(ಸ) ಬಂದರು ಮತ್ತು ಹೇಳಿದರು: 'ಉಮ್ಮು ಸುಂಬುಲಾರ ಉಡುಗೊರೆಯನ್ನು ಸ್ವೀಕರಿಸಿ, ಏಕೆಂದರೆ ಆಕೆ ನಮ್ಮ ಹಳ್ಳಿಗರ ಪೈಕಿ ಒಬ್ಬರಾಗಿದ್ದಾರೆ, ನಾವು ಆಕೆಯ ಊರಿನವರ ಪೈಕಿ ಒಬ್ಬರಾಗಿದ್ದೇವೆ.' ನಂತರ ನಬಿ(ಸ) ಅವರ ಉಡುಗೊರೆಯನ್ನು ಸ್ವೀಕರಿಸಿದರು ಮತ್ತು ಅವರಿಗೆ ಒಂದು ಕಣಿವೆಯನ್ನು ದಯಪಾಲಿಸಿದರು.' (ಅಸದುಲ್‌ಗ಼ಾಬ, ಸಂಪುಟ-7, ಪಟುಟ-336, ದಾರುಲ್ ಕುತುಬ್ ಇಲ್ಮಿಯಾ 1994) ಅಂದರೆ, ಆ ಉಡುಗೊರೆಗೆ ಪ್ರತಿಯಾಗಿ ಒಂದು ಇಡೀ ಪ್ರದೇಶವನ್ನು ನೀಡಿದರು. ಮೊದಲು ವಿವರಿಸಿದಂತೆ, ನಬಿ(ಸ) ಚಿಕ್ಕ ಉಡುಗೊರೆಗೆ ಪ್ರತಿಯಾಗಿಯೂ ಅಪಾರವಾಗಿ ನೀಡುತ್ತಿದ್ದರು.

ಹಝ್ರತ್ ಇಬ್ನೆ ಉಮರ್(ರ) ವಿವರಿಸುತ್ತಾರೆ: 'ನಬಿ(ಸ) ಹಝ್ರತ್ ಜುಬೈರ್(ರ)ಗೆ ಅವರ ಕುದುರೆ ಎಲ್ಲಿಯವರೆಗೆ ತಲುಪುವುದೋ ಅಲ್ಲಿಯವರೆಗೆ ಜಮೀನನ್ನು ಜಾಗೀರಾಗಿ ನೀಡಲು ಆದೇಶಿಸಿದರು. 'ನಿನ್ನ ಕುದುರೆಯನ್ನು ಓಡಿಸು, ಅದು ಎಲ್ಲಿ ಹೋಗಿ ನಿಲ್ಲುತ್ತದೋ ಆ ಇಡೀ ಪ್ರದೇಶವು ನಿನ್ನದು' ಎಂದು ಹೇಳಿದರು.' ವಿಜಯಗಳ ನಂತರ ಬಹಳ ವಿಶಾಲವಾದ ಪ್ರದೇಶವು ಬಂದಿತ್ತು. 'ಹಾಗಾಗಿ ಅವರು ತಮ್ಮ ಕುದುರೆಯನ್ನು ಓಡಿಸಿದರು, ಎಲ್ಲಿಯವರೆಗೆ ಎಂದರೆ ಅದು ಒಂದು ಜಾಗಕ್ಕೆ ಬಂದು ನಿಂತಿತು. ಅದು ನಿಂತಾಗ ಅವರು ಇನ್ನು ಸ್ವಲ್ಪ ಸಿಗಬೇಕೆಂದು ಬಯಸಿದರು, ಹಾಗಾಗಿ ಅವರು ಕೈಯಲ್ಲಿದ್ದ ಚಾವಟಿಯನ್ನು ಎಸೆದರು. ಅದು ಸಾಕಷ್ಟು ದೂರ ಹೋಯಿತು. ಆಗ ನಬಿ(ಸ) ಹೇಳಿದರು: 'ಅವರಿಗೆ ಅವನ ಚಾವಟಿ ತಲುಪಿದ ಹಂತದವರೆಗೆ ಜಮೀನನ್ನು ಕೊಡಿರಿ." ಅಂದರೆ ಅವರು ಕುದುರೆಯ ಚಾವಟಿಯನ್ನು ಎಲ್ಲಿಯವರೆಗೆ ಎಸೆದನೋ, ಅಲ್ಲಿಯವರೆಗೆ ಅವರಿಗೆ ಜಮೀನನ್ನು ಕೊಡಿ ಎಂದು ಹೇಳಿದರು.

(ಸುನನ್ ಅಬುದಾವುದ್, ಕಿತಾಬುಲ್ ಖಿರಾಜ್......, ಹದೀಸ್-3072)

ಹಝ್ರತ್ ಜುಬೈರ್ ಬಿನ್ ಮುತ್‌ಇಮ್(ರ) ವಿವರಿಸುತ್ತಾರೆ: 'ಒಮ್ಮೆ ಅವರು ರಸೂಲುಲ್ಲಾಹ್(ಸ)ರೊಂದಿಗೆ ಹೋಗುತ್ತಿದ್ದರು. ನಬಿ(ಸ)ರೊಂದಿಗೆ ಬೇರೆ ಜನರೂ ಇದ್ದರು. ಇದು ನಬಿ(ಸ) ಹುನೈನ್‌ನಿಂದ ಹಿಂತಿರುಗುತ್ತಿದ್ದಾಗ ನಡೆದ ಘಟನೆಯಾಗಿದೆ. ದಾರಿಯಲ್ಲೇ ಕೆಲವು ಹಳ್ಳಿಗರು ನಬಿ(ಸ)ರ ಹಿಂದೆ ಬಿದ್ದರು ಮತ್ತು ನಬಿ(ಸ)ರೊಡನೆ ಯಾಚಿಸಲಾರಂಭಿಸಿದರು. ಅವರು ನಬಿ(ಸ)ರನ್ನು ಎಷ್ಟೊಂದು ಒತ್ತಾಯಿಸಿದರೆಂದರೆ, ನಬಿ(ಸ)ರಿಗೆ ಒಂದು ಜಾಲಿ ಮರದ ಕಡೆಗೆ ಸರಿಯಬೇಕಾಯಿತು, ಅದರಿಂದ ನಬಿ(ಸ)ರ ಚಾದರ ಮರದಲ್ಲಿ ಸಿಕ್ಕಿಹಾಕಿಕೊಂಡಿತು. ನಬಿ(ಸ) ನಿಂತುಬಿಟ್ಟರು.' ಕೆಲವು ವರದಿಗಳಲ್ಲಿ ಇದೂ ಇದೆ: 'ಚಾದರ ಸಿಕ್ಕಿಹಾಕಿಕೊಂಡಾಗ ಅವರು ಚಾದರವನ್ನು ಎಳೆಯಲಾರಂಭಿಸಿದರು, ಇದರಿಂದ ನಬಿ(ಸ)ರ ಕುತ್ತಿಗೆಯ ಮೇಲೆ ಕಲೆಗಳೂ ಮೂಡಿದವು.' 'ನಬಿ(ಸ) ಹೇಳಿದರು: 'ನನ್ನ ಚಾದರವನ್ನು ಕೊಡಿ; ಒಂದು ವೇಳೆ ನನ್ನ ಬಳಿ ಈ ಮುಳ್ಳಿನ ಮರಗಳ ಸಂಖ್ಯೆಯಷ್ಟು ಜಾನುವಾರುಗಳಿದ್ದರೂ, ನಾನು ಖಂಡಿತವಾಗಿಯೂ ಅವುಗಳನ್ನು ನಿಮ್ಮ ನಡುವೆ ಹಂಚಿಬಿಡುತ್ತಿದ್ದೆ; ಮತ್ತು ನೀವು ನನ್ನನ್ನು ಎಂದಿಗೂ ಜಿಪುಣ, ಸುಳ್ಳುಗಾರ ಅಥವಾ ಹೇಡಿ ಎಂದು ಕಾಣುತ್ತಿರಲಿಲ್ಲ."

(ಸಹೀಹ್ ಬುಖಾರಿ ಅನುವಾದ ಕಿತಾಬುಲ್ ಜಿಹಾದ್ ವಸ್ಸೈರ್, ಹದೀಸ್-2821, ಸಂಪುಟ-9, ಪಟುಟ-185, ನಝ್ಹಾರತ್ ಇಶಾಅತ್ ರಬ್ವಾಹ್, ಅಲ್‌ಲುಲು ವಲ್ ಮಕ್ನೂನ್, ಸೀರತ್ ಇನ್‌ಸೈಕ್ಲೊಪೀಡಿಯಾ, ಸಂಪುಟ-9, ಪುಟ-352-353, ದಾರುಸ್ಸಲಾಮ್ ರಿಯಾದ್)

ಈ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಬರೆದಿದ್ದಾರೆ: 'ಮಕ್ಕಾ ವಿಜಯ ಮತ್ತು ಹುನೈನ್ ಕದನದಿಂದ ಮುಕ್ತರಾದ ನಂತರ, ಸೋತ ಶತ್ರುಗಳ ದಂಡದಿಂದ ಮತ್ತು ಯುದ್ಧಭೂಮಿಯಲ್ಲಿ ಬಿಟ್ಟುಹೋದ ವಸ್ತುಗಳಿಂದ ಸಂಗ್ರಹವಾದ ಸಂಪತ್ತನ್ನು, ನಿಯಮದಂತೆ, ರಸೂಲುಲ್ಲಾಹ್(ಸ) ಇಸ್ಲಾಮಿಕ್ ಸೈನ್ಯದಲ್ಲಿ ಹಂಚಬೇಕಿತ್ತು. ಆದರೆ ಈ ಸಂದರ್ಭದಲ್ಲಿ ನಬಿ(ಸ) ಆ ಸಂಪತ್ತನ್ನು ಮುಸಲ್ಮಾನರಲ್ಲಿ ಹಂಚುವ ಬದಲು ಮಕ್ಕಾ ಮತ್ತು ಸುತ್ತಮುತ್ತಲಿನ ಜನರಲ್ಲಿ ಹಂಚಿದರು. ಈ ಜನರೊಳಗೆ ಇನ್ನೂ ಸತ್ಯವಿಶ್ವಾಸ ಮೂಡಿರಲಿಲ್ಲ, ಬಹಳಷ್ಟು ಮಂದಿ ಇನ್ನೂ ಕಾಫಿರರೇ ಆಗಿದ್ದರು, ಮುಸಲ್ಮಾನರಾದವರೂ ಹೊಸದಾಗಿ ಮುಸಲ್ಮಾನರಾಗಿದ್ದರು. ಒಂದು ಜನಾಂಗವು ತನ್ನ ಸಂಪತ್ತನ್ನು ಬೇರೆ ಜನರಲ್ಲಿ ಹಂಚುತ್ತಿರುವುದು ಅವರಿಗೆ ಸಂಪೂರ್ಣವಾಗಿ ಹೊಸ ವಿಷಯವಾಗಿತ್ತು. ಈ ಸಂಪತ್ತಿನ ಹಂಚಿಕೆಯಿಂದ ಅವರ ಮನಸ್ಸಿನಲ್ಲಿ ಒಳಿತು ಮತ್ತು ದೇವಭಯ ಮೂಡುವ ಬದಲು, ಅವರ ದುರಾಸೆ ಇನ್ನಷ್ಟು ಹೆಚ್ಚಾಯಿತು. ಅವರು ರಸೂಲುಲ್ಲಾಹ್(ಸ)ರ ಸುತ್ತಲೂ ಜಮಾಯಿಸಿದರು ಮತ್ತು ಹೆಚ್ಚಿನ ಬೇಡಿಕೆಗಳೊಂದಿಗೆ ನಬಿ(ಸ)ರನ್ನು ಕಾಡಲಾರಂಭಿಸಿದರು. ಎಲ್ಲಿಯವರೆಗೆ ಎಂದರೆ ತಳ್ಳುತ್ತಾ ತಳ್ಳುತ್ತಾ ಅವರು ನಬಿ(ಸ)ರನ್ನು ಒಂದು ಮರದ ಬಳಿಗೆ ಕೊಂಡೊಯ್ದರು. ಒಬ್ಬ ವ್ಯಕ್ತಿ ನಬಿ(ಸ)ರ ಭುಜದ ಮೇಲಿದ್ದ ಚಾದರವನ್ನು ಹಿಡಿದು ಈ ರೀತಿ ತಿರುಚಲಾರಂಭಿಸಿದನೆಂದರೆ ಅವರ ಉಸಿರು ಕಟ್ಟುವಂತಾಯಿತು. ನಬಿ(ಸ) ಹೇಳಿದರು: 'ಹೇ ಜನರೇ, ನನ್ನ ಬಳಿ ಇನ್ನೇನಾದರೂ ಇದ್ದಿದ್ದರೆ ನಾನು ಅದನ್ನೂ ನಿಮಗೆ ಕೊಡುತ್ತಿದ್ದೆ, ನೀವು ನನ್ನನ್ನು ಎಂದಿಗೂ ಜಿಪುಣ ಅಥವಾ ಹೇಡಿ ಎಂದು ಕಾಣಲಾರಿರಿ.' ನಂತರ ನಬಿ(ಸ) ತನ್ನ ಒಂಟೆಯ ಬಳಿ ಹೋಗಿ ಅದರ ಒಂದು ಕೂದಲನ್ನು ಕಿತ್ತು ಮೇಲಕ್ಕೆತ್ತಿ ಹೇಳಿದರು: 'ಹೇ ಜನರೇ, ಅರೇಬಿಯಾದ ಕಾನೂನಿನ ಪ್ರಕಾರ ಸರ್ಕಾರಕ್ಕೆ ಸೇರಬೇಕಾದ ಐದನೇ ಒಂದು ಭಾಗವನ್ನು ಹೊರತುಪಡಿಸಿ, ನನಗೆ ನಿಮ್ಮ ಸಂಪತ್ತಿನಲ್ಲಿ ಈ ಕೂದಲಿನಷ್ಟೂ ಅಗತ್ಯವಿಲ್ಲ. ಆ ಐದನೇ ಒಂದು ಭಾಗವನ್ನೂ ನಾನು ನನ್ನ ಮೇಲೆ ಖರ್ಚು ಮಾಡುವುದಿಲ್ಲ, ಬದಲಾಗಿ ಅದನ್ನೂ ನಿಮ್ಮ ಜನೋಪಯೋಗಿ ಕೆಲಸಗಳಿಗೇ ಖರ್ಚು ಮಾಡಲಾಗುತ್ತದೆ. ನೆನಪಿಡಿ, ವಿಶ್ವಾಸದ್ರೋಹ ಮಾಡುವ ಮನುಷ್ಯನು ಖಿಯಾಮತ್ ದಿನ ದೇವನ ಸನ್ನಿಧಿಯಲ್ಲಿ ಈ ವಿಶ್ವಾಸದ್ರೋಹದ ಕಾರಣದಿಂದಾಗಿ ಅವಮಾನಿತನಾಗುವನು." ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮುಹಮ್ಮದ್ ರಸೂಲುಲ್ಲಾಹ್(ಸ) ರಾಜತ್ವದ ಆಕಾಂಕ್ಷಿಯಾಗಿದ್ದರು ಎಂದು ಜನರು ಹೇಳುತ್ತಾರೆ. ರಾಜರು ಮತ್ತು ಸಾರ್ವಜನಿಕರ ನಡುವೆ ಇಂತಹದ್ದೇ ಸಂಬಂಧವಿರುತ್ತದೆಯೇ? ರಾಜನನ್ನು ಈ ರೀತಿ ತಳ್ಳುತ್ತಾ ಕೊಂಡೊಯ್ದು, ಅವನ ಕೊರಳಿಗೆ ಬಟ್ಟೆ ಹಾಕಿ ಉಸಿರುಗಟ್ಟಿಸುವ ಧೈರ್ಯ ಯಾರಿಗಾದರೂ ಇರುತ್ತದೆಯೇ? ಅಲ್ಲಾಹನ ರಸೂಲ್‌ಗಳನ್ನು ಬಿಟ್ಟು ಈ ಮಾದರಿಯನ್ನು ಬೇರೆ ಯಾರು ತೋರಿಸಬಲ್ಲರು?' (ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ-20, ಪುಟ-357-358)

ತಬೂಕ್ ಕದನದಲ್ಲಿ ನಬಿ(ಸ)ರಿಗೆ ಒಂದು ಸುಂದರವಾದ ಕುದುರೆ ಸಿಕ್ಕಿತು, ಅದರ ದನಿ ನಿಮಗೆ ಬಹಳ ಇಷ್ಟವಾಗಿತ್ತು. ಆಗ ಒಬ್ಬ ಅನ್ಸಾರಿ ನಬಿ(ಸ)ರೊಡನೆ ಹೇಳಿದನು: 'ನನ್ನ ತಾಯಿ-ತಂದೆ ನಿಮ್ಮ ಮೇಲೆ ಅರ್ಪಣೆಯಾಗಲಿ, ಈ ಕುದುರೆಯನ್ನು ನನಗೆ ದಯಪಾಲಿಸಿ.' ನಬಿ(ಸ) ಹೇಳಿದರು: 'ಇದು ನಿನ್ನದಾಯಿತು.' (ಶರ್ಫುಲ್ ಮುಸ್ತಫಾ, ಭಾಗ-3, ಪುಟ-299, ಜಾಮಿ ಅಬ್ವಾಬ್ ಮಾಕಾನನ್ನಬಿಯ್ಯು(ಶ) ಮಿನ್ ಅಝ್ವಾಜಿ ವಲ್ ಇಮ್ಮಾ, ಹದೀಸ್-1040, ದಾರುಲ್ ಬಶಾಎರುಲ್ ಇಸ್ಲಾಮಿಯ, 2004)

ಹಝ್ರತ್ ಆಯಿಶಾ(ರ) ವಿವರಿಸುತ್ತಾರೆ: 'ರಸೂಲುಲ್ಲಾಹ್(ಸ) ತಮ್ಮ ಮರಣಾ ಶಯ್ಯೆಯಲ್ಲಿ ಹೇಳಿದರು: 'ಹೇ ಆಯಿಶಾ, ಚಿನ್ನ ಏನಾಯಿತು?' ಅವರು ಮನೆಯಲ್ಲಿದ್ದ ಚಿನ್ನದ ಐದು ಅಥವಾ ಏಳು ಅಥವಾ ಎಂಟು-ಒಂಬತ್ತು ನಾಣ್ಯಗಳನ್ನು ತಂದರು. ನಬಿ(ಸ) ಅವುಗಳನ್ನು ಕೈಯಲ್ಲಿ ತಿರುಗಿಸುತ್ತಾ ಹೇಳಿದರು: 'ಮುಹಮ್ಮದ್(ಸ) ಅಲ್ಲಾಹನ ಬಗ್ಗೆ ಏನು ಭಾವಿಸಿರಬಹುದು, ಅಲ್ಲಾಹನನ್ನು ಭೇಟಿಯಾಗುವಾಗ ಈ ಚಿನ್ನ ಅವನ ಬಳಿ ಇರುವುದೇ?' 'ಹೇ ಆಯಿಶಾ, ಇವುಗಳನ್ನು ಹಂಚಿಬಿಡು.'

(ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-8, ಪುಟ-53, ಹದೀಸ್-24726, ಆಲಮುಲ್ ಕುತುಬ್ ಬೈರುತ್ 1998)

ಹಝ್ರತ್ ಮಸೀಹ್ ಮೌಊದ್(ಅ) ಒಂದೆಡೆ ಹೇಳುತ್ತಾರೆ: 'ನಬಿ(ಸ) ಒಮ್ಮೆ ತಮ್ಮ ಮನೆಗೆ ಬಂದು, 'ನಮ್ಮ ಮನೆಯಲ್ಲಿ ಏನಿದೆ?' ಎಂದು ಕೇಳಿದರು. ಆಯಿಶಾ ಎರಡು ಚಿನ್ನದ ನಾಣ್ಯಗಳು ತೆಗೆದುಕೊಟ್ಟು, 'ಇಷ್ಟೇ ಇರುವುದು' ಎಂದರು. ನಬಿ(ಸ) ಅವುಗಳನ್ನು ಅಂಗೈಯಲ್ಲಿ ಇಟ್ಟುಕೊಂಡು, 'ತನ್ನ ಹಿಂದೆ ಎರಡು ಅಶ್ರಫಿಗಳನ್ನು ಬಿಟ್ಟುಹೋಗುವ ಆ ಪ್ರವಾದಿಯ ಸ್ಥಿತಿ ಏನಾಗಬಹುದು' ಎಂದು ಹೇಳಿ, ಅದೇ ಕ್ಷಣದಲ್ಲಿ ಹಂಚಿಬಿಟ್ಟರು.' (ಮಲ್‌ಫೂಝಾತ್, ಸಂಪುಟ–9, ಪುಟ–281, 2022)

ಹುನೈನ್‌ನ ಯುದ್ಧ ಸಂಪತ್ತಿನ ವಿವರಗಳನ್ನು ನೀಡಲಾಗಿದೆ: ಅಲ್ಲಿ ಯುದ್ಧ ಸಂಪತ್ತಿನಲ್ಲಿ ಆರು ಸಾವಿರ ಗುಲಾಮರು ಮತ್ತು ದಾಸಿಯರು ಸಿಕ್ಕರು. ಕೆಲವು ವರದಿಗಳಲ್ಲಿ ಎಂಟು ಸಾವಿರ ಎಂದೂ ಹೇಳಲಾಗುತ್ತದೆ. ಇಪ್ಪತ್ತನಾಲ್ಕು ಸಾವಿರ ಒಂಟೆಗಳು, ನಲವತ್ತು ಸಾವಿರಕ್ಕೂ ಹೆಚ್ಚು ಕುರಿ–ಮೇಕೆಗಳು, ಮತ್ತು ನಾಲ್ಕು ಸಾವಿರ ಊಖಿಯಾ ಬೆಳ್ಳಿ (ಅಂದರೆ ಸುಮಾರು 490 ಕಿಲೋಗ್ರಾಂ). ಒಂದು ಊಖಿಯಾ ಹತ್ತೂವರೆ ತೊಲಗಳಿಗೆ ಸಮನಾಗಿರುತ್ತದೆ. 'ನಬಿ(ಸ) ಯುದ್ಧ ಸಂಪತ್ತನ್ನು ಹಂಚಲು ಪ್ರಾರಂಭಿಸಿದರು, ವಿರೋಧಿಗಳ ಮನವೊಲಿಸುವಿಕೆಯಿಂದ ಆರಂಭಿಸಿದರು. ಇವರು ಅರೇಬಿಯಾದ ದೊಡ್ಡ ಜನರಾಗಿದ್ದರು ಮತ್ತು ತಮ್ಮ–ತಮ್ಮ ಗೋತ್ರಗಳಲ್ಲಿ ಗೌರವ ಹಾಗೂ ಹಿರಿಮೆಯ ಸ್ಥಾನವನ್ನು ಹೊಂದಿದ್ದರು. ನಬಿ(ಸ) ಅವರನ್ನು ಒಲಿಸಿಕೊಳ್ಳಲು ಉಡುಗೊರೆಗಳನ್ನು ನೀಡಿದರು. ನಬಿ(ಸ) ಅವರಲ್ಲಿ ಕೆಲವರಿಗೆ ನೂರು ಒಂಟೆಗಳನ್ನು ಕೊಟ್ಟರು, ಕೆಲವರಿಗೆ ಐವತ್ತು ಒಂಟೆಗಳನ್ನು ಕೊಟ್ಟರು, ಇದಲ್ಲದೇ ಬೆಳ್ಳಿ ಮತ್ತು ಗುಲಾಮರು ಬೇರೆ. ಅಬೂ ಸುಫ್ಯಾನ್ ಬಿನ್ ಹರ್ಬ್‌ಗೆ ನೂರು ಒಂಟೆಗಳನ್ನು ಕೊಟ್ಟರು. ಅಬೂ ಸುಫ್ಯಾನ್ ರಸೂಲ್(ಸ)ರ ಸನ್ನಿಧಿಗೆ ಬಂದಾಗ, ನಬಿ(ಸ)ರ ಮುಂದೆ ಬೆಳ್ಳಿಯ ರಾಶಿಯಿರುವುದನ್ನು ಕಂಡು ಹೇಳಲಾರಂಭಿಸಿದನು: 'ಯಾ ರಸೂಲುಲ್ಲಾಹ್, ನೀವಂತೂ ಖುರೈಶ್‌ಗಳಲ್ಲಿ ಅತ್ಯಂತ ಶ್ರೀಮಂತರಾಗಿದ್ದೀರಿ.' ಆಗ ನಬಿ(ಸ) ಮುಗುಳ್ನಕ್ಕರು ಮತ್ತು ಅಬೂ ಸುಫ್ಯಾನ್‌ಗೆ ನಲವತ್ತು ಊಖಿಯಾ ಬೆಳ್ಳಿ ಮತ್ತು ನೂರು ಒಂಟೆಗಳನ್ನು ನೀಡಿದರು. ಅಬೂ ಸುಫ್ಯಾನ್ ಹೇಳಿದನು: 'ನನ್ನ ಮಗ ಯಝೀದ್‌ಗೂ ದಯಪಾಲಿಸಿ.' ನಬಿ(ಸ) ಅವನಿಗೂ ನಲವತ್ತು ಊಖಿಯಾ ಬೆಳ್ಳಿ ಮತ್ತು ನೂರು ಒಂಟೆಗಳನ್ನು ನೀಡಲು ಆದೇಶಿಸಿದರು.' ಈ ಯಝೀದ್ ಅಬೂ ಸುಫ್ಯಾನ್‌ನ ಮಗನಾಗಿದ್ದನು, ಕುಖ್ಯಾತ ಯಝೀದ್ ಎಂದು ಯಾರ ಬಗ್ಗೆ ಹೇಳಲಾಗುತ್ತದೆಯೋ ಅವರು ಮಗನಲ್ಲ, ಅವನು ಅಬೂ ಸುಫ್ಯಾನ್‌ನ ಮೊಮ್ಮಗನಾಗಿದ್ದನು, ಅಂದರೆ ಹಝ್ರತ್ ಮುಆವಿಯಾನ ಮಗನಾಗಿದ್ದನು. 'ಹೇಗಿದ್ದರೂ, ಅಬೂ ಸುಫ್ಯಾನ್ ಹೇಳಲಾರಂಭಿಸಿದನು: 'ಯಾ ರಸೂಲುಲ್ಲಾಹ್, ನನ್ನ ಇನ್ನೊಬ್ಬ ಮಗ ಮುಆವಿಯಾಗೂ ಏನಾದರೂ ಕೊಡಿ.' ನೀವು ಅವನಿಗೂ ನಲವತ್ತು ಊಖಿಯಾ ಬೆಳ್ಳಿ ಮತ್ತು ನೂರು ಒಂಟೆಗಳನ್ನು ನೀಡಲು ಆದೇಶಿಸಿದರು. ಆಗ ಅಬೂ ಸುಫ್ಯಾನ್ ಹೇಳಲಾರಂಭಿಸಿದನು: 'ನನ್ನ ತಾಯಿ–ತಂದೆ ನಿಮ್ಮ ಮೇಲೆ ಅರ್ಪಣೆಯಾಗಲಿ. ನೀವು ಉದಾರಿಯಾಗಿದ್ದೀರಿ. ನಾನು ನಿಮ್ಮೊಡನೆ ಯುದ್ಧಗಳನ್ನು ಮಾಡಿದ್ದೇನೆ; ನೀವು ಎಂತಹ ಒಳ್ಳೆಯ ಯೋಧರಾಗಿದ್ದೀರಿ. ನಂತರ ನಾನು ನಿಮ್ಮೊಡನೆ ಶಾಂತಿ ಒಪ್ಪಂದ ಮಾಡಿಕೊಂಡೆ; ನೀವು ಎಂತಹ ಒಳ್ಳೆಯ ಶಾಂತಿಪ್ರಿಯರಾಗಿದ್ದೀರಿ. ಅಲ್ಲಾಹನು ನಿಮಗೆ ಅತ್ಯುತ್ತಮ ಪ್ರತಿಫಲ ನೀಡಲಿ." (ಶರಹ್ ಅಲಾಮಾತುಝ್ಝುರ್‌ಖಾಯಿ, ಸಂಪುಟ–4, ಪುಟ–18–19, ಸಬ್ಲುಲ್ ಹುದಾ ಸಂಪುಟ–5, ಪಉಟ–369, ದಾಎರಾ ಮುಆರಿಫ್ ಸೀರತ್ ಮುಹಮ್ಮದ್(ಸ), ಸಂಪುಟ–9, ಪಉಟ–289, ಬಝ್ಮ್ ಇಖ್ಬಾಲ್ ಲಾಹೋರ್, ಗಝ್ವಾ ಹುನೈನ್ ಅಜ್ ಬಾಶಮೀಲ್, ಪುಟ–273–274)

ನಬಿ(ಸ)ರ ದಾನ ಮತ್ತು ಉಡುಗೊರೆಯಿಂದ ಲಾಭ ಪಡೆದವರಲ್ಲಿ ಮಕ್ಕಾದ ನಾಯಕನಾದ ಸಫ್ವಾನ್ ಬಿನ್ ಉಮಯ್ಯಾ ಕೂಡ ಒಬ್ಬನಾಗಿದ್ದನು. ಯಾರಿಂದ ನಬಿ(ಸ) ಹುನೈನ್ ಕದನಕ್ಕಾಗಿ ಕವಚಗಳು ಮತ್ತು ಆಯುಧಗಳನ್ನು ಎರವಲು ಪಡೆದಿದ್ದರೋ ಇದು ಅದೇ ಸಫ್ವಾನ್ ಆಗಿದ್ದರು. ಈತ ಮುಶ್ರಿಕ್ ಆಗಿರುವ ಸ್ಥಿತಿಯಲ್ಲೇ ಹುನೈನ್ ಕದನದಲ್ಲಿಯೂ ಪಾಲ್ಗೊಂಡಿದ್ದನು. ಆದರೆ ಇದೇ ಯುದ್ಧದಲ್ಲಿ ಅವನ ಹೃದಯ ಬದಲಾಗಲಾರಂಭಿಸಿತು. ಯುದ್ಧ ಸಂಪತ್ತನ್ನು ಹಂಚುವ ಸಮಯ ಬಂದಾಗ, ನಬಿ(ಸ) ಅವನಿಗೆ ನೂರು ಒಂಟೆಗಳನ್ನು ದಯಪಾಲಿಸಿದರು. ಸಹೀಹ್ ಮುಸ್ಲಿಂ ವರದಿಯ ಪ್ರಕಾರ ಮುನ್ನೂರು ಒಂಟೆಗಳನ್ನು ದಯಪಾಲಿಸಿದರು. ಮತ್ತೊಂದು ವರದಿಯಿದೆ: 'ಅದೇ ದಿನಗಳಲ್ಲಿ ನಬಿ(ಸ) ಒಂದು ಕಣಿವೆಯ ಬಳಿ ಹಾದುಹೋದರು, ಅದರಲ್ಲಿ ಯುದ್ಧ ಸಂಪತ್ತಿನ ಒಂಟೆಗಳು ಮತ್ತು ಮೇಕೆಗಳಿದ್ದವು; ಆ ಕಣಿವೆ ಒಂಟೆಗಳು ಮತ್ತು ಮೇಕೆಗಳಿಂದ ತುಂಬಿತ್ತು. ಸಫ್ವಾನ್ ಇಷ್ಟೊಂದು ಸಂಪತ್ತನ್ನು ಕಂಡು ಆಶ್ಚರ್ಯಚಕಿತನಾಗಿ ನೋಡಲಾರಂಭಿಸಿದನು. ಆಗ ನಬಿ(ಸ) ಹೇಳಿದರು: 'ಹೇ ಅಬೂ ವಹಬ್' – ಇದು ಸಫ್ವಾನ್‌ನ ಉಪನಾಮವಾಗಿತ್ತು – 'ಈ ಕಣಿವೆ ನಿನ್ನನ್ನು ಆಶ್ಚರ್ಯಗೊಳಿಸಿದೆಯೇ?' ಅವನು ಹೇಳಿದನು: 'ಹೌದು.' ನಬಿ(ಸ) ಹೇಳಿದರು: 'ಈ ಇಡೀ ಸಂಪತ್ತು ನಿನ್ನದಾಯಿತು, ನೀನು ತೆಗೆದುಕೊ.' ಸಫ್ವಾನ್ ತಕ್ಷಣವೇ ಹೇಳಿದನು: 'ನಾನು ಸಾಕ್ಷ್ಯ ನುಡಿಯುತ್ತೇನೆ, ನೀವು ಅಲ್ಲಾಹನ ನಬಿಯಾಗಿದ್ದೀರಿ. ಏಕೆಂದರೆ ಇಂತಹ ದಾನವನ್ನು ನಬಿಗೆ ಮಾತ್ರ ಮಾಡಲು ಸಾಧ್ಯ."

ಒಂದು ಇನ್ನೊಂದು ವರದಿಯ ಪ್ರಕಾರ, ಸಫ್ವಾನ್ ಬಿನ್ ಉಮಯ್ಯಾ ಸ್ವತಃ ವಿವರಿಸುತ್ತಾನೆ: 'ನಬಿ(ಸ) ನನಗೆ ಹುನೈನ್‌ನ ಯುದ್ಧ ಸಂಪತ್ತನ್ನು ನೀಡುತ್ತಲೇ ಇದ್ದರು. ಇದರ ಪರಿಣಾಮವೇನಾಯಿತೆಂದರೆ, ಮೊದಲು ನಬಿ(ಸ) ನನಗೆ ಇಡೀ ಸೃಷ್ಟಿಯಲ್ಲೇ ಅತ್ಯಂತ ಇಷ್ಟವಿಲ್ಲದ ವ್ಯಕ್ತಿಯಾಗಿದ್ದಿರಿ, ನಂತರ ನಬಿ(ಸ) ನನಗೆ ಇಡೀ ಸೃಷ್ಟಿಯಲ್ಲೇ ಅತ್ಯಂತ ಪ್ರೀತಿಪಾತ್ರರಾದರು.' ಒಟ್ಟಿನಲ್ಲಿ, ನಬಿ(ಸ) ವಿವಿಧ ಅರಬ್ ನಾಯಕರಿಗೆ ದಯಪಾಲಿಸುತ್ತಲೇ ಇದ್ದರು. ಅವರೆಲ್ಲರ ಸಂಖ್ಯೆ ಐವತ್ತಕ್ಕೂ ಹೆಚ್ಚು ಎಂದು ವಿವರಿಸಲಾಗುತ್ತದೆ.

(ಸಹೀಹ್ ಮುಸ್ಲಿಮ್ ಕಿತಾಬ್ ಫ಼ಝಾಇಲ್, ಹದೀಸ್–2313, ದಾಎರಾ ಮುಆರಿಫ್ ಸೀರತ್ ಮುಹಮ್ಮದ್(ಸ), ಸಂಪುಟ–9, ಪುಟ–236–237, ಬಝ್ಮ್ ಇಖ್ಬಾಲ್ ಲಾಹೋರ್, ಶರಹ್ ಝುರ್ಖಾನಿ, ಸಂಪುಟ–4, ಪುಟ–21, ದಾರುಲ್ ಕುತುಬ್ ಇಲ್ಮಿಯಾ ಬೈರುತ್, ಲುಲು ವಲ್‌ಮಕ್ನೂನ್ ಸಈರತ್ ಇನ್‌ಸೈಕ್ಲೊಪೀಡಿಯ, ಸಂಪುಟ–9, ಪುಟ–341, ದಾರುಸ್ಸಲಾಮ್ ರಿಯಾದ್, ಸಬ್ಲುಲ್ ಹುದಾ, ಸಂಪುಟ–5, ಪುಟ–396, ದಾರುಲ್ ಕುತುಬ್ ಇಲ್ಮಿಯಾ)

ಹಝ್ರತ್ ಮಸೀಹ್ ಮೌಊದ್(ಅ) ವಿವರಿಸುತ್ತಾರೆ: 'ನಬಿ(ಸ)ರ ಬಳಿ ಒಂದು ಸಂದರ್ಭದಲ್ಲಿ ಬಹಳಷ್ಟು ಕುರಿ–ಮೇಕೆಗಳಿದ್ದವು. ಒಬ್ಬ ಕಾಫಿರನು ಹೇಳಿದನು: 'ನಿಮ್ಮ ಬಳಿ ಎಷ್ಟೊಂದು ಕುರಿ–ಮೇಕೆಗಳು ಜಮೆಯಾಗಿವೆಯೆಂದರೆ, ರೋಮ್ ಮತ್ತು ಪರ್ಷಿಯಾದ ಚಕ್ರವರ್ತಿಗಳ ಬಳಿಯೂ ಇಷ್ಟಿಲ್ಲ.' ನಬಿ(ಸ) ಅವೆಲ್ಲವನ್ನೂ ಅವನಿಗೆ ದಯಪಾಲಿಸಿದರು. ಅವನು ಅದೇ ಕ್ಷಣದಲ್ಲಿ ಸತ್ಯವಿಶ್ವಾಸ ಕೈಗೊಂಡನು ಮತ್ತು ಹೀಗೆ ಹೇಳಿದನು: 'ಪ್ರವಾದಿಯ (ನಬಿ) ಹೊರತು ಬೇರೆ ಯಾರೂ ಇಂತಹ ಬೃಹತ್ ದಾನಶೀಲತೆಯನ್ನು ಮಾಡಲು ಸಾಧ್ಯವಿಲ್ಲ.'
(ಮಲ್‌ಫೂಝಾತ್, ಸಂಪುಟ–2, ಪಉಟ–425, 2022)

ನಬಿ(ಸ) ಹಝ್ರತ್ ಝೈದ್ ಬಿನ್ ಸಾಬಿತ್(ರ)ರಿಗೆ ಉಳಿದ ಜನರನ್ನು ಕರೆಯುವಂತೆ ಆದೇಶಿಸಿದರು. ಉಳಿದಿದ್ದ ಯುದ್ಧ ಸಂಪತ್ತನ್ನು ಅವರಲ್ಲಿ ಹಂಚಿದರು, ಪ್ರತಿಯೊಬ್ಬರ ಪಾಲಿಗೆ ನಾಲ್ಕು ಒಂಟೆಗಳು ಅಥವಾ ನಲವತ್ತು ಮೇಕೆಗಳು ಬಂದವು. ಹೀಗೆ, ಆ ಯುದ್ಧ ಸಂಪತ್ತನ್ನು, ಅದು ಅಲ್ಲಿಯವರೆಗಿನ ಅತ್ಯಂತ ದೊಡ್ಡ ಸಂಪತ್ತಾಗಿತ್ತು, ಸಂಪೂರ್ಣವಾಗಿ ಜನರಲ್ಲಿ ಹಂಚಿಬಿಟ್ಟರು. ನಬಿ(ಸ)ರ ಜೀವನ ಚರಿತ್ರೆಯ ಈ ಆಯಾಮವು ಗಮನಾರ್ಹವಾಗಿದೆ. ವಿರೋಧಿಗಳು ನಬಿ(ಸ) ಮತ್ತು ಅವರ ಯುದ್ಧಗಳ ಬಗ್ಗೆ, 'ಮುಸಲ್ಮಾನರು ಬಡವರಾಗಿದ್ದರು ಮತ್ತು ಸಂಪತ್ತಿನಿಂದ ವಂಚಿತರಾಗಿದ್ದರು, ಆದ್ದರಿಂದ ಯುದ್ಧಗಳನ್ನು ಪ್ರಾರಂಭಿಸಲಾಯಿತು' ಎಂಬ ಆರೋಪ ಹೊರಿಸುತ್ತಾರೆ. ಈ ಮಾತಿನಲ್ಲಿ ಸ್ವಲ್ಪವಾದರೂ ವಾಸ್ತವವಿದ್ದಿದ್ದರೆ, ಹುನೈನ್ ಕದನದ ಯುದ್ಧ ಸಂಪತ್ತಿನ ಹಂಚಿಕೆಯು ಬೇರೆಯೇ ರೀತಿಯಲ್ಲಿರುತ್ತಿತ್ತು. ಆದರೆ ಇಲ್ಲಿ ನಾವು ನೋಡುವುದೇನೆಂದರೆ, ಯುದ್ಧ ಸಂಪತ್ತಿನ ಬಹುದೊಡ್ಡ ಭಾಗವನ್ನು ವಿರೋಧಿಗಳ ಮನವೊಲಿಸುವಿಕೆಗಾಗಿ ಅನ್ಯರಿಗೆ ನೀಡಲಾಯಿತು. ಖುರೈಶ್‌ನ ಶ್ರೀಮಂತರಿಗೆ ನೀಡಲಾಯಿತು, ಬದಲಾಗಿ ಕೆಲವು ವರದಿಗಳ ಪ್ರಕಾರ, ಸಂಪೂರ್ಣ ಸಂಪತ್ತನ್ನು ಇತರ ಜನರಲ್ಲಿ ಹಂಚಲಾಯಿತು. ಇದರಲ್ಲಿ ಕೆಲವು ಇತರ ಕಾರಣಗಳೂ ಇದ್ದಿರಬಹುದು, ಆದರೆ ನಬಿ(ಸ) ತನಗಾಗಿ ಏನನ್ನೂ ಇಟ್ಟುಕೊಳ್ಳಲಿಲ್ಲ ಲೋಕ ನೋಡಿತು. ಮಾತ್ರವಲ್ಲ, ನಬಿ(ಸ)ರಿಗಾಗಿ ಪ್ರಾಣಾರ್ಪಣೆ ಮಾಡುವ ಮತ್ತು ನಿಷ್ಠಾವಂತ ಸಂಗಾತಿಗಳಿಗೂ, ಅಂದರೆ ಮದೀನಾದ ಅನ್ಸಾರಿಗಳಿಗೂ ಈ ಯುದ್ಧ ಸಂಪತ್ತಿನಿಂದ ಏನನ್ನೂ ನೀಡಲಿಲ್ಲ, ಅಥವಾ ಬಹಳ ಕಡಿಮೆ ನೀಡಿದರು. ಹುನೈನ್ ಕದನದ ದಿನ ಒಬ್ಬ ಮಹಿಳೆ ಬಂದಳು, ಆಕೆ ಕೆಲವು ಕವನಗಳನ್ನು ಹಾಡಿದಳು, ಅದರಲ್ಲಿ ಆಕೆ ಹವಾಝಿನ್ ಗೋತ್ರದಲ್ಲಿ ನಬಿ(ಸ)ರ ಸ್ತನ್ಯಪಾನದ ದಿನಗಳನ್ನು ಉಲ್ಲೇಖಿಸಿದಳು. ಹಾಗಾಗಿ ನಬಿ(ಸ) ಹವಾಝಿನ್ ಜನರಿಂದ ಪಡೆದ ಸಂಪತ್ತನ್ನು ಮರಳಿಸಿದರು ಮತ್ತು ಆ ಜನರಿಗೆ ಬಹಳಷ್ಟು ದಯಪಾಲಿಸಿದರು. ಎಲ್ಲಿಯವರೆಗೆ ಎಂದರೆ, ನಬಿ(ಸ) ಅವರಿಗೆ ಏನು ನೀಡಿದಿರೋ, ಅದರ ಮೌಲ್ಯ ಐದು ಲಕ್ಷ ದಿರ್ಹಮ್‌ಗಳಿಗೆ ಸಮನಾಗಿತ್ತು ಎಂದು ಅಂದಾಜಿಸಲಾಗಿದೆ. ಇಬ್ನು ದಹಿಯಾ ಹೇಳುತ್ತಾರೆ: 'ಇದು ದಾನಶೀಲತೆಯ ಪರಾಕಾಷ್ಠೆಯಾಗಿದೆ, ಇಂತಹ ದಾನಶೀಲತೆಯ ಬಗ್ಗೆ ಎಂದಿಗೂ ಕೇಳಿಲ್ಲ.' (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ–7, ಪಉಟ–51, ದಾರುಲ್ ಕುತುಬ್ ಇಲ್ಮಿಯಾ 1993)

ಹವಾಝಿನ್‌ನ ಪ್ರತಿನಿಧಿಗಳು ಮುಸಲ್ಮಾನರಾಗಿ ರಸೂಲುಲ್ಲಾಹ್(ಸ)ರ ಬಳಿ ಬಂದು, ತಮ್ಮ ಸಂಪತ್ತು ಮತ್ತು ತಮ್ಮ ಕೈದಿಗಳನ್ನು ತಮಗೆ ಮರಳಿಸುವಂತೆ ವಿನಂತಿಸಿದಾಗ, ರಸೂಲುಲ್ಲಾಹ್(ಸ) ಎದ್ದು ನಿಂತರು ಮತ್ತು ಹೇಳಿದರು: 'ಸತ್ಯವಾದ ಮಾತು ನನಗೂ ಇಷ್ಟ, ಸತ್ಯವಾದ ಮಾತು ನನಗೆ ಬಹಳ ಇಷ್ಟ. ಎರಡು ವಿಷಯಗಳಲ್ಲಿ ಒಂದನ್ನು ಆರಿಸಿಕೊಳ್ಳಿ: ಕೈದಿಗಳನ್ನು ಮರಳಿ ತೆಗೆದುಕೊಳ್ಳಿ ಅಥವಾ ಸಂಪತ್ತನ್ನು. ನಾನಂತೂ ಜಿಅರ್ರಾನಾದಲ್ಲಿ ಅವರಿಗಾಗಿ ಕಾದಿದ್ದೆ.' ವಾಸ್ತವದಲ್ಲಿ ಅವರು ಬಂದು ತಮ್ಮ ಸಂಪತ್ತು ಮತ್ತು ಕೈದಿಗಳನ್ನು ಮರಳಿ ಕೇಳಲಿಕ್ಕಾಗಿ ರಸೂಲುಲ್ಲಾಹ್(ಸ) ತಾಯಿಫ್‌ನಿಂದ ಹಿಂತಿರುಗಿದಾಗ ಹತ್ತಕ್ಕೂ ಹೆಚ್ಚು ರಾತ್ರಿಗಳು ಅವರಿಗಾಗಿ ಕಾದಿದ್ದರು; ರಸೂಲುಲ್ಲಾಹ್(ಸ) ತಮಗೆ ಮರಳಿ ನೀಡಲು ಎರಡರಲ್ಲಿ ಒಂದು ವಸ್ತುವನ್ನೇ ನೀಡುವರು ಎಂಬುದು ಅವರಿಗೆ ಚೆನ್ನಾಗಿ ತಿಳಿದಾಗ, ಅವರು ಹೇಳಿದರು: 'ಹಾಗಾದರೆ ನಾವು ನಮ್ಮ ಕೈದಿಗಳನ್ನೇ ತೆಗೆದುಕೊಳ್ಳುತ್ತೇವೆ.' ನಂತರ ರಸೂಲುಲ್ಲಾಹ್(ಸ) ಮುಸಲ್ಮಾನರ ನಡುವೆ ನಿಂತರು ಮತ್ತು ಅಲ್ಲಾಹನನ್ನು ಸ್ತುತಿಸಿದರು. ನಂತರ ನಬಿ(ಸ) ಹೇಳಿದರು: 'ನಿಮ್ಮ ಈ ಸಹೋದರರು ನಮ್ಮ ಬಳಿ ಪಶ್ಚಾತ್ತಾಪ ಪಟ್ಟು ಬಂದಿದ್ದಾರೆ, ಅವರ ಕೈದಿಗಳನ್ನು ಅವರಿಗೆ ಮರಳಿಸುವುದು ಸೂಕ್ತವೆಂದು ನಾನು ಭಾವಿಸಿದ್ದೇನೆ. ಆದ್ದರಿಂದ ನಿಮ್ಮಲ್ಲಿ ಯಾರು ಸಂತೋಷದಿಂದ ಮರಳಿಸಲು ಬಯಸುತ್ತಾರೋ, ಅವರು ಮರಳಿಸಲಿ; ಮತ್ತು ನಿಮ್ಮಲ್ಲಿ ಯಾರು ತಮ್ಮ ಪಾಲಿನಲ್ಲೇ ಉಳಿಯಲು ಬಯಸುತ್ತಾರೋ, ಅವರೂ ಮರಳಿಸಲಿ, ನಾವು ಅವರಿಗೆ ಅವರ ಪಾಲನ್ನು ಯುದ್ಧ ಸಂಪತ್ತಿನಿಂದ, ಅಲ್ಲಾಹನು ನಮಗೆ ನೀಡುವುದರಿಂದ, ಆಮೇಲೆ ನೀಡುವೆವು.' ಜನರು ಹೇಳಿದರು: 'ರಸೂಲುಲ್ಲಾಹ್(ಸ)ರಿಗಾಗಿ ನಾವು ನಮ್ಮ ಸಂತೋಷದಿಂದಲೇ ಈ ಕೈದಿಗಳನ್ನು ಹೀಗೆಯೇ ಕೊಟ್ಟುಬಿಟ್ಟೆವು. ನಮಗೆ ಯಾವುದೇ ಪಾಲಿನ ಅಗತ್ಯವಿಲ್ಲ.' ರಸೂಲುಲ್ಲಾಹ್(ಸ) ಹೇಳಿದರು: 'ನಿಮ್ಮಲ್ಲಿ ಯಾರು ಇದಕ್ಕೆ ಅನುಮತಿ ನೀಡಿದ್ದಾರೆ ಮತ್ತು ಯಾರು ನೀಡಿಲ್ಲ ಎಂಬುದು ನಮಗೆ ತಿಳಿದಿಲ್ಲ. ನೀವು ಹಿಂತಿರುಗಿ, ಮತ್ತು ನಿಮ್ಮ ನಾಯಕರು ನಿಮ್ಮ ತೀರ್ಮಾನವನ್ನು ನಮ್ಮ ಮುಂದೆ ಪ್ರಸ್ತುತಪಡಿಸಲಿ.' ಇದರ ಮೇಲೆ ಜನರು ಹೋದರು. ಇಲ್ಲಿ ನಬಿ(ಸ) ಬಹಳ ಎಚ್ಚರಿಕೆ ವಹಿಸಿದರು, ಅವರು ನಿಜವಾಗಿಯೂ ಕೈದಿಗಳನ್ನು ಮರಳಿಸುತ್ತಿದ್ದಾರೆಯೇ ಎಂಬುದರ ಬಗ್ಗೆ ಪ್ರತಿನಿಧಿಗಳನ್ನು ಕಳುಹಿಸಿ ವಿಚಾರಿಸಿದರು. ಅವರ ನಾಯಕರು ಅವರೊಂದಿಗೆ ಮಾತನಾಡಿದರು. ನಂತರ ಅವರು ರಸೂಲುಲ್ಲಾಹ್(ಸ)ರ ಬಳಿಗೆ ಹಿಂತಿರುಗಿ ಬಂದರು, ಮತ್ತು ಎಲ್ಲ ಜನರೂ ಸಂತೋಷದಿಂದ ಒಪ್ಪಿದ್ದಾರೆ ಮತ್ತು ಕೈದಿಗಳನ್ನು ಮರಳಿಸಲು ಅನುಮತಿ ನೀಡಿದ್ದಾರೆ ಎಂದು ನಬಿ(ಸ)ರಿಗೆ ತಿಳಿಸಿದರು. ಹೀಗೆ, ರಸೂಲುಲ್ಲಾಹ್(ಸ) ಯಾವುದೇ ಪರಿಹಾರವಿಲ್ಲದೆ ಹವಾಝಿನ್‌ನ ಕೈದಿಗಳನ್ನು ಸ್ವತಂತ್ರಗೊಳಿಸಿದರು.

(ಸಹೀಹ್ ಬುಖಾರಿ ಅನುವಾದ, ಕಿತಾಬುಲ್ ವಕಾಲ, ಹದೀಸ್-2307-2308, ಸಂಪುಟ-4, ಪಉಟ-292-294, ನಝಾರತ್ ಇಶಾಅತ್)

ಅವರನ್ನು ಸ್ವತಂತ್ರಗೊಳಿಸಿದ್ದು ಮಾತ್ರವಲ್ಲ, ಬದಲಾಗಿ ಅವರಿಗೆ ಹೊಸ ಬಟ್ಟೆಗಳನ್ನೂ ದಯಪಾಲಿಸಿದರು. ಬಟ್ಟೆಗಳ ಖರೀದಿಗಾಗಿ ನಬಿ(ಸ) ಓರ್ವ ಸಹಾಬಿಯನ್ನು ಅಧಿಕೃತವಾಗಿ ಮಕ್ಕಾಗೆ ಕಳುಹಿಸಿದರು. ನಬಿ(ಸ) ಕಟ್ಟುನಿಟ್ಟಾಗಿ ಆದೇಶಿಸಿದರು: 'ಫಲಾ ಯಖ್ರುಜುಲ್ ಹುರ್ರ ಮಿನ್ಹುಮ್ ಇಲ್ಲಾ ಕಾಸಿಬಾ.' 'ಅವರಲ್ಲಿ ಸ್ವತಂತ್ರಗೊಳ್ಳುವ ಯಾವನೇ ವ್ಯಕ್ತಿಯು ಬಟ್ಟೆಯಿಲ್ಲದೆ ಹೋಗದಿರಲಿ.' (ಅಸ್ಸೀರತುಲ್ ಹಲಬಿಯ್ಯಾ, ಸಂಪುಟ-3, ಪಉಟ-181, ದಾರುಲ್ ಕುತುಬ್ ಇಲ್ಮಿಯ್ಯಾ ಬೈರುತ್)

ಹಝ್ರತ್ ಅನಸ್ ಬಿನ್ ಮಾಲಿಕ್(ರ)ರಿಂದ ವರದಿಯಾಗಿದೆ: 'ರಸೂಲುಲ್ಲಾಹ್(ಸ)ರ ಬಳಿ ಹುನೈನ್ ಕದನದ ದಿನ ಜನರು ಬಂದು ಯಾಚಿಸಲಾರಂಭಿಸಿದರು. ನಬಿ(ಸ) ಅವರಿಗೆ ಮೇಕೆ, ಕುರಿ ಮತ್ತು ಒಂಟೆಗಳ ಸಂಪತ್ತನ್ನು ನೀಡಿದರು, ಎಲ್ಲಿಯವರೆಗೆ ಎಂದರೆ ಏನೂ ಉಳಿಯಲಿಲ್ಲ. ನಂತರ ರಸೂಲುಲ್ಲಾಹ್(ಸ) ಹೇಳಿದರು: 'ನೀವು ಏನನ್ನು ಬಯಸುತ್ತೀರಿ? ನಾನು ಜಿಪುಣನಾಗಬೇಕೆಂದು ನೀವು ಬಯಸುತ್ತೀರಾ? ದೇವನಾಣೆ, ನಾನಂತೂ ಜಿಪುಣನಲ್ಲ, ಹೇಡಿಯೂ ಅಲ್ಲ, ಮತ್ತು ಸುಳ್ಳು ಹೇಳುವವನೂ ಅಲ್ಲ." (ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ-7, ಪುಟ-53, ದಾರುಲ್ ಕುತುಲ್ ಇಲ್ಮಿಯ್ಯಾ ಬೈರುತ್ 1993)

ಈ ದೃಷ್ಟಿಕೋನದಿಂದ ನಾವು ಇದನ್ನೂ ನೋಡುತ್ತೇವೆ, ನಬಿ(ಸ)ರ ದಾನಶೀಲತೆಯು ಅಸಮರ್ಪಕವಾಗಿ ಇರುತ್ತಿರಲಿಲ್ಲ. ಇದರಲ್ಲಿ ಯಾವುದೇ ಅನುಮಾನವಿಲ್ಲ, ನೀವು ಯಾಚಕರಿಗೆ ನೀಡುತ್ತಿದ್ದರು ಮತ್ತು ಎಂದಿಗೂ ನಿರಾಕರಿಸುತ್ತಿರಲಿಲ್ಲ. ಆದರೆ ಕೆಲವೊಮ್ಮೆ ನಬಿ(ಸ) ಯಾಚಕರನ್ನು ವಿವೇಕಪೂರ್ಣ ಶೈಲಿಯಲ್ಲಿ ತಡೆದದ್ದೂ ಇದೆ, ಅದರಲ್ಲಿ ಅನೇಕ ಯುಕ್ತಿಗಳು ಅಡಗಿದ್ದವು. ಉದಾಹರಣೆಗೆ, ಒಮ್ಮೆ ನಬಿ(ಸ) ಸಂಪತ್ತನ್ನು ಹಂಚುತ್ತಿದ್ದರು ಮತ್ತು ಜನರಿಗೆ ನೀಡುತ್ತಿದ್ದರು. ಆದರೆ ಒಬ್ಬ ವ್ಯಕ್ತಿಯನ್ನು ನಿರ್ಲಕ್ಷಿಸುತ್ತಿದ್ದರು, ಅವನಿಗೆ ಏನನ್ನೂ ನೀಡಲಿಲ್ಲ. ಹಝ್ರತ್ ಸಅದ್ ಬಿನ್ ವಖಾಸ್(ರ) ವಿವರಿಸುತ್ತಾರೆ: 'ಆ ವ್ಯಕ್ತಿ ನನಗೆ ಈ ಇತರ ಜನರಿಗಿಂತ ಹೆಚ್ಚು ಇಷ್ಟವಾಗಿದ್ದನು. ಇತರರ ಬದಲಿಗೆ ಅವನಿಗೆ ಸಿಗಬೇಕೆಂದು ನಾನು ಬಯಸಿದ್ದೆ. ಹಾಗಾಗಿ ನಾನು ಹೇಳಿದೆ, 'ಯಾ ರಸೂಲುಲ್ಲಾಹ್, ನೀವು ಈ ವ್ಯಕ್ತಿಯನ್ನು ಏಕೆ ಬಿಟ್ಟಿರಿ. ದೇವನಾಣೆ, ನಾನಂತೂ ಅವನನ್ನು ಸತ್ಯವಿಶ್ವಾಸಿ ಎಂದು ಭಾವಿಸುತ್ತೇನೆ.' ಅನಂತರ ನಾನು ಸ್ವಲ್ಪ ಹೊತ್ತು ಮೌನವಾಗಿದ್ದೆ, ನಂತರ ಅವನ ಬಗ್ಗೆ ನನಗೆ ಏನು ತಿಳಿದಿತ್ತೋ ಅದು ನನ್ನನ್ನು ಮತ್ತೆ ಒತ್ತಾಯಿಸಿತು, ನಾನು ನನ್ನ ಮಾತನ್ನು ಪುನರಾವರ್ತಿಸಿದೆ ಮತ್ತು ಹೇಳಿದೆ, 'ನೀವು ಈ ವ್ಯಕ್ತಿಯನ್ನು ಬಿಟ್ಟಿರಿ, ದೇವನಾಣೆ ನಾನಂತೂ ಅವನನ್ನು ಸತ್ಯವಿಶ್ವಾಸಿಯೆಂದೇ ಭಾವಿಸುತ್ತೇನೆ.' ಆತನ ಬಗ್ಗೆ ನನಗೆ ಏನು ತಿಳಿದಿತ್ತೋ ಅದು ನನ್ನನ್ನು ಪುನಃ ಹೇಳಲು ಒತ್ತಾಯಿಸಿತು ಮತ್ತು ನಾನು ನನ್ನ ಮಾತನ್ನು ಪುನರಾವರ್ತಿಸಿದೆ. ನಬಿ(ಸ) ಹೇಳಿದರು: 'ಹೇ ಸಅದ್, ನಾನು ಒಬ್ಬ ವ್ಯಕ್ತಿಗೆ ನೀಡುತ್ತೇನೆ, ಅಲ್ಲಾಹನು ಅವನನ್ನು ನರಕದಲ್ಲಿ ಕೆಡವದಿರಲಿ ಎಂದು, ವಾಸ್ತವದಲ್ಲಿ ಆ ಇನ್ನೊಬ್ಬ ವ್ಯಕ್ತಿಯು ನನಗೆ ಅವನಿಗಿಂತ ಹೆಚ್ಚು ಪ್ರಿಯನಾಗಿರುತ್ತಾನೆ. (ಸಹೀಹ್ ಅಲ್‌ಬಿಖಾರಿ ಅನುವಾದ, ಕಿತಾಬುಲ್ ಈಮಾನ್, ಹದೀಸ್-27, ಸಂಪುಟ-1, ಪುಟ-68-69)

(ನೀನು ಹೇಳುವುದು ಸರಿ, ಆದರೆ ಬೇರೆ ಯುಕ್ತಿಗಳೂ ಇರುತ್ತವೆ, ಇದೇ ಕಾರಣದಿಂದ ನಾನು ನೀಡುತ್ತೇನೆ, ಅವರ ಸತ್ಯವಿಶ್ವಾಸ ಸ್ವಲ್ಪ ದೃಢಗೊಳ್ಳಲಿ ಎಂದು.' ಕೆಲವು ಜನರು ಉಡುಗೊರೆಗಳನ್ನು ಪಡೆದು ಅಥವಾ ಲೌಕಿಕ ಲಾಭ ಪಡೆದೇ ತಮ್ಮ ನಂಬಿಕೆಯ ಮೇಲೆ ದೃಢವಾಗಿರುತ್ತಾರೆ, ಮೊದಲು ಬಹಳಷ್ಟು ಉದಾಹರಣೆಗಳನ್ನು ನೀಡಿದಂತೆ.

ಹಝ್ರತ್ ಝೈನುಲ್ ಆಬಿದೀನ್ ಸೈಯದ್ ವಲಿಯುಲ್ಲಾಹ್ ಶಾಹ್ ಸಾಹಿಬ್ ಇದರ ವಿವರಣೆಯಲ್ಲಿ ಬರೆಯುತ್ತಾರೆ: 'ಮೂಅ್‌ಮಿನ್ ವ ಮುಸ್ಲಿಮನ್ (ಸತ್ಯವಿಶ್ವಾಸಿ ಮತ್ತು ಮುಸ್ಲಿಂ). ಇಮಾಮ್ ಬುಖಾರಿ ಇದರಲ್ಲಿ ತಂದಿರುವ ಹದೀಸ್, ಅದರಿಂದ ಅವರು ಈಮಾನ್ ಮತ್ತು ಇಸ್ಲಾಮಿನ ನಡುವಿನ ಅಸಲಿ ವ್ಯತ್ಯಾಸವನ್ನು ಸ್ಪಷ್ಟಪಡಿಸಿದ್ದಾರೆ. ಅಂದರೆ ಈಮಾನ್ ಎಂಬುದು ಆಂತರಿಕ ಸ್ಥಿತಿಯ ಹೆಸರಾಗಿದೆ, ಆದರೆ ಇಸ್ಲಾಂ ಬಾಹ್ಯಕ್ಕೆ ಸಂಬಂಧಿಸಿದೆ. ಆದ್ದರಿಂದ ನಬಿ(ಸ) ಮರ್ಯಾದೆಯನ್ನು ಕಲಿಸಿದ್ದಾರೆ, ಯಾರದಾದರೂ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವಾಗ ಎಚ್ಚರಿಕೆ ವಹಿಸಬೇಕು. ಆಂತರಿಕ ಜ್ಞಾನ ಖಂಡಿತವಾಗಿಯೂ ಅಲ್ಲಾಹನಿಗೆ ಮಾತ್ರ ಇದೆ. ಯಾವ ಸಹಾಬಿಗೆ ನಬಿ(ಸ) ನೀಡುವುದು ಸೂಕ್ತವೆಂದು ಭಾವಿಸಲಿಲ್ಲವೋ, ಅವರು ಹಝ್ರತ್ ಜುಐಲ್ ಬಿನ್ ಸುರಾಖಾ, ನಿಷ್ಠಾವಂತ ಮುಹಾಜಿರ್ ಆಗಿದ್ದರು. ನಬಿ(ಸ) ಕೂಡ ಅವರನ್ನು ಪ್ರೀತಿಸುತ್ತಿದ್ದರು, ಆದರೂ ನೀವು ಹಝ್ರತ್ ಸಅದ್ ಪದೇ ಪದೇ ಒತ್ತಾಯಿಸಿದಾಗ ಅವರಿಗೆ ಈ ಮರ್ಯಾದೆಯನ್ನು ಕಲಿಸಿದರು ಮತ್ತು ವಾಸ್ತವದಲ್ಲಿ ಈಮಾನ್ ಮತ್ತು ಇಸ್ಲಾಮಿನ ನಡುವೆ ಇರುವ ಈ ವ್ಯತ್ಯಾಸವನ್ನು ಕಾಯ್ದುಕೊಳ್ಳುವ ಬೋಧನೆ ನೀಡಿದರು. ಈ ಘಟನೆಯಿಂದ ತಿಳಿದುಬರುವುದೇನೆಂದರೆ, ನಬಿ(ಸ) ದುರ್ಬಲ ಜನರ ಕಾಳಜಿ ವಹಿಸಲೂ ಬೋಧಿಸಿದ್ದಾರೆ, ಇದರಿಂದ ಅವರು ತಮ್ಮ ದೌರ್ಬಲ್ಯದ ಕಾರಣದಿಂದ ಎಡವದಿರಲಿಕ್ಕಾಗಿ. ಒಂದು ದುರ್ಬಲ ಸಸ್ಯಕ್ಕೆ ಎಷ್ಟು ನಿಗಾದ ಅಗತ್ಯವಿದೆಯೋ, ದೊಡ್ಡ ಮರಕ್ಕೆ ಅಷ್ಟು ಅಗತ್ಯವಿರುವುದಿಲ್ಲ. ನಬಿ(ಸ) ಜನರ ಈಮಾನನ್ನು ಎಡವುವುದರಿಂದ ಪಾರುಮಾಡಲು ಸಣ್ಣ-ಸಣ್ಣ ವಿಷಯಗಳ ಕಾಳಜಿ ವಹಿಸಿದರು. ಈ ವಿಷಯದಲ್ಲಿ ಕೆಲವು ಅಜ್ಞಾನಿ ಜನರು ಬಹಳ ತಪ್ಪು ವರ್ತನೆಯನ್ನು ಅಳವಡಿಸಿಕೊಳ್ಳುತ್ತಾರೆ. ಎಡವುತ್ತಿರುವ ಮನುಷ್ಯನನ್ನು ಎಡವಲು ಕಾರಣವಾಗುವ ಪ್ರತಿಯೊಂದು ಕಾರ್ಯದಿಂದಲೂ ಪಾರುಮಾಡುವುದಿರಲಿ, ತಾವೇ ಅವನ ಎಡವಿಕೆಗೆ ಕಾರಣರಾಗುತ್ತಾರೆ; ಬಹುದೇವಾರಾಧನೆಯ ವರ್ತನೆ ಅಳವಡಿಸಿಕೊಳ್ಳುವ ಬದಲು, ಆ ದುರ್ಬಲರ ನಂಬಿಕೆಯ ಮೇಲೆ ಬಹಿರಂಗವಾಗಿ ದಾಳಿ ಮಾಡುತ್ತಾರೆ. (ಇದು ಕೆಲವರ ಅಭ್ಯಾಸವಾಗಿರುತ್ತದೆ.) ಈ ರೀತಿ ಅವರನ್ನು ಇನ್ನಷ್ಟು ತಳ್ಳುತ್ತಾರೆ. ದುರ್ಬಲ ನಂಬಿಕೆಯು ಇನ್ನಷ್ಟು ಹಿಂದೆ ಸರಿಯುತ್ತದೆ. ಹಾಗಾಗಿ ಈ ವಿಷಯವನ್ನು ನಾವು ನೆನಪಿಡಬೇಕು. ನಬಿ(ಸ) ಈ ವಿಷಯದಲ್ಲಿ ಎಷ್ಟೊಂದು ಎಚ್ಚರಿಕೆ ವಹಿಸುತ್ತಿದ್ದರೆಂದರೆ, ಬೇರೆಯವರ ಮುಂದೆ ಯಾರದಾದರೂ ಈಮಾನಿನ ವಿಶೇಷ ಹೊಗಳಿಕೆ ಮಾಡುವುದನ್ನೂ ತಡೆಯುತ್ತಿದ್ದರು. ಏಕೆಂದರೆ ಕೆಲವೊಮ್ಮೆ ಅವರು ಮುಂದೆ ಹೊಗಳುವುದು, ಹೊಗಳಲ್ಪಡುವ ವ್ಯಕ್ತಿಗೆ ಹಾನಿಯ ಕಾರಣವಾಗುತ್ತದೆ ಎಂಬುದು ಮಾತ್ರವಲ್ಲ, ಬದಲಾಗಿ ಒಂದು ರೀತಿಯ ಹೋಲಿಕೆಯಿಂದ ಕೆಲವೊಮ್ಮೆ ಬೇರೆಯವರ ಈಮಾನ್ ಮತ್ತು ವರ್ತನೆಯ ಮೇಲೂ ದಾಳಿಯಾಗುತ್ತದೆ. ನಬಿ(ಸ) ಈ ಒಂದೇ ಘಟನೆಯಲ್ಲಿ ನಾಲ್ಕು ಪಾಠಗಳನ್ನು ಕಲಿಸಿದರು.' ಶಾಹ್ ಸಾಹಿಬ್ ಬರೆಯುತ್ತಾರೆ, 'ನಾಲ್ಕು ಪಾಠಗಳು ಇವು: ಇಸ್ಲಾಂ ಮತ್ತು ಈಮಾನಲ್ಲಿರುವ ವ್ಯತ್ಯಾಸ. ಇಸ್ಲಾಂ ಸ್ವೀಕರಿಸುವುದರಲ್ಲಿ ಮತ್ತು ಈಮಾನಿನಲ್ಲಿ

ಏನು ವ್ಯತ್ಯಾಸವಿದೆ. ಒಂದು ಬಾಹ್ಯ ವಿಷಯ, ಮತ್ತೊಂದು ಹೃದಯದ ವಿಷಯ. ಎರಡನೆಯದಾಗಿ, ಪದಗಳನ್ನು ಸಮಯೋಚಿತವಾಗಿ ಬಳಸುವುದು. ಯಾವ ಸಂದರ್ಭದಲ್ಲಿ ಯಾವ ಪದವನ್ನು ಬಳಸಬೇಕು ಎಂಬುದನ್ನು ಅರಿತಿರಬೇಕು. ನಂತರ ಮೂರನೇ ವಿಷಯವೆಂದರೆ, ಮುಅಲ್ಲಫತುಲ್ ಖುಲೂಬ್‌ರ (ಮನವೊಲಿಸಬೇಕಾದವರ) ಕಾಳಜಿ ವಹಿಸುವುದು ಯಾರಿಂದ ಯಾರಿಗೆ ಏನು ಲಾಭವಾಗುತ್ತದೆ ಎಂದು ನೋಡುವುದು. ನಾಲ್ಕನೇ ವಿಷಯವೆಂದರೆ, ಯೋಚಿಸದೆ ಈ ರೀತಿಯಾಗಿ ಹೊಗಳದಿರುವುದು, ಇದರಿಂದ ಬೇರೆಯವರ ಈಮಾನ್ ಅಥವಾ ವರ್ತನೆಯ ಮೇಲೆ ದಾಳಿಯಾಗಬಹುದು. ನಬಿ(ಸ)ರ ಜೀವನದ ಪ್ರತಿಯೊಂದು ಘಟನೆಯೂ ಯುಕ್ತಿ ಮತ್ತು ಸುಧಾರಣೆಯ ಖಜಾನೆಯಾಗಿದೆ.'

(ಸಹೀಹ್ ಅಲ್‌ಬುಖಾರಿ ಅನುವಾದ, ಸಂಪುಟ–1, ಪುಟ–70, ನಝ್ಹಾರತ್ ಇಶಾಅತ್)

ನಬಿ(ಸ)ರ ಅತ್ಯುನ್ನತ ನೈತಿಕತೆಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅವರಲ್ಲಿ ಪರಿಪೂರ್ಣ ಮಟ್ಟದ ಸಮತೋಲನ ಕಂಡುಬರುತ್ತಿತ್ತು. ಪ್ರತಿಯೊಂದು ಗುಣವೂ ಅದರದೇ ಆದ ಸಂದರ್ಭ ಮತ್ತು ಸಮಯದಲ್ಲಿ ಪ್ರಕಟವಾಗುತ್ತಿತ್ತು. ಆ ಅತ್ಯುನ್ನತ ನೈತಿಕ ಗುಣಗಳಲ್ಲಿ ನಬಿ(ಸ)ರ ದಾನಶೀಲತೆಯೂ ಸಂದರ್ಭೋಚಿತವಾಗಿತ್ತು. ಸಮಯ ಸಂದರ್ಭಕ್ಕೆ ತಕ್ಕಂತೆ ಇತ್ತು. ತ್ಯಾಗಗುಣವೂ ಸಂದರ್ಭೋಚಿತವಾಗಿತ್ತು ಮತ್ತು ಔದಾರ್ಯವೂ ಸಂದರ್ಭೋಚಿತವಾಗಿತ್ತು.'

(ಬರಾಹೀನೆ ಅಹ್ಮದಿಯಾ, ಭಾಗ–3, ರೂಹಾನಿ ಖಝಾಇನ್, ಸಂಪುಟ–1, ಪುಟ–194–195)

ನಬಿ(ಸ)ರ ದಾನಶೀಲತೆ ಮತ್ತು ಔದಾರ್ಯದ ಲೆಕ್ಕವಿಲ್ಲದಷ್ಟು ಘಟನೆಗಳಿವೆ. ಅವುಗಳಲ್ಲಿಯೇ ನಮಗೆ ನಬಿ(ಸ)ರ ಗುಣದ ಇತರ ಆಯಾಮಗಳೂ ಕಾಣಸಿಗುತ್ತವೆ. ಹೇಗಿದ್ದರೂ, ನಬಿ(ಸ)ರ ಬೋಧನೆ ಹೇಗೆ ಸಮತೋಲಿತವಾಗಿದೆಯೋ, ನಬಿ(ಸ)ರ ಪ್ರತಿಯೊಂದು ಕಾರ್ಯವೂ ಅದಕ್ಕೆ ಅನುಗುಣವಾಗಿ ಸಮತೋಲಿತವಾಗಿತ್ತು. ಅಲ್ಲಾಹನು ನಮಗೂ ನಬಿ(ಸ)ರ ಜೀವನ ಚರಿತ್ರೆಯ ಪ್ರತಿಯೊಂದು ಆಯಾಮದ ಬಗ್ಗೆ ಯೋಚಿಸಲು ಮತ್ತು ಆಚರಿಸಲು ಸೌಭಾಗ್ಯ ದಯಪಾಲಿಸಲಿ. ನಬಿ(ಸ)ರ ಮಾದರಿಗಳ ಮೇಲೆ ಆಚರಿಸಲು ಪ್ರಯತ್ನಿಸುತ್ತಾ, ನಮ್ಮ ಜೀವನಗಳನ್ನು ಅಲ್ಲಾಹನ ಸಂಪ್ರೀತಿಗೆ ಅನುಗುಣವಾಗಿ ಸಾಗಿಸುವವರಾಗೋಣ.

------------*****------------

***(ಪುಟ ಸಂಖ್ಯೆ 01ರ ತಫ್ಸೀರ್‌ನ ಉಳಿದ ಭಾಗ)***

ತೊರೆಯಬೇಕಾದಾಗ, ಅಲ್ಲಿನ ಪ್ರಮುಖರನ್ನು ಕರೆಯಿಸಿ, ಅವರಿಂದ ಸಂಗ್ರಹಿಸಿದ್ದ ಎಲ್ಲಾ ತೆರಿಗೆ ಹಣವನ್ನು ಅವರಿಗೆ ಮರಳಿ ಒಪ್ಪಿಸಿದರು. ಅವರು ಹೀಗೆ ಹೇಳಿದರು: 'ನಿಮ್ಮ ಜೀವ ಮತ್ತು ಸಂಪತ್ತನ್ನು ರಕ್ಷಿಸುವ ಜವಾಬ್ದಾರಿಯನ್ನು ವಹಿಸಿಕೊಂಡಿದ್ದ ಕಾರಣವೇ ನಾವು ಈ ತೆರಿಗೆಯನ್ನು ಪಡೆದಿದ್ದೆವು. ಆದರೆ ಈಗ ಪರಿಸ್ಥಿತಿಗಳು ಬದಲಾಗಿವೆ; ನಾವು ಈ ನಗರವನ್ನು ತೊರೆಯುತ್ತಿದ್ದೇವೆ. ಆದ್ದರಿಂದ, ನಿಮ್ಮ ರಕ್ಷಣೆಯ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗದಿರುವಾಗ ನಿಮ್ಮ ಹಣವನ್ನು ನಮ್ಮ ಬಳಿಯೇ ಇಟ್ಟುಕೊಳ್ಳುವುದು ದಿಯಾನತ್ ಮತ್ತು ಅಮಾನತ್‌ನ ತತ್ವಗಳಿಗೆ ವಿರುದ್ಧವಾಗಿದೆ.' ಹೀಗಾಗಿ, ಸಂಗ್ರಹಿಸಿದ್ದ ಲಕ್ಷಾಂತರ ರೂಪಾಯಿಗಳನ್ನು ಅವರಿಗೆ ಹಿಂತಿರುಗಿಸಲಾಯಿತು. ಇತಿಹಾಸವು ತಿಳಿಸುವಂತೆ, ಈ ಘಟನೆಯು ಕ್ರೈಸ್ತರ ಹೃದಯಗಳ ಮೇಲೆ ಅಷ್ಟೊಂದು ಆಳವಾದ ಪ್ರಭಾವ ಬೀರಿತು; ಮುಸ್ಲಿಮರ ಸೇನೆಯು ನಗರವನ್ನು ತೊರೆದಾಗ, ಅವರು ಕಣ್ಣೀರಿನಿಂದ ಅವರನ್ನು ಬೀಳ್ಕೊಡಲು ಜೊತೆಯಾಗಿ ನಡೆದರು ಮತ್ತು ಹೀಗೆ ಪ್ರಾರ್ಥಿಸಿದರು: 'ಅಲ್ಲಾಹ್ ನಿಮ್ಮನ್ನು ಮತ್ತೆ ನಮ್ಮ ಬಳಿಗೆ ಮರಳಿ ತರಲಿ. ನಿಮ್ಮಂತಹ ನ್ಯಾಯನಿಷ್ಠ, ಪ್ರಾಮಾಣಿಕ ಮತ್ತು ದಯಾಳು ಆಡಳಿತಗಾರರನ್ನು ನಾವು ಇಂದಿನವರೆಗೂ ಕಂಡಿಲ್ಲ.' (ಫುತೂಹುಲ್ ಬುಲ್ದಾನ್, ಅಲ್–ಬಲಾಧುರಿ, ಹಿಮ್ಸ್ ಮತ್ತು ಯರ್ಮೂಕ್ ಯುದ್ಧದ ವಿವರಣೆ) ಇದೇ ರೀತಿಯಲ್ಲಿ, ಇಸ್ಲಾಂ ಆಡಳಿತವನ್ನೂ ಒಂದು 'ಅಮಾನತ್' (ಪವಿತ್ರ ಹೊಣೆಗಾರಿಕೆ) ಎಂದು ಘೋಷಿಸಿದೆ. ಈ ಅಮಾನತ್ ನಿಮ್ಮ ವಶಕ್ಕೆ ಬಂದಾಗ, ಅದರಲ್ಲಿ ಎಂದಿಗೂ ದ್ರೋಹ ಮಾಡಬಾರದು ಎಂದು ಆಜ್ಞಾಪಿಸಿದೆ. ಆಡಳಿತದ ಜವಾಬ್ದಾರಿಯನ್ನು ಸದಾ ಪ್ರಾಮಾಣಿಕತೆ, ನ್ಯಾಯ ಮತ್ತು ಸಂಪೂರ್ಣ ದಿಯಾನತ್‌ನೊಂದಿಗೆ ನಿರ್ವಹಿಸುವ ಅರ್ಹ ವ್ಯಕ್ತಿಗಳ ಕೈಗೆ ಒಪ್ಪಿಸಬೇಕು ಎಂದು ಇಸ್ಲಾಂ ಬೋಧಿಸುತ್ತದೆ. ಇತಿಹಾಸವು ಸಾಕ್ಷಿಯಾಗಿದೆ: ಮುಸ್ಲಿಮರು ಈ ದೈವಿಕ ಆದೇಶವನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸಿದ್ದಾರೆ.

**(ತಫ್ಸೀರ್–ಎ–ಕಬೀರ್, ಸಂಪುಟ 8, ಪುಟ 278, ಯುಕೆ ಆವೃತ್ತಿ)**

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**Love for All, Hatred for None**

***(ಪುಟ ಸಂಖ್ಯೆ 02ರ ಉಳಿದ ಭಾಗ)***

ಹದೀಸುಗಳನ್ನು ಸಂಪೂರ್ಣವಾಗಿ ತಿರಸ್ಕರಿಸುವುದು ಒಂದು ಅರ್ಥದಲ್ಲಿ ಪವಿತ್ರ ಖುರ್‌ಆನ್‌ನನ್ನೇ ನಿರಾಕರಿಸಿದಂತಾಗುತ್ತದೆ. ಏಕೆಂದರೆ ಅಲ್ಲಾಹ್ ತಆಲಾ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಆಜ್ಞಾಪಿಸುತ್ತಾನೆ: **ಖುಲ್ ಇನ್‌ಕುಂತುಮ್ ತುಹಿಬ್ಬೂನಲ್ಲಾಹ ಫತ್ತಬಿಊನೀ ಯುಹ್‌ಬಿಬ್‌ಕುಮುಲ್ಲಾಹ–** ಹೇಳಿರಿ: ನೀವು ಅಲ್ಲಾಹ್‌ನನ್ನು ಪ್ರೀತಿಸುವವರಾಗಿದ್ದರೆ ನನ್ನನ್ನು ಅನುಸರಿಸಿರಿ; ಆಗ ಅಲ್ಲಾಹ್ ನಿಮ್ಮನ್ನು ಪ್ರೀತಿಸುವನು." ಆದ್ದರಿಂದ, ಅಲ್ಲಾಹ್‌ನ ಪ್ರೀತಿಯನ್ನು ಪಡೆಯುವುದು ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರ ಅನುಸರಣೆಯೊಂದಿಗೆ ಅವಿಭಾಜ್ಯವಾಗಿ ಸಂಬಂಧಿಸಿದೆ. ನಬಿಯವರ ಪವಿತ್ರ ಆಚರಣೆಗಳು ಮತ್ತು ಕಾರ್ಯಪದ್ಧತಿಯನ್ನು ತಿಳಿದುಕೊಳ್ಳಲು ಹದೀಸುಗಳು ಪ್ರಮುಖ ಸಾಧನವಾಗಿವೆ. ಹೀಗಾಗಿ, ಹದೀಸುಗಳನ್ನು ತ್ಯಜಿಸುವವನು ವಾಸ್ತವದಲ್ಲಿ ನಬಿಯವರ ಅನುಸರಣೆಯ ಮಾರ್ಗವನ್ನೇ ತ್ಯಜಿಸುತ್ತಾನೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರು, ಹಿಂದಿನ ಮುಹದ್ದಿಸರು ಅಥವಾ ಅವರ ವಿಮರ್ಶಕರು ಅನುಸರಿಸಿದ್ದ ವಿಧಾನಕ್ಕಿಂತ ವಿಭಿನ್ನವಾದ, ಅತ್ಯಂತ ಸಮತೋಲನಯುತ ಮತ್ತು ದೈವಿಕವಾದ ತತ್ವವನ್ನು ಹದೀಸುಗಳ ಪರಿಶೀಲನೆಗಾಗಿ ಪ್ರಸ್ತುತಪಡಿಸಿದ್ದಾರೆ. ಅವರು ಹೇಳುತ್ತಾರೆ:

ಪವಿತ್ರ ಖುರ್‌ಆನ್‌ನ ಉಪದೇಶಗಳಿಗೆ ಹೊಂದಿಕೆಯಾಗುವ ಯಾವುದೇ ಹದೀಸು, ಅದರ ಸನದ್ (ಪರಂಪರೆ) ದುರ್ಬಲವಾಗಿದ್ದರೂ ಸಹ, ಅದನ್ನು ಸ್ವೀಕರಿಸಬೇಕು. ಇದಕ್ಕೆ ವಿರುದ್ಧವಾಗಿ, ಯಾವುದಾದರೂ ಹದೀಸು ಅತ್ಯಂತ ಪ್ರಾಮಾಣಿಕ ಅಥವಾ ಮುತವಾತಿರ್ ಎಂದು ಪರಿಗಣಿಸಲ್ಪಟ್ಟಿದ್ದರೂ, ಅದು ಪವಿತ್ರ ಖುರ್‌ಆನ್‌ನ ಸ್ಪಷ್ಟ ಮತ್ತು ನಿಶ್ಚಿತ ಬೋಧನೆಗೆ ವಿರುದ್ಧವಾಗಿದ್ದರೆ, ಮೊದಲು ಅದರ ಸಮನ್ವಯ (ತತ್ಬೀಕ್) ಸಾಧ್ಯವಿದೆಯೇ ಎಂಬುದನ್ನು ಪರಿಶೀಲಿಸಬೇಕು. ಆದರೆ ಯಾವುದೇ ರೀತಿಯ ಸಮನ್ವಯ ಸಾಧ್ಯವಾಗದಿದ್ದರೆ, ಅಂತಹ ಹದೀಸನ್ನು ತ್ಯಜಿಸಬೇಕು. ಏಕೆಂದರೆ ಅದು ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರ ನಿಜವಾದ ವಚನವಾಗಿರಲು ಸಾಧ್ಯವಿಲ್ಲ. ಇನ್ನೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಹೇಳುತ್ತಾರೆ: ಯಾವುದಾದರೂ ಹದೀಸಿನಲ್ಲಿ ಒಂದು ಭವಿಷ್ಯವಾಣಿ ಇದ್ದು, ಮುಹದ್ದಿಸರ ದೃಷ್ಟಿಯಲ್ಲಿ ಅದು ದುರ್ಬಲ (ಝಈಫ್) ಎಂದು ಪರಿಗಣಿಸಲ್ಪಟ್ಟಿದ್ದರೂ, ನಂತರ ಕಾಲಕ್ರಮೇಣ ಆ ಭವಿಷ್ಯವಾಣಿ ನಿಜವಾಗಿರುವುದು ಸ್ಪಷ್ಟವಾದರೆ, ಆ ಹದೀಸನ್ನು ಸತ್ಯವೆಂದು ಒಪ್ಪಿಕೊಳ್ಳಬೇಕು. ಅಂತಹ ಸಂದರ್ಭದಲ್ಲಿ ಆ ಹದೀಸನ್ನು ದುರ್ಬಲ ಅಥವಾ ಕೃತಕವೆಂದು ತೀರ್ಮಾನಿಸಿದ ಮುಹದ್ದಿಸರು ಅಥವಾ ರಾವಿಗಳ ನಿರ್ಣಯವೇ ತಪ್ಪಾಗಿದೆ ಎಂದು ತಿಳಿಯಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರು ತಿಳಿಸುವಂತೆ, ಇಂತಹ ಅನೇಕ ಹದೀಸುಗಳಲ್ಲಿ ಭವಿಷ್ಯವಾಣಿಗಳಿದ್ದು, ಅವುಗಳಲ್ಲಿ ಹಲವಾರನ್ನು ಕೆಲವು ಮುಹದ್ದಿಸರು ದುರ್ಬಲ ಅಥವಾ ಅಸತ್ಯವೆಂದು ಪರಿಗಣಿಸಿದ್ದರು. ಆದರೆ ಅವು ನಂತರ ನಿಜವೆಂದು ಸಾಬೀತಾದರೆ, ಅಲ್ಲಾಹ್ ತಆಲಾ ಸ್ವತಃ ಅವುಗಳ ಸತ್ಯತೆಯನ್ನು ಪ್ರಕಟಿಸಿರುವುದರಿಂದ, ಅವುಗಳನ್ನು ತಿರಸ್ಕರಿಸುವುದು ಸರಿಯಲ್ಲ. (ಕಶ್ತಿ–ಎ–ನೂಹ್ ಪತ್ರದ ಸಾರಾಂಶ)

ಆದ್ದರಿಂದ, ಹದೀಸುಗಳನ್ನು ಪರಿಶೀಲಿಸಿ ಅವುಗಳ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಷಯದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರು ನಿರೂಪಿಸಿರುವ ಈ ತತ್ವಗಳು ಅತ್ಯಂತ ದೃಢವಾದ, ನ್ಯಾಯಸಮ್ಮತವಾದ ಮತ್ತು ದೈವಿಕ ಮಾರ್ಗದರ್ಶನವಾಗಿವೆ. ಈ ಯುಗದಲ್ಲಿ ಹಕಮ್ ವ ಅದಲ್ ಆಗಿ ಅಲ್ಲಾಹ್ ತಆಲಾ ಕಳುಹಿಸಿದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾತು ವಸ್ಸಲಾಮ್ ಅವರ ಈ ದೈವಿಕ ತೀರ್ಪುಗಳನ್ನು ಸ್ವೀಕರಿಸುವುದರಲ್ಲಿಯೇ ಇಸ್ಲಾಮಿನ ಬಲ, ಏಕತೆ ಮತ್ತು ಶಾಶ್ವತ ಸ್ಥಿರತೆ ಅಡಗಿದೆ.

ಆದ್ದರಿಂದ, ಹದೀಸುಗಳನ್ನು ಅರ್ಥಮಾಡಿಕೊಳ್ಳುವುದು, ಅವುಗಳನ್ನು ಪರಿಶೀಲಿಸುವುದು ಮತ್ತು ಅವುಗಳ ಮೇಲೆ ಆಚರಣೆ ನಡೆಸುವುದು ಎಂಬ ಎಲ್ಲಾ ವಿಷಯಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನೀಡಿರುವ ಈ ಅಮೂಲ್ಯ ಮಾರ್ಗದರ್ಶನವನ್ನು ಅನುಸರಿಸುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯವಾಗಿದೆ.

**'ಬದರ್' ವಾರಪತ್ರಿಕೆಯನ್ನು Online**

**ಮುಖಾಂತರ**

**ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:**

**https://akhbarbadr.in/Kannada/#gsc.tab=0**

## ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

### ಅಬಿಸೀನಿಯಾ (ಇತಿಯೋಪಿಯಾ)ದ ಕಡೆಗೆ ವಲಸೆ

ಮಕ್ಕದ ನಿವಾಸಿಗಳ ದೌರ್ಜನ್ಯ ಅತ್ಯಧಿಕವಾದಾಗ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತನ್ನ ಶಿಷ್ಯರನ್ನು ಕರೆದು ಹೀಗೆಂದರು: "ಪಶ್ಚಿಮದ ದಿಕ್ಕಿನಲ್ಲಿ ಸಮುದ್ರದ ಆಚೆ ದಡದಲ್ಲಿ ಒಂದು ದೇಶವಿದೆ. ಅಲ್ಲಿನ ಜನರನ್ನು ಅವರು ಮಾಡುವ ಆರಾಧನೆಯ ವಿಧಾನದ ವ್ಯತ್ಯಾಸದ ಕಾರಣದಿಂದ ಹಿಂಸಿಸಲಾಗುವುದಿಲ್ಲ. ಧರ್ಮ ಪರಿವರ್ತನೆ ಮಾಡುವವರನ್ನು ಕೊಲ್ಲಲಾಗುವುದಿಲ್ಲ. ಅಲ್ಲಿ ನ್ಯಾಯನಿಷ್ಠುರರಾದ ಒಬ್ಬ ಅರಸರಿದ್ದಾರೆ. ನೀವು ಅಲ್ಲಿಗೆ ವಲಸೆ ಹೋಗಿರಿ. ಪ್ರಾಯಶಃ ಅಲ್ಲಿ ನಿಮಗೆ ಸುಖ ಸೌಲಭ್ಯದ ಮಾರ್ಗ ಸುಗಮವಾಗುವುದು."

ಹಝ್ರತ್ ಪೈಗಂಬರರ(ಸ) ಉಪದೇಶ ಪ್ರಕಾರ ಕೆಲವು ಮುಸ್ಲಿಮ್ ಪುರುಷರೂ ಸ್ತ್ರೀಯರೂ ಮಕ್ಕಳೂ ಅಬಿಸೀನಿಯಾ ದೇಶಕ್ಕೆ ವಲಸೆ ಹೋದರು. ಅವರು ಮಕ್ಕ ಬಿಟ್ಟು ಹೋದುದು ಸಾಮಾನ್ಯ ವಿಷಯವೇನೂ ಆಗಿರಲಿಲ್ಲ. ಮಕ್ಕದ ನಿವಾಸಿಗಳು ತಮ್ಮನ್ನು ಪವಿತ್ರ ಕಅ್‌ಬದ ಮೇಲುಸ್ತುವಾರಿ ನೋಡಿಕೊಳ್ಳುವವರಾಗಿ ಪರಿಗಣಿಸುತ್ತಿದ್ದರು. ಮಕ್ಕವನ್ನು ಬಿಟ್ಟು ಹೋಗುವುದು ಅವರನ್ನು ಅಸಹನೀಯ ದುಃಖಕ್ಕೆ ಈಡು ಮಾಡುತ್ತಿತ್ತು. ಅವರಿಗೆ ಮಕ್ಕದಲ್ಲಿ ಜೀವಿಸಲು ಅಷ್ಟು ದುರ್ಭರವಾದುದರಿಂದಲೇ ಅವರು ಮಕ್ಕವನ್ನು ಬಿಟ್ಟು ಹೋಗುವ ನಿರ್ಧಾರ ಮಾಡಿದರು. ಅವರು ಮಕ್ಕ ನಗರದಿಂದ ಹೊರಟು ಹೋಗುವುದು ಅವರಿಗೆ ಅತ್ಯಂತ ವೇದನೆ ಉಂಟುಮಾಡುವ ಸಂಭವವಾಗಿತ್ತು. ಅವರ ವಲಸೆ ಹೋಗುವಿಕೆ ಸಹ ಗೌಪ್ಯವಾಗಿರಬೇಕಾಗಿತ್ತು. ಮಕ್ಕದವರಿಗೆ ವಲಸೆ ಹೋಗುವವರ ಕುರಿತು ತಿಳಿದರೆ ಅವರನ್ನು ತಡೆಗಟ್ಟುವರೆಂದು ತಿಳಿದಿತ್ತು. ಆದುದರಿಂದ ವಲಸಿಗರಿಗೆ ತಮ್ಮ ಬಂಧುಗಳನ್ನೂ ಮಿತ್ರರನ್ನೂ ಕೊನೆಯದಾಗಿ ಭೇಟಿಯಾಗಲು ಕೂಡ ಸಾಧ್ಯವಾಗಲಿಲ್ಲ. ಅವರ ಹೃದಯದ ಸ್ಥಿತಿ ಹೇಗಿತ್ತೆಂದು ಅವರಿಗೆಯೇ ತಿಳಿದಿತ್ತು. ಅವರನ್ನು ನೋಡುವವರು ಸಹ ಅವರ ಕಷ್ಟದ ಸ್ಥಿತಿಯಿಂದ ಪ್ರಭಾವಿತರಾಗದೆ ಇರಲಿಲ್ಲ. ಈ ವಲಸೆಗಾರರ ಸಂಘ ಹೊರಟಾಗ ಆ ಕಾಲದಲ್ಲಿ ಅವಿಶ್ವಾಸಿಯಾಗಿದ್ದ ಮತ್ತು ಇಸ್ಲಾಮಿನ ಕಠಿಣ ಶತ್ರುವಾಗಿದ್ದ ಮತ್ತು ಮುಸ್ಲಿಮರಿಗೆ ಹಿಂಸೆ ಕೊಡುವುದರಲ್ಲಿ ಅಗ್ರಗಣ್ಯರಾಗಿದ್ದ ಹಝ್ರತ್ ಉಮರ್(ರ) ವಲಸೆಗಾರರಲ್ಲಿ ಕೆಲವರನ್ನು ಆಕಸ್ಮಿಕವಾಗಿ ಭೇಟಿಯಾಗಿದ್ದರು. ವಲಸೆಗಾರರಲ್ಲಿ ಹಝ್ರತ್ ಉಮ್ಮು ಅಬ್ದುಲ್ಲಾಹ್ ಎಂಬ ಒಬ್ಬ ಸ್ತ್ರೀಯು ಸಹ ಇದ್ದರು. ಕಟ್ಟಿ ಇಡಲಾದ ಸಾಮಗ್ರಿಗಳು ಮತ್ತು ಸಿದ್ಧಪಡಿಸಲಾದ ಸವಾರಿ ಮೃಗಗಳನ್ನು ಹಝ್ರತ್ ಉಮರ್(ರ) ಕಂಡಾಗ ಆ ಜನರು ಮಕ್ಕದಿಂದ ವಲಸೆ ಹೋಗಲಿದ್ದಾರೆಂದು ಅವರಿಗೆ ತಿಳಿದು ಅವರು ಹೀಗೆಂದರು: "ಓ ಉಮ್ಮು ಅಬ್ದುಲ್ಲಾಹ್, ಇದು ವಲಸೆ ಹೋಗುವ ಸಿದ್ಧತೆ ಎಂದು ತಿಳಿಯುತ್ತದೆ." ಆಗ ಉಮ್ಮು ಅಬ್ದುಲ್ಲಾ ಹೀಗೆ ಹೇಳಿದರೆಂದು ವರದಿಯಾಗಿದೆ: "ಅಲ್ಲಾಹನಾಣೆ, ನಾವು ಯಾವುದೋ ವಿದೇಶಕ್ಕೆ ವಲಸೆ ಹೋಗಲಿರುವೆವು. ಏಕೆಂದರೆ ನೀವು ನಮಗೆ ಬಹಳ ಹಿಂಸೆ ನೀಡಿದಿರಿ. ನಮ್ಮನ್ನು ಅನೇಕ ಕಷ್ಟಗಳಿಗೆ ಗುರಿಮಾಡಿದಿರಿ. ಅಲ್ಲಾಹನು ನಮಗೆ ಶಾಂತಿ ಮತ್ತು ಸಮಾಧಾನದ ಪರಿಸ್ಥಿತಿಯನ್ನು ಉಂಟುಮಾಡುವ ತನಕ ನಾವು ನಮ್ಮ ದೇಶಕ್ಕೆ ಮರಳಿಬರಲಾರೆವು." ಆಗ ಹಝ್ರತ್ ಉಮರ್(ರ), "ಒಳ್ಳೆಯದು, ದೇವನು ನಿಮ್ಮ ಜೊತೆಗಿರಲಿ" ಎಂದು ಹೇಳಿದುದಾಗಿ ಹಝ್ರತ್ ಉಮ್ಮು ಅಬ್ದುಲ್ಲಾ ವರದಿ ಮಾಡಿದ್ದಾರೆ. ಅವರ ಮಾತಿನಲ್ಲಿ ಹಿಂದೆಂದೂ ಕಂಡಿರದ ದುಃಖವನ್ನು ತಾನು ಮನವರಿಕೆ ಮಾಡಿದೆನೆಂದೂ ಅವರು ಅಲ್ಲಿಂದ ಬೇಗನೆ ಮುಖ ತಿರುಗಿಸಿ ಹೋದರೆಂದೂ ಅವರು ಈ ಕಾರಣದಿಂದ ಅತ್ಯಂತ ದುಃಖಿತರಾಗಿರುವರೆಂದು ತಾನು ತಿಳಿದುಕೊಂಡೆನೆಂದೂ ಉಮ್ಮು ಅಬ್ದುಲ್ಲಾ ವಿವರಿಸಿದ್ದಾರೆ. ಈ ಜನರು ವಲಸೆ ಹೋಗುವುದು ಮಕ್ಕದ ನಿವಾಸಿಗಳಿಗೆ ತಿಳಿದಾಗ ಅವರು ವಲಸೆಗಾರರನ್ನು ಬೆನ್ನಟ್ಟಿ ಸಮುದ್ರದ ತನಕ ಹೋದರು. ಆದರೆ ವಲಸೆಗಾರರು ಅವಿಶ್ವಾಸಿಗಳು ಸಮುದ್ರದ ಕರಾವಳಿ ತಲಪುವ ಮೊದಲೇ ಅಬಿಸೀನಿಯಾ ದೇಶಕ್ಕೆ ಹೊರಟಿದ್ದರು. ಮಕ್ಕದವರಿಗೆ ಈ ಸಂಗತಿ ತಿಳಿದಾಗ ಅಬಿಸೀನಿಯಾದ ಅರಸನ ಬಳಿಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಅರಸನನ್ನು ಮುಸ್ಲಿಮರ ವಿರುದ್ಧ ಪ್ರಚೋದಿಸಲು ಮತ್ತು ಅಲ್ಲಿಗೆ ಹೋದ ಮುಸ್ಲಿಮರನ್ನು ಮಕ್ಕದವರ ವಶಕ್ಕೆ ನೀಡಲು ಪ್ರೇರೇಪಿಸಿ ಅರಸನು ಅದಕ್ಕೆ ಒಪ್ಪಿದರೆ ಮುಸ್ಲಿಮರಿಗೆ ತಮಗೆ ಮನಬಂದಂತೆ ಶಿಕ್ಷೆ ನೀಡಲು ಅವರು ತೀರ್ಮಾನಿಸಿದರು. ಮಕ್ಕದ ಅವಿಶ್ವಾಸಿಗಳ ಮುಂದಾಳುಗಳ ಶಿಕ್ಷೆಯನ್ನು ಸಹಿಸದೆ ಮಕ್ಕದಿಂದ ಹೊರಗೆ ವಲಸೆ ಹೋದುದು ಮುಸ್ಲಿಮರ ಅಪರಾಧವಾಗಿ ಅವಿಶ್ವಾಸಿಗಳು ಪರಿಗಣಿಸಿದ್ದರು. ಅರಸನ ಬಳಿಗೆ ಕಳುಹಿಸಲಾದ ಪ್ರತಿನಿಧಿಗಳಲ್ಲಿ ಅನಂತರ ಮುಸ್ಲಿಮರಾದ ಹಝ್ರತ್ ಅಮರಿಬ್ನು ಆಸ್ ಸಹ ಇದ್ದರು. ಈಜಿಪ್ಟ್ ಅನಂತರ ಅವರಿಂದಲೇ ಜಯಿಸಲ್ಪಟ್ಟಿತು.

ಮಕ್ಕದವರ ಪ್ರತಿನಿಧಿಗಳು ಅಬಿಸೀನಿಯಾ ದೇಶಕ್ಕೆ ಹೋಗಿ ಅಲ್ಲಿನ ಅರಸನನ್ನು ಭೇಟಿಯಾದರು. ಅವರು ಅಲ್ಲಿನ ಆಸ್ಥಾನಿಕರನ್ನು ಮುಸ್ಲಿಮರ ವಿರುದ್ಧ ಚೆನ್ನಾಗಿ ಪ್ರಚೋದಿಸಿದರು. ಆದರೆ ಅಲ್ಲಾಹನು ಅಬಿಸೀನಿಯಾದ ಅರಸನ ಹೃದಯವನ್ನು ಬಲಪಡಿಸಿದ್ದನು. ಮಕ್ಕದ ಅವಿಶ್ವಾಸಿಗಳು ಒತ್ತಾಯಿಸಿದರೂ ಆತನ ಆಸ್ಥಾನಿಕರು ಅದಕ್ಕೆ ಪ್ರೇರೇಪಿಸಿದರೂ ಆತನು ಮುಸ್ಲಿಮರನ್ನು ಅವಿಶ್ವಾಸಿಗಳ ವಶಕ್ಕೆ ನೀಡಲು ಸಮ್ಮತಿಸಲಿಲ್ಲ.

ಮಕ್ಕದ ಪ್ರತಿನಿಧಿಗಳ ಸಂಘವು ಅಬಿಸೀನಿಯಾದಿಂದ ತಮ್ಮ ಉದ್ದೇಶ ಸಫಲವಾಗದೆ ಹಿಂದಿರುಗಿದಾಗ ಮಕ್ಕದ ಮುಂದಾಳುಗಳು ಮುಸ್ಲಿಮರನ್ನು ಹಿಂದಕ್ಕೆ ಕರೆತರಲು ಬೇರೆ ಒಂದು ಉಪಾಯವನ್ನು ಹೂಡಿದರು. ಅಬಿಸೀನಿಯಾ ದೇಶಕ್ಕೆ ಹೋಗುವ ವ್ಯಾಪಾರಿಗಳನ್ನು "ಮಕ್ಕದ ಎಲ್ಲಾ ಜನರು ಮುಸ್ಲಿಮರಾದರು" ಎಂದು ಸುಳ್ಳು ಪ್ರಚಾರ ಮಾಡಲು ಪ್ರೋತ್ಸಾಹಿಸಲಾಯಿತು. ಈ ಸುದ್ದಿ ಅಬಿಸೀನಿಯಾದಲ್ಲಿದ್ದ ಮುಸ್ಲಿಮರಿಗೆ ತಲುಪಿದಾಗ ಅವರಲ್ಲಿ ಬಹುತೇಕ ಜನರು ಮಕ್ಕಕ್ಕೆ ಮರಳಿದರು. ಆ ಸುದ್ದಿ ಕುಚೋದ್ಯದಿಂದ ಹಬ್ಬಿಸಲಾಗಿತ್ತೆಂದೂ ಅದರಲ್ಲಿ ಸತ್ಯಾಂಶ ಇರಲಿಲ್ಲವೆಂದೂ ಅವರಿಗೆ ಆಗ ತಿಳಿಯಿತು. ಅವರಲ್ಲಿ ಕೆಲವರು ಅಬಿಸೀನಿಯಾ ದೇಶಕ್ಕೆ ಹಿಂದಿರುಗಿದರು. ಕೆಲವರು ಮಕ್ಕದಲ್ಲಿಯೇ ತಂಗಿದರು. ಹೀಗೆ ಮಕ್ಕದಲ್ಲಿ ಉಳಿದವರಲ್ಲಿ ಉಸ್ಮಾನ್ ಬಿನ್ ಮಝ್‌ವೂನ್ ಸಹ ಇದ್ದರು. ಅವರು ಮಕ್ಕದ ಒಬ್ಬ ಐಶ್ವರ್ಯವಂತರ ಪುತ್ರರಾಗಿದ್ದರು. ಅವರಿಗೆ ಅವರ ತಂದೆಯ ಸ್ನೇಹಿತರಾಗಿದ್ದ ವಲೀದ್ ಬಿನ್ ಮುಘೀರ ಆಶ್ರಯ ನೀಡಿದರು. ಅವರು ಮಕ್ಕದಲ್ಲಿ ಯಾವುದೇ ತೊಂದರೆಗೀಡಾಗದೆ ದಿನಗಳೆಯುತ್ತಿದ್ದರು. ಆದರೆ ಬೇರೆ ಮುಸ್ಲಿಮರಿಗೆ ತೊಂದರೆ ಕೊಡಲಾಗುತ್ತಿತ್ತು. ಮುಸ್ಲಿಮರಿಗೆ ಕಠಿಣವಾದ ಕಷ್ಟವನ್ನು ಕೊಡುವುದನ್ನು ಕಂಡಾಗ ಅಭಿಮಾನಿ ತರುಣರಾದ ಅವರು ವಲೀದರ ಬಳಿಗೆ ಹೋಗಿ ಹೀಗೆ ಹೇಳಿದರು: "ನಾನು ನಿಮ್ಮ ಸಂರಕ್ಷಣೆಯನ್ನು ನಿಮಗೆ ಮರಳಿಸುತ್ತೇನೆ. ಬೇರೆ ಮುಸ್ಲಿಮರು ಕಷ್ಟಪಡುತ್ತಾ ಇರುವಾಗ ನಾನು ನಿಮ್ಮ ಆಶ್ರಯದಲ್ಲಿ ಸುಖದಿಂದಿರಲಾರೆನು." ಆಗ ವಲೀದ್, "ಉಸ್ಮಾನ್ ನನ್ನ ಸಂರಕ್ಷಣೆಯಲ್ಲಿ ಈಗ ಇಲ್ಲ" ಎಂದು ಪ್ರಕಟಿಸಿದರು.

ಒಂದು ದಿನ ಲಬೀದ್ ಎಂಬ ಒಬ್ಬ ಪ್ರಸಿದ್ಧ ಅರಬಿ ಕವಿ ಮಕ್ಕ ನಗರದ ಗಣ್ಯರ ಜೊತೆಗೆ ಕುಳಿತುಕೊಂಡು ತನ್ನ ಪದ್ಯವನ್ನು ಅವರಿಗೆ ಓದಿ ಹೇಳುತ್ತಿದ್ದನು. ಅವನ ಪದ್ಯದ ಒಂದು ಚರಣ ಹೀಗಿತ್ತು:

**"ವ ಕುಲ್ಲು ನಯೀಮಿನ್ ಲಾ ಮಹಾಲತ ಝಾಯಿಲುನ್."**

ಅಂದರೆ, ಎಲ್ಲಾ ಅನುಗ್ರಹಗಳು ನಿಶ್ಚಯವಾಗಿಯೂ ಕೊನೆಗೆ ನಾಶವಾಗಲಿರುವುವು.

ಆಗ ಹಝ್ರತ್ ಉಸ್ಮಾನ್(ರ) ಹೀಗೆಂದರು: "ಇದು ತಪ್ಪು. ಸ್ವರ್ಗದ ಅನುಗ್ರಹಗಳು ಸದಾ ಕಾಲ ನೆಲೆನಿಲ್ಲುವುವು."

ಲಬೀದ್ ಬಹಳ ಗೌರವಿಸಲ್ಪಡುವ ದೊಡ್ಡ ವ್ಯಕ್ತಿಯಾಗಿದ್ದನು. ಆವನು ಉಸ್ಮಾನ್‌ರವರ ಆ ಉತ್ತರ ಕೇಳಿ ಕೆರಳಿದನು. ಅವನು ಹೇಳಿದನು: "ಓ ಖುರೈಶ್ ಜನರೇ, ನಿಮ್ಮ ಅತಿಥಿಗಳನ್ನು ಈ ರೀತಿ ಇದರ ಮೊದಲು ಅಪಮಾನಿಸಲು ಸಾಧ್ಯವಿರಲಿಲ್ಲ. ಈ ಹೊಸ ಸಂಪ್ರದಾಯ ಎಂದಿನಿಂದ ಪ್ರಾರಂಭವಾಯಿತು?" ಆಗ ಒಬ್ಬನು ಹೀಗೆಂದನು: "ಆತನೊಬ್ಬ ಮೂಢನಾಗಿದ್ದಾನೆ. ಆತನ ಮಾತನ್ನು ನಿರ್ಲಕ್ಷಿಸಿರಿ." ಆಗ ಉಸ್ಮಾನ್ ಹೇಳಿದರು: "ಇಲ್ಲಿ ಮೌಢ್ಯತೆ ಏನಿದೆ? ನಾನು ಹೇಳಿದುದು ಸತ್ಯವೇ ಆಗಿದೆ". ಆಗ ಆ ವ್ಯಕ್ತಿ ಉಸ್ಮಾನರ ಮುಖಕ್ಕೆ ಬಲವಾಗಿ ಗುದ್ದಿದನು. ಅದರಿಂದ ಅವರ ಒಂದು ಕಣ್ಣು ಹೊರಗೆ ಬಂತು, ವಲೀದ್ ಆ ಸಂದರ್ಭದಲ್ಲಿ ಅಲ್ಲಿ ಕುಳಿತಿದ್ದರು. ಉಸ್ಮಾನರ ತಂದೆಯೊಂದಿಗೆ ಅವರಿಗೆ ಬಹಳ ಗಾಢವಾದ ಸ್ನೇಹ ಸಂಬಂಧವಿತ್ತು. ತನ್ನ ಮೃತ ಸ್ನೇಹಿತನ ಮಗನು ಈ ಅವಸ್ಥೆಯಲ್ಲಿರುವುದನ್ನು ನೋಡಲು ಅವರಿಗೆ ಆಗಲಿಲ್ಲ. ಆದರೆ ಮಕ್ಕದ ಸಂಪ್ರದಾಯ ಪ್ರಕಾರ ಉಸ್ಮಾನ್ ಅವರ ಸಂರಕ್ಷಣೆಯಲ್ಲಿ ಇಲ್ಲದುದರಿಂದ ಅವರಿಗೆ ಬೆಂಬಲ ನೀಡಲು ಅವರಿಗೆ ಸಾಧ್ಯವಿರಲಿಲ್ಲ. ಆದುದರಿಂದ ಅವರು ಉಸ್ಮಾನ್‌ರನ್ನು ಸಂಬೋಧಿಸಿ ಹೀಗೆ ಹೇಳಿದರು: "ಓ ನನ್ನ ಮೃತ ಸ್ನೇಹಿತನ ಪುತ್ರಾ, ನೀನೊಂದು ಪ್ರಬಲ ಸಂರಕ್ಷಣೆಯಲ್ಲಿದ್ದಾಗ ನಿನ್ನ ಈ ಕಣ್ಣು ಸುರಕ್ಷಿತವಾಗಿತ್ತು (ಎಂದರೆ ನೀನು ನನ್ನ ಸಂರಕ್ಷಣೆಯಲ್ಲಿದ್ದಾಗ ನೀನು ಸುರಕ್ಷಿತನಾಗಿದ್ದೆ). ಆದರೆ ನೀನು ಸ್ವತಃ ಆ ಸಂರಕ್ಷಣೆಯನ್ನು ತ್ಯಜಿಸಿದೆ ಮತ್ತು ನಿನಗೆ ಈ ರೀತಿಯ ಅವಸ್ಥೆ ಆಯಿತು." ಆಗ ಉಸ್ಮಾನ್(ರ) ಹೀಗೆ ಹೇಳಿದರು: "ನನಗೆ ಏನು ಸಂಭವಿಸಿದೆಯೋ ಅದನ್ನು ನಾನು ಆಶಿಸಿದ್ದೆನು. ನೀನು ನನ್ನ ಒಡೆದ ಕಣ್ಣಿನ ಕುರಿತು ಸಂತಾಪ ಸೂಚಿಸುತ್ತಿರುವೆ. ಆದರೆ ನನ್ನ ಸುರಕ್ಷಿತವಾದ ಕಣ್ಣು ತನ್ನ ಸಹೋದರ ಕಣ್ಣಿಗೆ ಸಂಭವಿಸಿದುದು ತನಗೇಕೆ ಸಂಭವಿಸಿಲ್ಲ ಎಂದು ಆತಂಕಗೊಂಡಿದೆ. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮಾದರಿ ನನಗೆ ಅನುಸರಣೆಗೆ ಯೋಗ್ಯವಾಗಿದೆ. ಅವರು ಕಷ್ಟ ಅನುಭವಿಸುತ್ತಾ ಇರುವಾಗ ನಾನು ಏಕೆ ಕಷ್ಟವನ್ನನುಭವಿಸಬಾರದು. ನನಗೆ ಅಲ್ಲಾಹನ ಸಹಾಯವೇ ಸಾಕು."

(ಮುಂದುವರಿಯುವುದು)

## ಹಝ್ರತ್ ಮಸೀಹ್ ಮೌಊದರ(ಅಲೈಹಿಸ್ಸಲಾಮ್) ಪವಿತ್ರ ಜೀವನ

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ)

(24) **ಬಿಸ್ಮಿಲ್ಲಾಹಿರ್ರಹ್ಮಮಾನ್ ನಿರ್ರಹೀಮ್:** ಹಝ್ರತ್ ವಾಲಿದಾ ಸಾಹಿಬಾ ಅವರು ನನಗೆ ಹೀಗೆ ವಿವರಿಸಿದರು: ನಿನ್ನ ದೊಡ್ಡಪ್ಪರಾದ (ಮಿರ್ಝಾ ಗುಲಾಮ್ ಕಾದಿರ್ ಸಾಹಿಬ್) ಅವರು ಸಂತಾನವಿಲ್ಲದೆ ವಫಾತ್ ಹೊಂದಿದಾಗ, ನಿನ್ನ ದೊಡ್ಡಮ್ಮ ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಅವರ ಬಳಿಗೆ ಅಳುತ್ತಾ ಬಂದು ಹೀಗೆ ವಿನಂತಿಸಿದರು: ನನ್ನ ಪತಿಯ ಆಸ್ತಿಯನ್ನು ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಅವರ ಹೆಸರಿಗೆ 'ಮುತಬನ್ನಾ' (ದತ್ತಪುತ್ರ) ಎಂಬ ಆಧಾರದ ಮೇಲೆ ದಾಖಲಿಸಿ. ಏಕೆಂದರೆ ಯಾವ ರೀತಿಯಿಂದಲೂ ಆ ಆಸ್ತಿ ಈಗ ನಿಮ್ಮದೇ ಆಗಿದೆ; ಹೀಗೆ ಮಾಡಿದರೂ ಅದು ನಿಮ್ಮ ಕುಟುಂಬದಲ್ಲಿಯೇ ಉಳಿಯುತ್ತದೆ. ಅದಕ್ಕೆ ಅನುಗುಣವಾಗಿ ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಅವರು ತಮ್ಮ ದೊಡ್ಡಣ್ಣನ ಸಂಪೂರ್ಣ ಆಸ್ತಿಯನ್ನು ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಅವರ ಹೆಸರಿಗೆ ವರ್ಗಾಯಿಸಿದರು. ಈ ವಿನೀತ ಸೇವಕ (ಖಾಕ್ಸಾರ್) ಹಝ್ರತ್ ವಾಲಿದಾ ಸಾಹಿಬಾರನ್ನು ಕೇಳಿದೆನು: ಹಝ್ರತ್ ಸಾಹಿಬ್ (ಅ.ಸ.) ಅವರು 'ಮುತಬನ್ನಾ' (ದತ್ತಪುತ್ರ) ಎಂಬ ವಿಧಾನವನ್ನು ಹೇಗೆ ಅಂಗೀಕರಿಸಿದರು? ಅದಕ್ಕೆ ಅವರು ಉತ್ತರಿಸಿದರು: ಅದು ಕೇವಲ ಮಾತಿನ ರೀತಿಯಲ್ಲಿತ್ತು. ವಫಾತ್ ಆದ ನಂತರ 'ಮುತಬನ್ನಾ' ಎಂಬ ಪ್ರಶ್ನೆಯೇ ಉದಯಿಸುವುದಿಲ್ಲ. ನಿನ್ನ ದೊಡ್ಡಮ್ಮನ ಮನಸ್ಸಿಗೆ ಸಮಾಧಾನವಾಗಲೆಂದು ಹಝ್ರತ್ ಸಾಹಿಬ್ (ಅ.ಸ.) ಅವರು ನಿನ್ನ ದೊಡ್ಡಪ್ಪನ ಆಸ್ತಿಯನ್ನು ತಮ್ಮ ಹೆಸರಿಗೆ ಮಾಡಿಸಿಕೊಳ್ಳದೆ, ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಅವರ ಹೆಸರಿಗೆ ದಾಖಲಿಸಿ ಕೊಟ್ಟರು. ಆ ಕಾಲದ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಝ್ರತ್ ಸಾಹಿಬ್ (ಅ.ಸ.) ಅವರು, ಭವಿಷ್ಯದಲ್ಲಿ ತಮ್ಮ ಸ್ವಂತ ಆಸ್ತಿಯಿಂದಲೂ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಅವರಿಗೆ ಅರ್ಧ ಪಾಲು ಮತ್ತು ಉಳಿದ ಅರ್ಧ ಮಿರ್ಝಾ ಫಝ್ಲ್ ಅಹ್ಮದ್ ಸಾಹಿಬ್ ಅವರಿಗೆ ದೊರೆಯಲಿದೆ ಎಂದು ಭಾವಿಸಿದ್ದರು. ಆದ್ದರಿಂದ, ತಮ್ಮ ಜೀವಿತಾವಧಿಯಲ್ಲಿಯೇ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಅವರ ಪಾಲನ್ನು ಪ್ರತ್ಯೇಕವಾಗಿ ನೀಡಿದಂತಾಯಿತು ಎಂದು ಅವರು ಪರಿಗಣಿಸಿದರು.

**(25) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಹಝ್ರತ್ ವಾಲಿದಾ ಸಾಹಿಬಾ ಅವರು ನನಗೆ ಹೀಗೆ ವಿವರಿಸಿದರು: ಮಿರ್ಝಾ ಫಝ್ಲ್ ಅಹ್ಮದ್ ಸಾಹಿಬ್ ಅವರು ವಫಾತ್ ಹೊಂದಿದ ಕೆಲವು ಸಮಯದ ನಂತರ, ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಅವರು ನನಗೆ ಹೀಗೆ ಹೇಳಿದರು: ನಿನ್ನ ಮಕ್ಕಳೊಂದಿಗೆ ಆಸ್ತಿಯಲ್ಲಿ ಪಾಲು ಹಂಚಿಕೊಳ್ಳಬೇಕಾಗಿದ್ದವರು ಫಝ್ಲ್ ಅಹ್ಮದ್ ಒಬ್ಬರೇ ಆಗಿದ್ದರು. ಈಗ ಅವರೂ ಲೋಕತ್ಯಾಗ ಮಾಡಿದ್ದಾರೆ. ಈ ವಿನೀತ ಸೇವಕ (ಖಾಕ್ಸಾರ್) ಇದಕ್ಕೆ ಸಂಬಂಧಿಸಿದಂತೆ ಹೀಗೆ ವಿವರಿಸುತ್ತಾನೆ: ನಮ್ಮ ತಾತನವರಿಗೆ ಇಬ್ಬರು ಪುತ್ರರಿದ್ದರು. ಒಬ್ಬರು ಹಝ್ರತ್ ಸಾಹಿಬ್, ಅವರ ಹೆಸರು ಮಿರ್ಝಾ ಗುಲಾಮ್ ಅಹ್ಮದ್ (ಅಲೈಹಿಸ್ಸಲಾಮ್) ಆಗಿತ್ತು. ಇನ್ನೊಬ್ಬರು ನಮ್ಮ ದೊಡ್ಡಪ್ಪ ಮಿರ್ಝಾ ಗುಲಾಮ್ ಖಾದಿರ್ ಸಾಹಿಬ್, ಅವರು ಹಝ್ರತ್ ಸಾಹಿಬ್ (ಅ.ಸ.) ಅವರಿಗಿಂತ ಹಿರಿಯರಾಗಿದ್ದರು. ನಮ್ಮ ತಾತ ಅವರು ಖಾದಿಯಾನ್ ಪ್ರದೇಶದಲ್ಲಿದ್ದ ತಮ್ಮ ಭೂಮಿಯಲ್ಲಿ ಎರಡು ಹಳ್ಳಿಗಳನ್ನು ಸ್ಥಾಪಿಸಿ, ಅವುಗಳಿಗೆ ತಮ್ಮ ಇಬ್ಬರು ಪುತ್ರರ ಹೆಸರನ್ನು ಇಟ್ಟರು. ಹೀಗಾಗಿ ಒಂದು ಹಳ್ಳಿಗೆ ಖಾದಿರಾಬಾದ್ ಮತ್ತು ಮತ್ತೊಂದಕ್ಕೆ ಅಹ್ಮದಾಬಾದ್ ಎಂದು ಹೆಸರು ಇಡಲಾಯಿತು. ನಂತರ ಯಾವುದೋ ಕಾರಣದಿಂದ ಅಹ್ಮದಾಬಾದ್ ನಮ್ಮ ಕುಟುಂಬದ ಸ್ವಾಧೀನದಿಂದ ಹೊರಬಿದ್ದು, ಖಾದಿರಾಬಾದ್ ಮಾತ್ರ ಕುಟುಂಬದ ವಶದಲ್ಲೇ ಉಳಿಯಿತು. ಆ ಬಳಿಕ ಖಾದಿರಾಬಾದ್ ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಅವರ ಸಂತತಿಯವರ ನಡುವೆ ಹಂಚಿಕೆಯಾದಾಗ, ಅದರಲ್ಲಿ ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಅವರಿಗೂ ಪಾಲು ದೊರೆಯಿತು. ಆದರೆ ಅಲ್ಲಾಹನ ಅಪಾರ ಕುದ್ರತ್ ನೋಡಿ! ಸುಮಾರು ನಲವತ್ತು ವರ್ಷಗಳ ನಂತರ, ನಮ್ಮ ಕುಟುಂಬದ ಕೈಯಿಂದ ಹೊರಬಿದ್ದು ಇತರರ ಸ್ವಾಧೀನಕ್ಕೆ ಹೋಗಿದ್ದ ಅಹ್ಮದಾಬಾದ್ ಮತ್ತೆ ನಮ್ಮ ಕುಟುಂಬಕ್ಕೆ ಮರಳಿ ಬಂದಿದೆ. ಈಗ ಆ ಸಂಪೂರ್ಣ ಗ್ರಾಮವು ನಮ್ಮ ಮೂವರು ಸಹೋದರರ ಸ್ವಾಧೀನದಲ್ಲಿದೆ. ಮಿರ್ಝಾ ಸುಲ್ತಾನ್ ಅಹ್ಮದ್ ಸಾಹಿಬ್ ಅವರಿಗೆ ಅದರಲ್ಲಿ ಯಾವುದೇ ಪಾಲಿಲ್ಲ. ಇದಲ್ಲದೆ, ಈ ವಿನೀತ ಸೇವಕ ಮತ್ತೊಂದು ವಿಷಯವನ್ನು ಉಲ್ಲೇಖಿಸುತ್ತಾನೆ: ಖಾದಿರಾಬಾದ್ ಖಾದಿಯಾನ್‌ನ ಪೂರ್ವ ದಿಕ್ಕಿನಲ್ಲಿ ಇದೆ; ಆದರೆ ಅಹ್ಮದಾಬಾದ್ ಅದರ ಉತ್ತರ ದಿಕ್ಕಿನಲ್ಲಿ ಇದೆ.

**(26) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ನನ್ನ ನಿಜವಾದ ಮಾವರಾದ ಡಾಕ್ಟರ್ ಮೀರ ಮುಹಮ್ಮದ್ ಇಸ್ಮಾಯೀಲ್ ಸಾಹಿಬ್ ಅವರು ನಮಗೆ ಹೀಗೆ ವಿವರಿಸಿದರು: ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರು ಲುಧಿಯಾನಾದಲ್ಲಿ ತಮ್ಮ ಮಸೀಹ್ ಆಗಿರುವ ದಾವಾವನ್ನು ಪ್ರಕಟಿಸಿದಾಗ, ನಾನು ಆಗ ಚಿಕ್ಕ ಬಾಲಕನಾಗಿದ್ದು, ಬಹುಶಃ ಮೂರನೇ ತರಗತಿಯಲ್ಲಿ ಓದುತ್ತಿದ್ದೆ. ಆ ದಾವೆಯ ಕುರಿತು ನನಗೆ ಯಾವುದೇ ಮಾಹಿತಿ ಇರಲಿಲ್ಲ. ಒಂದು ದಿನ ನಾನು ಮದರಸೆಗೆ ಹೋದಾಗ, ಕೆಲವು ಹುಡುಗರು ನನಗೆ ಹೀಗೆ ಹೇಳಿದರು: ನಿಮ್ಮ ಮನೆಯಲ್ಲಿ ತಂಗಿರುವ ಖಾದಿಯಾನ್‌ನ ಮಿರ್ಝಾ ಸಾಹಿಬ್ ಅವರು, ಹಝ್ರತ್ ಈಸಾ (ಅಲೈಹಿಸ್ಸಲಾಮ್) ವಫಾತ್ ಹೊಂದಿದ್ದಾರೆ ಮತ್ತು ಬರಬೇಕಾಗಿದ್ದ ಮಸೀಹ್ ತಾವೇ ಎಂದು ದಾವಾ ಮಾಡಿದ್ದಾರೆ. ಡಾಕ್ಟರ್ ಸಾಹಿಬ್ ಹೇಳುತ್ತಿದ್ದರು: ನಾನು ಕೂಡಲೇ ಅವರ ಮಾತನ್ನು ತಿರಸ್ಕರಿಸಿ, 'ಇದು ಹೇಗೆ ಸಾಧ್ಯ? ಹಝ್ರತ್ ಈಸಾ (ಅಲೈಹಿಸ್ಸಲಾಮ್) ಜೀವಂತರಾಗಿದ್ದಾರೆ ಮತ್ತು ಅವರು ಆಕಾಶದಿಂದ ಇಳಿದು ಬರಲಿದ್ದಾರೆ' ಎಂದು ಹೇಳಿದೆ. ಆ ದಿನ ಮನೆಗೆ ಹಿಂದಿರುಗಿದಾಗ, ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಕುಳಿತಿದ್ದರು. ನಾನು ಅವರ ಎದುರಿಗೆ ಹೋಗಿ ಕೇಳಿದೆ: ನೀವು ನಿಮ್ಮನ್ನು ಮಸೀಹ್ ಎಂದು ಹೇಳುತ್ತಿದ್ದೀರಿ ಎಂದು ನಾನು ಕೇಳಿದ್ದೇನೆ. ಅದು ನಿಜವೇ? ಡಾಕ್ಟರ್ ಸಾಹಿಬ್ ಹೇಳುತ್ತಿದ್ದರು: ನನ್ನ ಈ ಪ್ರಶ್ನೆಯನ್ನು ಕೇಳಿದ ಕೂಡಲೇ, ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಯಾವುದೇ ವಾದವಿವಾದಕ್ಕೆ ಇಳಿಯಲಿಲ್ಲ. ಅವರು ಶಾಂತವಾಗಿ ಎದ್ದು, ಕೋಣೆಯೊಳಗೆ ಇದ್ದ ಅಲಮಾರಿಯಿಂದ ತಮ್ಮ ಹೊಸದಾಗಿ ಪ್ರಕಟವಾದ 'ಫತ್ಹ್–ಎ–ಇಸ್ಲಾಮ್' ಎಂಬ ಪುಸ್ತಕದ ಒಂದು ಪ್ರತಿಯನ್ನು ತೆಗೆದುಕೊಂಡು ಬಂದು ನನ್ನ ಕೈಗೆ ನೀಡಿ ಹೀಗೆ ಹೇಳಿದರು: 'ಇದನ್ನು ಓದು.' ಡಾಕ್ಟರ್ ಸಾಹಿಬ್ ಹೇಳುತ್ತಿದ್ದರು: ಇದು ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಸತ್ಯತೆಯ ಒಂದು ಸ್ಪಷ್ಟ ಸಾಕ್ಷಿಯಾಗಿದೆ. ಏಕೆಂದರೆ ಒಬ್ಬ ಚಿಕ್ಕ ಬಾಲಕ ಕೇಳಿದ ಸಾಮಾನ್ಯ ಪ್ರಶ್ನೆಯನ್ನೂ ಅವರು ಅತ್ಯಂತ ಗಂಭೀರತೆಯಿಂದ ಪರಿಗಣಿಸಿ, ಅದಕ್ಕೆ ಪುಸ್ತಕದ ಮೂಲಕ ಉತ್ತರ ನೀಡಿದರು. ಬಯಸಿದ್ದರೆ ಅವರು ಯಾವುದಾದರೂ ಒಂದು ಮಾತು ಹೇಳಿ ನನ್ನ ಪ್ರಶ್ನೆಯನ್ನು ಸುಲಭವಾಗಿ ತಳ್ಳಿಹಾಕಬಹುದಾಗಿತ್ತು.

**(27) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಖಾರಿಝ಼ ಅಮೀರ್ ಹುಸೈನ್ ಸಾಹಿಬ್ ಅವರು ನಮಗೆ ಹೀಗೆ ವಿವರಿಸಿದರು: ನಾನು ಹದೀಸ್‌ಗಳಲ್ಲಿ ಓದಿದ್ದೆನು: ಹಝ್ರತ್ ಮುಹಮ್ಮದ್ ಮುಸ್ತಫಾ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಅವರ ಸಹಾಬಾಗಳು, ಬರಕತ್‌ಗಾಗಿ ಹುಝೂರ್ (ಸ.ಅ) ಅವರ ಕೂದಲನ್ನು ತಮ್ಮ ಬಳಿಯಲ್ಲಿ ಸಂರಕ್ಷಿಸುತ್ತಿದ್ದರು. ಆ ವಿಚಾರ ನನ್ನ ಮನಸ್ಸಿನಲ್ಲಿ ಉಳಿದಿತ್ತು. ಒಂದು ದಿನ ನಾನು ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಅವರ ಸೇವೆಯಲ್ಲಿ ವಿನಂತಿಸಿದೆ: ಹುಝೂರ್! ದಯವಿಟ್ಟು ತಮ್ಮ ಕೆಲವು ಕೂದಲನ್ನು ನನಗೆ ಅನುಗ್ರಹಿಸಿರಿ. ಸ್ವಲ್ಪ ಸಮಯದ ನಂತರ ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಅವರು ಕ್ಷೌರ ಮಾಡಿಸಿಕೊಂಡಾಗ, ತಮ್ಮ ಕೆಲವು ಕೂದಲನ್ನು ನನಗೆ ಕಳುಹಿಸಿಕೊಟ್ಟರು. ಈ ವಿನೀತ ಸೇವಕ (ಖಾಕ್ಸಾರ್) ಇದಕ್ಕೆ ಸಂಬಂಧಿಸಿ ಹೀಗೆ ಹೇಳುತ್ತಾನೆ: ನನ್ನ ಬಳಿಯೂ ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಅವರ ಕೆಲವು ಕೂದಲುಗಳು ತಬರುಕ್ (ಬರಕತ್‌ನ ಸ್ಮರಣಿಕೆಯಾಗಿ) ಸಂರಕ್ಷಿತವಾಗಿವೆ.

**(28) ಬಿಸ್ಮಿಲ್ಲಾಹಿರ್ ರಹ್ಮಾನಿರ್ ರಹೀಮ್:** ಖಾರಿಝ಼ ಅಮೀರ್ ಹುಸೈನ್ ಸಾಹಿಬ್ ಅವರು ನಮಗೆ ಹೀಗೆ ವಿವರಿಸಿದರು: ಒಮ್ಮೆ ಮೌಲವಿ ಸಾಹಿಬ್ (ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್ಹು) ಅವರು ಖಾದಿಯಾನ್‌ನ ಹೊರಗೆ ಹೋಗಿದ್ದ ಸಂದರ್ಭದಲ್ಲಿ, ನಾನು ಮಗ್ರಿಬ್ ನಮಾಝ್‌ಗೆ ಮಸೀದಿಗೆ ಬಂದೆ. ಆಗ ಹಝ್ರತ್ ಮಸೀಹ್ ಮೌಊದ್ (ಅಲೈಹಿಸ್ಸಲಾಮ್) ಸ್ವತಃ ಇಮಾಮರಾಗಿ ನಮಾಝ್ ಮುನ್ನಡೆಸುತ್ತಿರುವುದನ್ನು ಕಂಡೆ. ಖಾರಿಝ಼ ಸಾಹಿಬ್ ಹೇಳುತ್ತಾರೆ: ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಅವರು ನಮಾಝಿನಲ್ಲಿ ಎರಡು ಚಿಕ್ಕ ಸೂರಾಗಳನ್ನು ಪಠಿಸಿದರು. ಆದರೆ ಅವರ ಪಠಣದಲ್ಲಿದ್ದ ಆಳವಾದ ಭಾವನೆ, ವಿನಯ, ದುಃಖಭರಿತ ಮನಸ್ಥಿತಿ ಮತ್ತು ಆತ್ಮೀಯ ತೀವ್ರತೆಯ ಪರಿಣಾಮವಾಗಿ, ನಮಾಝಿನಲ್ಲಿ ಭಾಗವಹಿಸಿದ್ದ ಅನೇಕರಿಗೆ ತೀವ್ರ ರಿಕ್ಕತ್ ಉಂಟಾಗಿ, ಅವರ ಬಾಯಿಂದ ಅಳುವ ಧ್ವನಿಗಳು ಕೇಳಿಬರುತ್ತಿದ್ದವು. ನಮಾಝ್ ಮುಗಿದ ನಂತರ ನಾನು ಮುಂದೆ ಹೋದೆ. ನನ್ನನ್ನು ಕಂಡ ತಕ್ಷಣ ಹಝ್ರತ್ ಸಾಹಿಬ್ (ಅಲೈಹಿಸ್ಸಲಾಮ್) ಅವರು ಹೀಗೆ ಹೇಳಿದರು: ಖಾರಿಝ಼ ಸಾಹಿಬ್! ನಾನು ನಿಮ್ಮನ್ನು ಬಹಳ ಹುಡುಕಿದೆ, ಆದರೆ ನೀವು ಕಾಣಿಸಲಿಲ್ಲ. ಈ ನಮಾಝಿನಲ್ಲಿ ನನಗೆ ಬಹಳ ಕಷ್ಟವಾಯಿತು. ಇಶಾ ನಮಾಝನ್ನು ನೀವು ಮುನ್ನಡೆಸಿರಿ. ಈ ವಿನೀತ ಸೇವಕ (ಖಾಕ್ಸಾರ್) ಇದಕ್ಕೆ ಸಂಬಂಧಿಸಿ ಹೀಗೆ ಅರ್ಜ಼ು ಮಾಡುತ್ತಾನೆ: ಈ ಘಟನೆ ಜಮಾಅತ್‌ನ ಆರಂಭಿಕ ದಿನಗಳಲ್ಲಿ ನಡೆದಿರಬಹುದು.

(ಮುಂದುವರಿಯುವುದು)

"ಎಲ್ಲ ಮುಸ್ಲಿಮ್ ಪುರುಷರು ಮತ್ತು ಮುಸ್ಲಿಮ್ ಮಹಿಳೆಯರು ವಿದ್ಯೆ ಕಲಿಯುವುದು ಕಡ್ಡಾಯವಾಗಿದೆ"
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**M.B. Nasir Ahmed Saheb & Family, Bengaluru, Karnataka**

"ಯಾರು ಜನರಿಗೆ ಮೊದಲು ಸಲಾಂ ಹೇಳುತ್ತಾನೋ ಅವನು ಜನರಲ್ಲಿ ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆಯವನು."
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

ದುಆವಿನ ಆಕಾಂಕ್ಷಿ:
**Late S.R Abdur Rauf Saheb & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail:
akhbaarbadarkannadaqdn@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2026-28 Vol No.07, Thursday, 13 August 2026, Issue No. 33

Act. MANAGER
ATHAR AHMAD SHAMIM.
Mobile : +91 99156 39670
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಷ್ಟ್, ಸೆಪ್ಟೆಂಬರ್ 2023

## ಜರ್ಮನಿಯಲ್ಲಿ ನಡೆದ ಜಲ್ಸ ಸಾಲಾನದ ಮಾಧ್ಯಮ ವರದಿಯ ವರದಿ

ಜರ್ಮನಿಯಲ್ಲಿ ನಡೆದ ಜಲ್ಸ ಸಾಲಾನವನ್ನು ಎಲೆಕ್ಟ್ರಾನಿಕ್ ಮತ್ತು ಮುದ್ರಣ ಮಾಧ್ಯಮ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ವರದಿ ಮಾಡಲಾಯಿತು. ವರದಿ ಹೀಗಿದೆ.

### ಟಿವಿ ಚಾನೆಲ್‌ಗಳಲ್ಲಿನ ವರದಿ

ಕೆಳಕಂಡ 4 ಟಿವಿ ಚಾನೆಲ್‌ಗಳು ಜಲ್ಸ ಸಾಲಾನವನ್ನು ವರದಿ ಮಾಡಿದ್ದವು.

ARD RTL
Regio TV SWR

ಈ ಟಿವಿ ಚಾನೆಲ್‌ಗಳ ಒಟ್ಟು ವೀಕ್ಷಕರ ಸಂಖ್ಯೆ 41 ಮಿಲಿಯನ್‌ಗಿಂತಲೂ ಹೆಚ್ಚು.

### ಪತ್ರಿಕೆ ವರದಿ

ಒಟ್ಟು 11 ಜರ್ಮನ್ ಪತ್ರಿಕೆಗಳು ಜಲ್ಸ ಸಾಲಾನದ ಕುರಿತು ವಿವಿಧ ಸುದ್ದಿ ಮತ್ತು ಲೇಖನಗಳನ್ನು ಪ್ರಕಟಿಸಿದವು. ಅವುಗಳಲ್ಲಿ ಜರ್ಮನಿಯ ಅತಿದೊಡ್ಡ ಪತ್ರಿಕೆ ಬಿಲ್ಡ್.

ಇದರ ಜೊತೆಗೆ, ವ್ಯಾಪಕವಾಗಿ ಓದಲ್ಪಡುವ ಮತ್ತು ವಿಶ್ವಾಸಾರ್ಹ ಪತ್ರಿಕೆಗಳೆಂದು ಪರಿಗಣಿಸಲ್ಪಡುವ ಸ್ಟಟ್‌ಗಾರ್ಟರ್ ಜೈಟಂಗ್ ಮತ್ತು ಸುಡ್‌ಡ್ಯೂಷ್ ಜೈಟಂಗ್ ಸಹ ಸುದ್ದಿಗಳನ್ನು ಪ್ರಕಟಿಸಿದವು. ಈ ಪತ್ರಿಕೆಗಳ ಓದುಗರ ಸಂಖ್ಯೆ 50 ಮಿಲಿಯನ್‌ಗಿಂತಲೂ ಹೆಚ್ಚು ಎಂದು ಅಂದಾಜಿಸಲಾಗಿದೆ.

### ಜಲ್ಸ ಸಾಲಾನದ ರೇಡಿಯೋ ವರದಿ

ಕೆಳಗಿನ ಐದು ರೇಡಿಯೋ ಕೇಂದ್ರಗಳು ಜರ್ಮನಿಯಲ್ಲಿ ನಡೆದ ಜಲ್ಸ ಸಾಲಾನವನ್ನು ಸಹ ವರದಿ ಮಾಡಿದ್ದವು.

SWR4 Deutschland Funk
RPR1 Radio Eins
Das Ding

ಈ ರೇಡಿಯೋ ಕೇಂದ್ರಗಳು 14 ಮಿಲಿಯನ್‌ಗಿಂತಲೂ ಹೆಚ್ಚು ಕೇಳುಗರನ್ನು ಹೊಂದಿವೆ ಎಂದು ಅಂದಾಜಿಸಲಾಗಿದೆ.

### ಆನ್‌ಲೈನ್ ಮಾಧ್ಯಮ ವರದಿ

ಆನ್‌ಲೈನ್ ವೇದಿಕೆಗಳಲ್ಲಿ, 1&1 ಡಿ ಮತ್ತು ಶ್ವಾಬಿಷೆ ಸಹ ಜಲ್ಸ ಸಾಲಾನದ ಕುರಿತು ಸುದ್ದಿಗಳನ್ನು ಪ್ರಕಟಿಸಿವೆ. ಈ ವೇದಿಕೆಗಳ ಓದುಗರ ಸಂಖ್ಯೆ 2 ಮಿಲಿಯನ್‌ಗಿಂತಲೂ ಹೆಚ್ಚು ಎಂದು ಅಂದಾಜಿಸಲಾಗಿದೆ.

### ಒಟ್ಟು ಅಂಕಿಅಂಶಗಳು

ಮೇಲ್ಕಂಡ, ಜಲ್ಸ ಸಾಲಾನದ ಕುರಿತು ಸುದ್ದಿಗಳನ್ನು ಹಲವಾರು ಪತ್ರಿಕೆಗಳು ಮತ್ತು ಟಿವಿ ಚಾನೆಲ್‌ಗಳಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಪ್ರಸಾರ ಮಾಡಲಾಗಿದೆ. ಆದಾಗ್ಯೂ, ಈ ಮಾಧ್ಯಮಗಳಿಂದ ಪ್ರಯೋಜನ ಪಡೆದ ಜನರ ಸಂಖ್ಯೆಯನ್ನು ಒಮ್ಮೆ ಮಾತ್ರ ಎಣಿಸಲಾಗಿದೆ. ಹೀಗಾಗಿ, ಜಲ್ಸ ಸಾಲಾನದ ವರದಿಯು ಮಾಧ್ಯಮಗಳ ಮೂಲಕ 108 ಮಿಲಿಯನ್‌ಗಿಂತಲೂ ಹೆಚ್ಚು ಜನರನ್ನು ತಲುಪಿತು.

ಇದಲ್ಲದೆ, ಸೆಪ್ಟೆಂಬರ್ 1 ರ ಶುಕ್ರವಾರದಂದು ಜಲ್ಸ ಸಾಲಾನದ ಸಂದರ್ಭದಲ್ಲಿ ಪತ್ರಿಕಾಗೋಷ್ಠಿಯನ್ನು ಆಯೋಜಿಸಲಾಗಿತ್ತು, ಇದರಲ್ಲಿ ವಿವಿಧ ಮಾಧ್ಯಮಗಳನ್ನು ಪ್ರತಿನಿಧಿಸುವ ಪತ್ರಕರ್ತರು ಭಾಗವಹಿಸಿದ್ದರು.

### ಸೋಮವಾರ, ಸೆಪ್ಟೆಂಬರ್ 4, 2023

ಹುಝೂರ್ ಅನ್ವರ್(ಅತಬಿಅ) ಮುಂಜಾನೆ 5:50 ಕ್ಕೆ ಆಗಮಿಸಿ ಫಜ್ರ್ ನಮಾಝಿನ ಇಮಾಮತ್ ವಹಿಸಿದರು. ನಮಾಝ್ ನಿರ್ವಹಿಸಿದ ನಂತರ, ಹುಝೂರ್ ಅನ್ವರ್(ಅತಬಿಅ) ತಮ್ಮ ನಿವಾಸಕ್ಕೆ ಹೋದರು. ಬೆಳಿಗ್ಗೆ, ಹುಝೂರ್ ಅನ್ವರರ್(ಅತಬಿಅ) ಕಚೇರಿಯ ಮೇಲ್, ಪತ್ರಗಳು ಮತ್ತು ವರದಿಗಳನ್ನು ಪರಿಶೀಲಿಸಿದರು ಮತ್ತು ಸೂಚನೆಗಳನ್ನು ನೀಡಿದರು. ಹುಝೂರ್ ಅನ್ವರ್(ಅತಬಿಅ) ವಿವಿಧ ಕಚೇರಿ ವಿಷಯಗಳನ್ನು ನಿರ್ವಹಿಸುವಲ್ಲಿ ನಿರತರಾಗಿದ್ದರು. ಇಂದು, ಕಾರ್ಯಕ್ರಮದ ಪ್ರಕಾರ, ವಿವಿಧ ದೇಶಗಳ ನಿಯೋಗಗಳು ಹುಝೂರ್ ಅನ್ವರ್(ಅತಬಿಅ) ಅವರನ್ನು ಭೇಟಿಯಾದರು.

### ಕಝಾಕಿಸ್ತಾನ್, ಕಿರ್ಗಿಸ್ತಾನ್ ಮತ್ತು ಉಜ್ಬೇಕಿಸ್ತಾನ್ ನಿಯೋಗಗಳ ಸಭೆ

ಹುಝೂರ್ ಅನ್ವರ್(ಅತಬಿಅ) ಬೆಳಿಗ್ಗೆ 10:35 ಕ್ಕೆ ಮಸೀದಿಯ ಪುರುಷರ ಸಭಾಂಗಣಕ್ಕೆ ಬಂದರು, ಅಲ್ಲಿ ಕಝಾಕಿಸ್ತಾನ್, ಕಿರ್ಗಿಸ್ತಾನ್ ಮತ್ತು ಉಜ್ಬೇಕಿಸ್ತಾನ್ ನಿಯೋಗಗಳ ಸಾಮೂಹಿಕ ಸಭೆ ನಡೆಯಿತು.

ಹುಝೂರ್ ಅನ್ವರ್(ಅತಬಿಅ) ನಿಮ್ಮ ಜಲ್ಸ ಹೇಗೆ ನಡೆಯಿತು ಎಂದು ಕೇಳಿದರು, ನೀವು ಏನನ್ನಾದರೂ ಕಲಿತಿದ್ದೀರಾ, ನೀವು ಏನು ನೋಡಿದ್ದೀರಿ? ಇದರ ಬಗ್ಗೆ, ಕಝಾಕಿಸ್ತಾನ್‌ನ ಸ್ನೇಹಿತರೊಬ್ಬರು ಇದು ನನ್ನ ನಾಲ್ಕನೇ ವಾರ್ಷಿಕ ಜಲ್ಸ ಎಂದು ಹೇಳಿದರು. ನಾನು ಖಾದಿಯಾನ್‌ನ ಜಲ್ಸದಲ್ಲಿಯೂ ಭಾಗವಹಿಸಿದ್ದೇನೆ ಮತ್ತು ಯುಕೆ ಜಲ್ಸದಲ್ಲಿಯೂ ಭಾಗವಹಿಸಿದ್ದೇನೆ. ಸರ್ವಶಕ್ತನಾದ ಅಲ್ಲಾಹನು ನನಗೆ ಈಗ ಇಲ್ಲಿ ಅವಕಾಶ ನೀಡಿದ್ದಾನೆ. ಜಲ್ಸದ ವ್ಯವಸ್ಥೆಗಳಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ವ್ಯವಸ್ಥೆಗಳನ್ನು ಮಾಡಲಾಯಿತು. ಮೂರು ದಿನಗಳು ಬಹಳ ಬೇಗನೆ ಕಳೆದವು. ನಾವು ಅನುಭವಿಸುತ್ತಿದ್ದ ಆನಂದ. ಈಗ ಅದು ಶೀಘ್ರದಲ್ಲೇ ಕೊನೆಗೊಳ್ಳುತ್ತದೆ.

ಕಿರ್ಗಿಸ್ತಾನ್‌ನ ಅತಿಥಿಯೊಬ್ಬರು ನಾನು ಭಾಗವಹಿಸಿದ ನನ್ನ ಮೊದಲ ಜಲ್ಸ ಸಾಲಾನ ಇದಾಗಿದೆ ಎಂದು ಹೇಳಿದರು. ನಾನು ಹುಝೂರ್ ಅನ್ವರ್(ಅತಬಿಅ) ಅವರ ಹಿಂದೆ ನಮಾಝನ್ನು ನಿರ್ವಹಿಸಿದಾಗ, ನಾನು ತುಂಬಾ ಅಳಲು ಪ್ರಾರಂಭಿಸಿದೆ. ಏನೋ ನನ್ನನ್ನು ಸುತ್ತುವರೆದಿರುವಂತೆ ಭಾಸವಾಯಿತು. ನಾನು ಎಂದಿಗೂ ಅಂತಹ ನಮಾಝ್ ನಾನು ಎಂದಿಗೂ ನಿರ್ವಹಿಸಲಿಲ್ಲ. ಅವರು ತನಗಾಗಿ ಮತ್ತು ಹುತಾತ್ಮರ ಕುಟುಂಬಕ್ಕಾಗಿ ಪ್ರಾರ್ಥಿಸಲು ಕೇಳಿಕೊಂಡರು.

ಪ್ರಶ್ನೆಯಲ್ಲಿರುವ ವ್ಯಕ್ತಿಯ ಮಾತುಗಳನ್ನು ಕಿರ್ಗಿಸ್ತಾನ್ ಮುರಬ್ಬಿ ಗಿಯಾಸ್ ಬೇಗ್ ಸಾಹಿಬ್ ಅವರು ಉರ್ದುಗೆ ಅನುವಾದಿಸುತ್ತಿದ್ದರು. ಅವರು ಘಾನಾದ ಜಾಮಿಯಾ ಅಹ್ಮದಿಯಾ ಇಂಟರ್ನ್ಯಾಷನಲ್‌ನಿಂದ ಶಾಹಿದ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಈಗ ನೀವು ಇಲ್ಲಿಯೂ ಉರ್ದು ಕಲಿಯಬೇಕು ಎಂದು ಹುಝೂರ್ ಅನ್ವರ್(ಅತಬಿಅ) ಹೇಳಿದರು. ಹಝ್ರತ್ ಮಸೀಹ್ ಮೌಊದ್(ಅ) ಅವರ ಮಲ್ಫೂಝಾತ್ ಅನ್ನು ಓದಿ. ಪ್ರತಿದಿನ ಕೆಲವು ಪುಟಗಳನ್ನು ಓದಿ ಮತ್ತು ನಿಮ್ಮ ಉರ್ದುವನ್ನು ಇನ್ನಷ್ಟು ಸುಧಾರಿಸಿ.

ಒಬ್ಬ ಸ್ನೇಹಿತ ಇಲ್ಯಾಸ್ ಸಾಹಿಬ್ ತನ್ನ ಮಗನಿಗೆ ಹೆಸರಿಡಲು ವಿನಂತಿಸಿದರು. ಇದರ ಬಗ್ಗೆ ಹುಝೂರ್ ಅನ್ವರ್(ಅತಬಿಅ) ಹೇಳಿದರು, "ಅವರಿಗೆ ಮಹ್ಮೂದ್ ಎಂದು ಹೆಸರಿಡಿ."

ಕಿರ್ಗಿಸ್ತಾನದ ಒಬ್ಬ ಸ್ನೇಹಿತ ಹುಝೂರ್ ಅನ್ವರ್(ಅತಬಿಅ) ಅವರಿಗೆ ನಾನು ಈ ಜಲ್ಸಕ್ಕೆ ಎರಡನೇ ಬಾರಿಗೆ ಹಾಜರಾಗಿದ್ದೇನೆ ಎಂದು ಹೇಳಿದರು. ನನ್ನ ಭಾವನೆಗಳು ತುಂಬಾ ತೀವ್ರವಾಗಿವೆ, ನಾನು ಅವುಗಳನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ. ನಾನು ಕಿರ್ಗಿಸ್ತಾನ್ ಜಮಾಅತ್ ಪರವಾಗಿ ನನ್ನ ಸಲಾಮ್ ಅನ್ನು ಸಲ್ಲಿಸುತ್ತೇನೆ ಮತ್ತು ನಿಮ್ಮ ಪ್ರಾರ್ಥನೆಗಳನ್ನು ಕೋರುತ್ತೇನೆ. ಹುಝೂರ್ ಅನ್ವರ್(ಅತಬಿಅ) ಹೇಳಿದರು, "ಅಲ್ಲಾಹನು ನಿಮ್ಮನ್ನು ಅನುಗ್ರಹಿಸಲಿ."

(ಮುಂದುವರಿಯುವುದು)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.